ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 19 ಗುರುವಾರ 2026

ಸಂಪುಟ: 46 | ಸಂಚಿಕೆ: 328 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 19 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 328 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಹನಗೋಡು ಸುತ್ತಮುತ್ತ ಭಾರೀ ಆಲಿಕಲ್ಲು ಮಳೆ; ದಟ್ಟ ಹಿಮಪಾತ ದೃಶ್ಯ

- ಧರೆಗುರುಳಿದ ವಿದ್ಯುತ್ ಕಂಬಗಳು, ತೆಂಗು, ಅಡಿಕೆ ಮರಗಳು
- ಹಾರಿಹೋದ ಮನೆ ಛಾವಣಿ, ಶಾಲೆಯ ಹೆಂಚುಗಳು
- ಮರದ ಕೊಂಬೆ ಬಿದ್ದು ವ್ಯಕ್ತಿಗೆ ಗಾಯ • ಅಪಾರ ನಷ್ಟ

ಹನಗೋಡು, ಮಾ.18– ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಬುಧವಾರ ಸಂಜೆ ಸುರಿದ ಬಿರುಗಾಳಿ, ಗುಡುಗು ಸಹಿತ ಭಾರೀ ಗಾತ್ರದ ಆಲಿಕಲ್ಲು ಮಳೆಗೆ ಅಪಾರ ಹಾನಿ ಸಂಭವಿಸಿದೆ.

ಹುಣಸೂರು ನಗರದಲ್ಲಿ ಸಾಧಾರಣ ತುಂತುರು ಮಳೆಯಾದರೆ, ತಾಲೂಕಿನ ಹನಗೋಡು ಹೋಬಳಿಯ ಗ್ರಾಮಗಳಲ್ಲಿ ಭಾರೀ ಆಲಿಕಲ್ಲು ಮಳೆಗೆ ವಿದ್ಯುತ್ ಕಂಬ, ತೆಂಗಿನ ಮರ, ಅಡಿಕೆ ಮರಗಳು ಧರೆಗುರುಳಿದ್ದು, ರೈತರು ಬೆಳೆದಿದ್ದ ಬೆಳೆ ಹಾನಿಯಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಭಾರೀ ಮಳೆಗೆ ಹನಗೋಡಿನ ಹರಿಜನ ಬಡಾವಣೆಯ ಇಟ್ಟಿಗೆ ಮಲ್ಲೇಶ್ ಅವರ ಮನೆ ಮುಂದೆ ಇದ್ದ ವಿದ್ಯುತ್ ಕಂಬ, ತೆಂಗಿನಮರ ರಸ್ತೆಗೆ ಉರುಳಿ ಬಿದ್ದಿದ್ದರಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಅಲ್ಲದೇ ಆಗಬಹುದಾದ ಭಾರೀ ಅನಾಹುತ ತಪ್ಪಿದೆ ಎನ್ನಲಾಗಿದೆ. ಅಲ್ಲದೇ ಗ್ರಾಮದ ಅನೇಕ ತೋಟಗಳಲ್ಲಿ ತೆಂಗು, ಅಡಿಕೆ ಮರ, ಬಾಳೆ ಗಿಡಗಳು ಧರೆಗುರುಳಿವೆ.



ಇನ್ನು ಹುಣಸೂರು ವಿಭಾಗದಲ್ಲಿ 46ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಉರುಳಿ ಬಿದ್ದಿದ್ದು, 2 ಟಿಸಿಗೆ ಹಾನಿಯಾಗಿದೆ ಎನ್ನಲಾಗಿದೆ.

ದಾಸನಪುರದಲ್ಲಿ ಶಾಲೆ, ಮನೆಗಳಿಗೆ ಹಾನಿ: ಇಲ್ಲಿಗೆ ಸಮೀಪದ ದಾಸನಪುರದಲ್ಲಿ ಸುರಿದ ಬಿರುಗಾಳಿ ಸಹಿತ ಭಾರೀ ಗಾತ್ರದ ಆಲಿಕಲ್ಲು ಮಳೆಗೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಹೆಂಚುಗಳು ಹಾರಿ ಹೋಗಿವೆ. ಅಲ್ಲದೇ ಗ್ರಾಮದ ನಿವಾಸಿಗಳಾದ ಸೋಮಯ್ಯ, ಶೇಖರ್, ಮಾದೇಗೌಡ, ಗಣೇಶ್, ಪ್ರಕಾಶ್, ಸೋಮಶೇಖರ್, ಕುಮಾರ್, ಮಧು, ಮಲಿಯಯ್ಯ, ರವಿ ಸೇರಿದಂತೆ ಇತರರ ಮನೆಗಳ ಹೆಂಚುಗಳು ಸಹ ಹಾರಿ ಹೋಗಿದೆ. ಇದರಿಂದಾಗಿ ಮನೆಯಲ್ಲಿದ್ದ ಬೆಲೆ ಬಾಳುವ ವಸ್ತುಗಳು, ದಿನಸಿ ಪದಾರ್ಥಗಳು ಸೇರಿದಂತೆ ದಿನ ಬಳಕೆಯ ವಸ್ತುಗಳು ನೀರಿನಲ್ಲಿ ತೋಯ್ದು ಹಾನಿಗೊಳಗಾಗಿವೆ. ಅಲ್ಲದೇ ಜಮೀನುಗಳಲ್ಲಿದ್ದ ಮರಗಳು ಧರೆಗುರುಳಿವೆ. ಮರದ ಕೆಳಗೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳ ಮೇಲೆ ಕೊಂಬೆಗಳು ಬಿದ್ದು ಜಖಂಗೊಂಡಿವೆ. ಕಿರಂಗೂರಿನಲ್ಲಿ ಸ್ವಾಮಿಗೌಡರ ಮನೆ ಹೆಂಚುಗಳು

■ 10ನೇ ಪುಟಕ್ಕೆ

ಇಂದು ಶಾಸಕರ ಭೇಟಿ

ಮಳೆಯಿಂದ ಹಾನಿಗೊಳಗಾದ ಗ್ರಾಮಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುರುವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸುವುದಾಗಿ ತಿಳಿಸಿದ್ದಾರೆ.



ಶುಭಾಶಯಗಳು



ನಾಡಿನ ಸಮಸ್ತರಿಗೂ ಯುಗಾದಿ ಹಬ್ಬದ ಶುಭಾಶಯಗಳು


ಬಿಡುವು

ಯುಗಾದಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 20–03–2026ರ ಶುಕ್ರವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಇನ್ನು ಮನೆಯಲ್ಲೇ ಕುಳಿತು ಪಡೆಯಬಹುದು ಜಾತಿ, ಆದಾಯ ಪ್ರಮಾಣಪತ್ರ

ಪರಿಷತ್‌ನಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಘೋಷಣೆ



ಬೆಂಗಳೂರು, ಮಾ. 18(ಕೆಎಂಶಿ)– ಜಾತಿ– ಆದಾಯ ಪ್ರಮಾಣಪತ್ರಗಳನ್ನು ಮನೆಯಲ್ಲೇ ಕುಳಿತು ಪಡೆದುಕೊಳ್ಳುವ ವ್ಯವಸ್ಥೆಯನ್ನು ಶೀಘ್ರದಲ್ಲೇ ಜಾರಿಗೊಳಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನ ಪರಿಷತ್ತಿನಲ್ಲಿಂದು ಘೋಷಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಕೆ.ಅಬ್ದುಲ್ ಜಬ್ಬಾರ್, ರಾಮೋಜಿಗೌಡ ಅವರ ಪ್ರತ್ಯೇಕ ಪ್ರಸ್ತಾವಗಳಿಗೆ ಉತ್ತರಿಸಿದ ಸಚಿವರು, ಪ್ರಮಾಣ ಪತ್ರಗಳನ್ನು ಸ್ವಯಂಚಾಲಿತವಾಗಿ ನೀಡಲು ಕಳೆದ ಒಂದು ವರ್ಷದಿಂದ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಕುಟುಂಬ ಡೇಟಾ ಬೇಸ್‌ನಲ್ಲಿ ಮನೆ ವಿಳಾಸ, ಜಾತಿ–ಆದಾಯ ಮಾಹಿತಿ ಒಳಗೊಂಡಿರುತ್ತದೆ. ಅಲ್ಲಿಂದ ಡೇಟಾಗಳನ್ನು ಸ್ವೀಕರಿಸಿ ಪ್ರಮಾಣಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.



ಜನಸಾಮಾನ್ಯರು ನಮ್ಮ ಕಚೇರಿಗೆ ಆಗಮಿಸಿದರೆ ಸಮಸ್ಯೆಗಳು ಉಂಟಾಗುತ್ತವೆ ಎಂಬ ಅಪವಾದದ ಹಿನ್ನೆಲೆಯಲ್ಲಿ ಮನೆಯಿಂದಲೇ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುವುದು. ಅರ್ಜಿ ಸಲ್ಲಿಸಿದ ಪ್ರತಿ ಹಂತ ದಾಟುವಾಗಲೂ ಅದರ ಮಾಹಿತಿಯನ್ನು ಮೆಸೇಜ್ ಮೂಲಕ ಸಂದೇಶ ರವಾನೆ ಮಾಡಲಾಗುವುದು.

ಕಳೆದ ವರ್ಷ ವಿವಿಧ ಸೇವೆಗಳಿಗಾಗಿ ನಾಡ ಕಚೇರಿಗೆ ಸುಮಾರು 1.6 ಕೋಟಿ ಅರ್ಜಿಗಳು ಸಲ್ಲಿಕೆಯಾಗಿದ್ದವು. ಅದರಲ್ಲಿ 98 ಲಕ್ಷ ಅರ್ಜಿಗಳಿಗೆ ಸಕಾಲದಲ್ಲಿ ಸೇವೆ ನೀಡಲಾಗಿದೆ. ನಾಡ ಕಚೇರಿ ಹಾಗೂ ತಹಸೀಲ್ದಾರ್ ಕಚೇರಿಗಳಲ್ಲಿ ಜನರಿಗೆ ಎಲ್ಲಾ ಸೇವೆಗಳು ತ್ವರಿತವಾಗಿ ಲಭ್ಯವಾಗುವಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದೆ ಎಂದರು.

ಸ್ವಯಂ ಚಾಲಿತ ಖಾತೆ ಬದಲಾವಣೆ: ಆಸ್ತಿ ನೋಂದಣಿ ನಂತರ ಖಾತೆಗಳು ಸ್ವಯಂ ಚಾಲಿತವಾಗಿ ಬದಲಾವಣೆಯಾಗಲು ಆಟೋ ಮ್ಯುಟೇಶನ್ ವ್ಯವಸ್ಥೆ ಜಾರಿಗೆ ತಂದಿದ್ದು, ಪ್ರಸ್ತುತ ಶೇ.98ರಷ್ಟು ಖಾತೆಗಳು ಸ್ವಯಂ ಚಾಲಿತವಾಗಿ ಬದಲಾವಣೆಯಾಗುತ್ತಿವೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

■ 10ನೇ ಪುಟಕ್ಕೆ

ಮರ್ಯಾದಾ ಹತ್ಯೆ ನಿಷೇಧ ಮಸೂದೆ ಮಂಡನೆ

ಬೆಂಗಳೂರು: ಅಂತರ್ಜಾತಿ ವಿವಾಹಕ್ಕೆ ಅಡ್ಡಿಪಡಿಸುವುದು, ಮರ್ಯಾದೆಯ ಹೆಸರಿನಲ್ಲಿ ಹತ್ಯೆಯಂತಹ ಪ್ರಕರಣಗಳಿಗೆ ಅಂತ್ಯ ಹಾಡುವ ನಿಟ್ಟಿನಲ್ಲಿ ಮರ್ಯಾದಾ ಹತ್ಯೆ ನಿಷೇಧ ಮಸೂದೆಯನ್ನು ವಿಧಾನಸಭೆಯಲ್ಲಿ ಬುಧವಾರ ಸಚಿವ ಪ್ರಿಯಾಂಕ್ ಖರ್ಗೆ ಮಂಡಿಸಿದರು.

ವಿವಾಹದಲ್ಲಿ ಆಯ್ಕೆ ಸ್ವಾತಂತ್ರ್ಯ, ಜಾತಿ ಆಧಾರಿತ ಅಪರಾಧಗಳ ತಡೆ ಹಾಗೂ ನಿಷೇಧಕ್ಕೆ ಈ ಮಸೂದೆ ಮಂಡನೆ ಮಾಡಲಾಗಿದೆ. ಜಾತಿ ಆಧಾರಿತ ಅಪರಾಧಗಳ ಮೂಲಕ ಮಾನವಹಕ್ಕು ಉಲ್ಲಂಘನೆ ತಡೆಯಲು, ಅಂತರ್ಜಾತಿ ವಿವಾಹಗಳನ್ನು ಮಾನ್ಯ ಮಾಡಲು, ವೈಯಕ್ತಿಕ ಆಯ್ಕೆಗಳ ಮೇಲೆ ಜಾತಿ ಆಧಾರಿತ ಬಲವಂತದ ಭೇದ–ಭಾವವನ್ನು ತಡೆಯುವ ಸಲುವಾಗಿ ಮಸೂದೆ ರೂಪಿಸಲಾಗಿದೆ. ಈ ಮೂಲಕ ಇವ ನಮ್ಮವ ಇವ ನಮ್ಮವ ವೇದಿಕೆ ಸ್ಥಾಪನೆಗೆ ಅವಕಾಶ ಇದೆ

ಅಂತರ್ಜಾತಿ ವಿವಾಹ: ರಾಜ್ಯದಲ್ಲಿ ಜಾತಿ ಆಧಾರಿತ ಭೇದ–ಭಾವ ಕ್ರೂರ ಹಿಂಸಾಚಾರದ ರೂಪದಲ್ಲಿ ವ್ಯಕ್ತವಾಗುತ್ತಿದೆ. ಇಂತಹ ವಿವಾಹಗಳು ನಡೆದ ಸಂದರ್ಭದಲ್ಲಿ ಮರ್ಯಾದೆ ಹತ್ಯೆಗಳಂತಹ ಅಪರಾಧಗಳು ನಡೆಯುತ್ತಿವೆ. ಇವು ನಡೆಯದಂತೆ ತಡೆಯುವ ನಿಟ್ಟಿನಲ್ಲಿ ಕಾನೂನು

■ 10ನೇ ಪುಟಕ್ಕೆ

ಇಸ್ರೇಲ್–ಅಮೆರಿಕಾ V/s ಇರಾನ್ ವಾರ್–19

ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕ ಬಾಂಬ್ ಸುರಿಮಳೆ

ಟೆಹ್ರಾನ್, ಮಾ.18– ಇರಾನ್–ಇಸ್ರೇಲ್, ಅಮೆರಿಕ ಯುದ್ಧ 19ನೇ ದಿನಕ್ಕೆ ಕಾಲಿಟ್ಟಿದೆ. ಇರಾನ್ ಹಿಡಿತದಲ್ಲಿದ್ದ ಜಗತ್ತಿನ ಪ್ರಮುಖ ಹಾರ್ಮುಜ್ ಜಲಸಂಧಿ ಬಳಿ ಅಮೆರಿಕ ತೀವ್ರ ದಾಳಿ ನಡೆಸಿದೆ. ಜಲಮಾರ್ಗದ ಬಳಿಕ ಇರಾನಿನ ಕ್ಷಿಪಣಿ ತಾಣಗಳನ್ನು ಹೊಡೆದುರುಳಿಸಿರುವುದಾಗಿ ಅಮೆರಿಕ ಸೇನೆ ತಿಳಿಸಿದೆ.



ಹಾರ್ಮುಜ್ ಜಲಸಂಧಿ ಬಳಿಯ ಇರಾನ್‌ನ ಕರಾವಳಿಯುದ್ದಕ್ಕೂ ಇದ್ದ ಕ್ಷಿಪಣಿ ತಾಣಗಳ ಮೇಲೆ ಅಮೆರಿಕ 5,000 ಪೌಂಡ್ ಬಂಕರ್ ಬಸ್ಟರ್ ಬಾಂಬ್ ಸುರಿಮಳೆ ಸುರಿಸಿದೆ. ನಿರ್ಣಾಯಕ ಜಲಮಾರ್ಗವನ್ನು ಮತ್ತೆ ತೆರೆಯುವ ಉದ್ದೇಶದಿಂದ ಅಮೆರಿಕ ಶಸ್ತ್ರಾಗಾರದಲ್ಲಿರುವ ಕೆಲವು ಶಕ್ತಿಶಾಲಿ ಬಾಂಬ್‌ಗಳ ದಾಳಿ ನಡೆಸಿದೆ.


ಈ ತಾಣಗಳಲ್ಲಿರುವ ಇರಾನಿನ ಹಡಗು ವಿರೋಧಿ ಕ್ರೂಸ್ ಕ್ಷಿಪಣಿಗಳು ಜಲಸಂಧಿಯಲ್ಲಿ ಅಂತರರಾಷ್ಟ್ರೀಯ ಹಡಗು ಸಾಗಣೆಗೆ ಅಪಾಯವನ್ನುಂಟು ಮಾಡಿದ್ದವು. ಹೀಗಾಗಿ, ಅವುಗಳನ್ನು ಹೊಡೆದುರುಳಿಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ.

■ 10ನೇ ಪುಟಕ್ಕೆ

ಗ್ರಾಮೀಣ ಸಾರಿಗೆಗೆ ಸಹಕಾರಿಯಾಗಿ

6000 ಬಸ್‌ಗಳ ಖರೀದಿ

ಬೆಂಗಳೂರು, ಮಾ. 18(ಕೆಎಂಶಿ)– ಗ್ರಾಮೀಣ ಸಾರಿಗೆಗೆ ಒತ್ತು ನೀಡುವ ಉದ್ದೇಶದಿಂದ ಹೊಸದಾಗಿ 6,000 ಬಸ್‌ಗಳನ್ನು ಖರೀದಿಸಲಾಗುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ. ಹೊಸ ಬಸ್ ಖರೀದಿಗೆ ಟೆಂಡರ್ ಕರೆಯಲಾಗಿದ್ದು, ಎಲ್ಲೆಲ್ಲಿ ಕೊರತೆ ಇದೆಯೋ ಅಂತಹ ಕಡೆ ಆದ್ಯತೆ ಮೇರೆಗೆ ಬಸ್‌ಗಳನ್ನು ಒದಗಿಸಲಾಗುವುದು ಎಂದರು.



ಪ್ರಶ್ನೋತ್ತರ ವೇಳೆಯಲ್ಲಿ ಭಾರತಿ ಶೆಟ್ಟಿ ಹಾಗೂ ಗೋವಿಂದ್ ರಾಜ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬಸ್ ಖರೀದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 2 ಸಾವಿರ ಕೋಟಿ ರೂ. ಸಾಲ ಕೊಟ್ಟಿದ್ದಾರೆ, ಕೆಎಸ್‌ಆರ್‌ಟಿಸಿ ತೀರಿಸುತ್ತಿದೆ. ಇಲಾಖೆಯಲ್ಲಿ ಒಟ್ಟು 6 ಸಾವಿರ ಕೋಟಿ ರೂ. ಸಾಲ ಇದೆ, ಇದನ್ನೂ ಸರ್ಕಾರವೇ ತೀರಿಸಲಿದೆ ಎಂದರು. ಹಿಂದಿನ ಸರ್ಕಾರ ಬಸ್ ಖರೀದಿ ಮಾಡಿರಲಿಲ್ಲ. ನೇಮಕಾತಿ ಆಗಿರಲಿಲ್ಲ. ನಮ್ಮ ಸರ್ಕಾರ ಸುಮಾರು 6 ಸಾವಿರ ಹೊಸ ಬಸ್ ನಾವು ಖರೀದಿ ಮಾಡಿದೆ ಎಂದರು.

ಬೆಂಗಳೂರು ಮಾದರಿ ಮೈಸೂರು ನೀರು ಸರಬರಾಜು, ಒಳಚರಂಡಿ ಮಂಡಳಿ ಸ್ಥಾಪಿಸಿ

ವಿಧಾನಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಆಗ್ರಹ

- ಮಂಡಳಿ ಸ್ಥಾಪಿಸಿದರೆ ಕುಡಿಯುವ ನೀರಿನ ಸಮಸ್ಯೆಯೂ ನೀಗುತ್ತದೆ; ಹದಗೆಟ್ಟಿರುವ ಒಳಚರಂಡಿ ಸಮಸ್ಯೆಗೂ ಪರಿಹಾರ ಸಾಧ್ಯವಾಗುತ್ತದೆ
- ಕಾವೇರಿ, ಕಬಿನಿಯಿಂದ ಸಮರ್ಪಕ ನೀರು ಸರಬರಾಜು ಮಾಡಬಹುದು; ಈಗ ಜನ ಫ್ಲೋರೈಡ್ ಮಿಶ್ರಿತ ಬೋರ್‌ವೆಲ್ ನೀರು ಕುಡಿಯುವುದು ತಪ್ಪುತ್ತದೆ

ಬೆಂಗಳೂರು, ಮಾ.18– ಮೈಸೂರಿನ ಕುಡಿಯುವ ನೀರು ಹಾಗೂ ಒಳಚರಂಡಿ ಸಮಸ್ಯೆ ಪರಿಹಾರಕ್ಕೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮಾದರಿಯಲ್ಲಿ ಮೈಸೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸ್ಥಾಪಿಸಬೇಕೆಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ವಿಧಾನಸಭೆಯಲ್ಲಿ ಇಂದು ಮಾತನಾಡಿದ ಅವರು, ಮೈಸೂರು ನಗರವನ್ನು ಕಾಡುತ್ತಿರುವ ಕುಡಿಯುವ ನೀರು ಮತ್ತು ಒಳಚರಂಡಿ ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ಸರ್ಕಾರದ ಗಮನ ಸೆಳೆದರು. ಬೆಂಗಳೂರು ಮಾದರಿಯಲ್ಲಿ ಮೈಸೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸ್ಥಾಪನೆ ಮಾಡಬೇಕು. ಇದರಿಂದ ಗ್ರೇಟರ್ ಮೈಸೂರು ವ್ಯಾಪ್ತಿಯ ಎಲ್ಲಾ ಬಡಾವಣೆಗಳಿಗೂ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡಬಹುದು. ಅಲ್ಲದೆ ಹದಗೆಟ್ಟಿರುವ ಒಳ ಚರಂಡಿ ಸಮಸ್ಯೆಯನ್ನು ಕೂಡ ಪರಿಹರಿಸಬಹುದು ಎಂದು



ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ನಾನು ಪ್ರತಿನಿಧಿಸುತ್ತಿರುವ ಚಾಮುಂಡೇಶ್ವರಿ ಕ್ಷೇತ್ರ ಒಂದರಲ್ಲೇ ಸಾವಿರಕ್ಕೂ ಹೆಚ್ಚು ಬಡಾವಣೆಗಳಿವೆ. ಆದರೆ ಕಳೆದ 25 ವರ್ಷಗಳಿಂದ ಇಲ್ಲಿನ ಜನರು ಫ್ಲೋರೈಡ್ ಮಿಶ್ರಿತ ಬೋರ್‌ವೆಲ್ ನೀರನ್ನು ಸೇವಿಸುತ್ತಿದ್ದಾರೆ. ಈಗ ಮಂಡಳಿ ಸ್ಥಾಪಿಸಿದರೆ ಕಾವೇರಿ ಹಾಗೂ ಕಬಿನಿಯಿಂದ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡಬಹುದು ಎಂದು ಹೇಳಿದರು.

ಈ ಬಡಾವಣೆಗಳ ಜನರು ಮನೆ ಕಂದಾಯ, ವಿದ್ಯುತ್ ಶುಲ್ಕ, ಕುಡಿಯುವ ನೀರಿನ ಶುಲ್ಕ ಸೇರಿದಂತೆ ಇತರೆ ತೆರಿಗೆಗಳನ್ನು ಸಕಾಲಕ್ಕೆ ಪಾವತಿ ಮಾಡುತ್ತಿದ್ದಾರೆ. ಆದರೆ ಮೂಲಭೂತ ಸೌಕರ್ಯ ಕಲ್ಪಿಸಿಲ್ಲ. ಅಲ್ಲದೆ ಮೂಲಭೂತ ಸೌಕರ್ಯಗಳಿಲ್ಲದ ಖಾಸಗಿ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಲಾಗಿದೆ. ಸರ್ಕಾರ ಸುಧಾರಣೆಗೆ ಈ ಕ್ರಮ ಕೈಗೊಂಡಿದ್ದರೂ ಸಮಸ್ಯೆ ಮಾತ್ರ ಹಾಗೆ ಇದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ತವರು ಜಿಲ್ಲೆಯಲ್ಲಿ ಮೈಸೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಸ್ಥಾಪನೆಗೆ ಅನುಮೋದನೆ ನೀಡಬೇಕು. ಈ ಮೂಲಕ ಮೈಸೂರು ನಗರದ ಜನರನ್ನು ಕಾಡುತ್ತಿರುವ ಕುಡಿಯುವ ನೀರು ಹಾಗೂ ಒಳ ಚರಂಡಿ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು ಎಂದು ಮನವಿ ಮಾಡಿದರು.

■ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಜೈಲರ್ : ನಾಳೆ ನಿನ್ನನ್ನು ಗಲ್ಲಿಗೇರಿಸುತ್ತೇವೆ. ನಿನ್ನ ಕೊನೆ ಆಸೆ ಏನು?

ಖೈದಿ : ತಲೆ ಕೆಳಗೆ ಮಾಡಿ, ಕಾಲು ಮೇಲೆ ಮಾಡಿ ನೇಣು ಹಾಕಿ!

ಮೈಸೂರು ಮಿತ್ರ

ಗುರುವಾರ, ಮಾರ್ಚ್ 19, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜೀವ ಹೋಗೋ ಸ್ಥಿತಿ ಬಂದ್ರುನೂ
ತಾಳ್ಮೆ ಮಾತ್ರ ಕಳ್ಕೋಬೇಡ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಆಡಿದರೆ ಮುತ್ತಿನ ಹಾರದಂತಿರಬೇಕು.

ನಿಮ್ಮ ಪತ್ರಗಳು

ಸಭಾಧ್ಯಕ್ಷರ ಸಭಾತ್ಯಾಗ : ಸರ್ಕಾರದ ನಿರ್ಲಕ್ಷ್ಯಕ್ಕೊಂದು ನಿದರ್ಶನದ ಘಟನೆ

ಮಾನ್ಯರೆ,

ಶಾಸಕರ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಸಚಿವರು ವಿಫಲರಾಗಿರುವುದಕ್ಕೆ, ಸದನದಲ್ಲಿ ಆಡಳಿತ ಪಕ್ಷದ ಮಂತ್ರಿಗಳು ಮತ್ತು ಶಾಸಕರು ಸರಿಯಾಗಿ ಹಾಜರಾಗದಿರುವುದಕ್ಕೆ ವಿಧಾನ ಸಭಾಧ್ಯಕ್ಷರು ಅಸಮಾಧಾನಗೊಂಡು ಸಭಾತ್ಯಾಗ ಮಾಡಿ ಸದನವನ್ನು ಮುಂದೂಡಿದ್ದು ಬಹುಶಃ ವಿಧಾನ ಸಭಾ ಇತಿಹಾಸದಲ್ಲಿಯೇ ಪ್ರಥಮವಿರಬೇಕು. ರಾಜ್ಯದ ಜನತೆ ಆಡಳಿತ ಪಕ್ಷಕ್ಕೆ ಅತ್ಯಧಿಕ ಶಾಸಕರನ್ನು ಗೆಲ್ಲಿಸಿ ಕಳುಹಿಸಿದ್ದಕ್ಕೆ ಸರ್ಕಾರ ಮತ್ತು ಶಾಸಕರು ಜನತೆಗೆ ನೀಡಿದ ಬಳುವಳಿ ಇದು. ಸಭಾಧ್ಯಕ್ಷರು ಈ ರೀತಿ ಬೇಸರ ವ್ಯಕ್ತಪಡಿಸಿ ಸದನ ಮುಂದೂಡುವ ಕ್ರಮ ಕೈಗೊಳ್ಳುವ ಮುನ್ನ ಸರ್ಕಾರಕ್ಕೆ ಮತ್ತು ಮಂತ್ರಿಗಳಿಗೆ ನಾಲ್ಕು ಬಾರಿ ಎಚ್ಚರಿಸಿದ್ದಾರೆ. ಆದಾಗ್ಯೂ ಸರ್ಕಾರ ಇದನ್ನು ಲಘುವಾಗಿ ಪರಿಗಣಿಸಿದರ ಫಲ ಇದು. ಇವರ ಪರಿವರ್ತನೆಯೇ ಅಸಾಧ್ಯ ಎಂಬುದು ಅರಿವಾದಾಗ ಅಸಹಾಯಕರಾದ ಸದನದ ನಾಯಕರು ಸರ್ಕಾರಕ್ಕೆ ಚುರುಕು ಮುಟ್ಟಿಸಲು ಸಭಾ ತ್ಯಾಗವನ್ನುಳಿದು ಅನ್ಯ ಮಾರ್ಗವಿರಲಿಲ್ಲ. ಮುಖ್ಯಮಂತ್ರಿಗಳೇ ಸಂಧಾನಕ್ಕೆ ಮುಂದಾಗಿ ಸಭಾಧ್ಯಕ್ಷರನ್ನು ಸಮಾಧಾನ ಮಾಡಬೇಕಾದ ಪರಿಸ್ಥಿತಿ ತಂದದ್ದು ವಿಪರ್ಯಾಸ.

230 ಪ್ರಶ್ನೆಗಳಲ್ಲಿ ಕೇವಲ 84 ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿರುವುದನ್ನು ನೋಡಿದರೆ ಉಳಿದ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರಕ್ಕೆ ಸಕಾಲದಲ್ಲಿ ಸಾಧ್ಯವಾಗಿಲ್ಲದಿರುವುದನ್ನು ನೋಡಿದರೆ ಮೇಲ್ನೋಟಕ್ಕೆ ಸರ್ಕಾರದ ಕಾರ್ಯದಲ್ಲಿ ಲೋಪ ಒಪ್ಪಿಕೊಂಡಂತಾಗುತ್ತದೆ. ಸರ್ಕಾರದ ವೈಫಲ್ಯ ಶಾಸಕರಿಗಿರುವ ಸಂವಿಧಾನಾತ್ಮಕ ಹಕ್ಕನ್ನು ಕಡೆಗಣಿಸಿದಂತಾಗುವುದಲ್ಲದೇ ಅವರನ್ನು ಚುನಾಯಿಸಿದ ಮತದಾರರನ್ನು ಅವಮಾನಿಸಿದಂತಾಗಿದೆ. ಇದರಿಂದ ಅಧಿಕಾರಿಗಳ ಮೇಲೆ ಸಂಬಂಧಪಟ್ಟ ಸಚಿವರ ಹಿಡಿತ ಹಾಗೂ ಸೌಹಾರ್ದಯುತ ಸಹಕಾರ ಇಲ್ಲದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದಾಗ್ಯೂ ಇದರ ಒಳಹೊಕ್ಕು ನೋಡಿದಾಗ ಸರ್ಕಾರದಲ್ಲಿ ಸಾವಿರಾರು ಅಧಿಕಾರಿ ಮತ್ತು ನೌಕರರ ಹುದ್ದೆಗಳು ಖಾಲಿ ಇರುವುದು ಪ್ರಮುಖ ಕಾರಣವಾಗುತ್ತದೆ. ಒಬ್ಬನೇ ಅಧಿಕಾರಿ ಕೆಲವಾರು ಹುದ್ದೆಗಳ ಪ್ರಭಾರದಲ್ಲಿರುವುದು, ಒಬ್ಬ ನೌಕರ ಹಲವಾರು ನೌಕರರ ಕಾರ್ಯ ನಿರ್ವಹಿಸಬೇಕಾಗಿರುವುದು ಇದಕ್ಕೆ ಕಾರಣ. ಸರ್ಕಾರದ ಅತ್ಯುನ್ನತ ಅಂಗ ವಿಧಾನಸಭೆಗೆ ಈ ಗತಿಯಾದರೆ ಇನ್ನೂ ಸಾಮಾನ್ಯ ಬಡ ಜನರ ಕೆಲಸದ ಗತಿ ಏನಾಗಿರಬಹುದು ಯೋಚಿಸಿ. ಸರ್ಕಾರ ಕಣ್ಣೋರೆಸುವ ತಂತ್ರವಾಗಿ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡುವ ಬದಲು ಶೀಘ್ರವಾಗಿ ಭ್ರಷ್ಟಾಚಾರ ರಹಿತ, ಗೊಂದಲ ರಹಿತ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಂಡು ಪ್ರಾಮಾಣಿಕವಾಗಿ ಪ್ರಯತ್ನಿಸಲಿ.

– ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

ಪರೀಕ್ಷಾ ವೇಳೆ ವಿದ್ಯುತ್ ಕಡಿತ ಬೇಡ

ಮಾನ್ಯರೆ,

ಮಾರ್ಚ್ ತಿಂಗಳು ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಪರೀಕ್ಷಾ ಸಮಯ. ಇಂತಹ ಸಂದರ್ಭದಲ್ಲಿ ರಾಜ್ಯಾದ್ಯಂತ ವಿದ್ಯುತ್ ಇಲಾಖೆ ನಡೆಸುತ್ತಿರುವ ವಿದ್ಯುತ್ ಕಣ್ಣಾ ಮುಚ್ಚಾಲೆ ಸರ್ಕಾರದ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ. ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಈಗಾಗಲೇ 16,000 ಮೆಗಾ ವಾಟ್ ದಾಟಿದ್ದರೂ ಮುನ್ನೆಚ್ಚರಿಕೆ ವಹಿಸುವಲ್ಲಿ ಆಡಳಿತ ಮಂಡಳಿ ವಿಫಲವಾಗಿದೆ. ಕೇವಲ ಬೆಂಗಳೂರಿನಲ್ಲೇ ದಿನಕ್ಕೆ 5 ಗಂಟೆ ವಿದ್ಯುತ್ ಕಡಿತವಾಗುತ್ತಿರುವುದು ದುರಂತ. ಉಚಿತ ವಿದ್ಯುತ್ ಯೋಜನೆಗಳ ಪ್ರಚಾರದಲ್ಲಿ ಮಗ್ನವಾಗಿರುವ ಸರ್ಕಾರ, ಗುಣಮಟ್ಟದ ವಿದ್ಯುತ್ ಪೂರೈಕೆಯನ್ನು ಮರೆತಂತಿದೆ. ಗ್ರಾಮೀಣ ಭಾಗದ ಶೇ. 70 ರಷ್ಟು ವಿದ್ಯಾರ್ಥಿಗಳು ರಾತ್ರಿ ಓದಿಗೆ ವಿದ್ಯುತ್‌ನ್ನೇ ನಂಬಿದ್ದಾರೆ. ಸಂಜೆ 6 ರಿಂದ ಬೆಳಗ್ಗೆ 6 ರವರೆಗೆ ಕಡ್ಡಾಯವಾಗಿ ಲೋಡ್ ಶೆಡ್ಡಿಂಗ್ ನಿಲ್ಲಿಸಬೇಕು. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ಏಕಾಗ್ರತೆಗೆ ಭಂಗ ತರುವ ಈ ಕ್ರಮವನ್ನು ಕೈಬಿಟ್ಟು, ಸರ್ಕಾರವು ಪರ್ಯಾಯ ಮಾರ್ಗಗಳ ಮೂಲಕ ನಿರಂತರ ವಿದ್ಯುತ್ ಒದಗಿಸಲು ಆದ್ಯತೆ ನೀಡಲಿ.

–ಡಾ. ಎಚ್.ಕೆ.ವಿಜಯಕುಮಾರ, ಮೈಸೂರು.

ಬಾಲ್ಯ ವಿವಾಹ ನಿಷೇಧ ಕುರಿತು ಜಾಗೃತಿ ಅಗತ್ಯ

ಮಾನ್ಯರೆ,

ಬಾಲ್ಯ ವಿವಾಹ ನಿಷೇಧ 2006ರ ಕಾಯಿದೆ ಪ್ರಕಾರ ಹೆಣ್ಣು ಮಕ್ಕಳಿಗೆ 18 ವಯಸ್ಸು ಮತ್ತು ಗಂಡು ಮಕ್ಕಳಿಗೆ 21 ವಯಸ್ಸನ್ನು ಈಗಾಗಲೇ ಕಾನೂನು ಉಲ್ಲೇಖವಿದೆ. ಆದರೂ ಸಹ ಆಗಾಗ ಗ್ರಾಮೀಣ ಪ್ರದೇಶಗಳಲ್ಲಿ ಕಾನೂನು ನಿಯಮಗಳನ್ನು ಪಾಲಿಸದೆ 18 ವಯಸ್ಸಿಗಿಂತ ಕಡಿಮೆ ಇರುವ ಹೆಣ್ಣು ಮಕ್ಕಳಿಗೆ ಮದುವೆ ಮಾಡುತ್ತಿರುವುದು ವಿಪರ್ಯಾಸದ ಸಂಗತಿ. ಕರ್ನಾಟಕ ರಾಜ್ಯದ ದೇವನಹಳ್ಳಿ ಹತ್ತಿರದ ಗ್ರಾಮವೊಂದರಲ್ಲಿ 27ನೇ ವಯಸ್ಸಿನ ಗಂಡಿಗೆ 16 ವಯಸ್ಸಿನ ಹೆಣ್ಣು ಹುಡುಗಿಯೊಂದಿಗೆ ಮದುವೆ ನಿಗದಿ ಪಡಿಸಿ ಕಾನೂನು ಕ್ರಮಕ್ಕೆ ಒಳಗಾಗಿರುವ ಘಟನೆ ಬೆನ್ನಲ್ಲೆ ದೇವಾಲಯ ಮತ್ತು ಕಲ್ಯಾಣ ಮಂಟಪದಲ್ಲಿ ಬಾಲ್ಯ ವಿವಾಹ ನಿಷೇಧ ನಾಮಫಲಕಗಳನ್ನು ಹಾಕಬೇಕೆಂದು ಆದೇಶ ಹೊರಡಿಸಿರುವುದು ಸ್ವಾಗತಾರ್ಹ. ಕಲ್ಯಾಣ ಮಂಟಪ, ದೇವಾಲಯ, ಸಾರ್ವಜನಿಕ ಸ್ಥಳಗಳಾದ, ಬಸ್, ರೈಲು ನಿಲ್ದಾಣಗಳು, ಶಾಲಾ ಕಾಲೇಜಿನ ಆವರಣಗಳಲ್ಲಿ ಬಾಲ್ಯ ವಿವಾಹ ನಿಷೇಧ ಕುರಿತು ನಾಮಫಲಕ ಅಳವಡಿಸಿ ಜಾಗೃತಿ ಮೂಡಿಸುವುದರ ಮೂಲಕ ಬಾಲ್ಯ ವಿವಾಹಕ್ಕೆ ನಾಂದಿ ಹಾಡಬೇಕಾಗಿರುವುದು ಪ್ರತಿಯೊಬ್ಬರ ನಾಗರಿಕರ ಕರ್ತವ್ಯ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

'ಹೌಸ್'ಗಳು ಮೆರೆಯುತ್ತಿವೆ; ಹೋಂಗಳು ಮರೆಯಾಗುತ್ತಿವೆ' ಲೇಖನ ಅತ್ಯುತ್ತಮವಾಗಿದೆ

ಮಾನ್ಯರೆ,

ಮಾ.9ರ 'ಮೈಸೂರು ಮಿತ್ರ' ಪತ್ರಿಕೆಯ ಪುಟ ಸಂಖ್ಯೆ 4ರಲ್ಲಿ ಪ್ರಕಟವಾದ ಜಿ.ಎಲ್. ತ್ರಿಪುರಾಂತಕ ಅವರ ಅರಿವು ಕಾಲಂನ ಲೇಖನ 'ಹೌಸ್'ಗಳು ಮೆರೆಯುತ್ತಿವೆ. ಹೋಂಗಳು ಮರೆಯಾಗುತ್ತಿವೆ' ಓದಿ ಕಣ್ಣಲ್ಲಿ ಅಶ್ರುಧಾರೆಯಾಯಿತು. ಅಷ್ಟು ಅದ್ಭುತವಾಗಿ ಮೂಡಿಬಂದಿದೆ. ಹಳೇ ತಲೆಮಾರಿಗೆ ಸೇರಿದ ನಮಗೆ (73 ವರ್ಷ) ಇಂತಹ ಲೇಖನದ ಮೂಲಕ ನಮ್ಮ ಹಳೆಯ ನೆನಪನ್ನು ಮರುಕಳಿಸಿದ ಲೇಖಕರಿಗೆ ಹಾಗೂ ಇಂತಹ ಲೇಖನವನ್ನು ಪ್ರಕಟಿಸುತ್ತಿರುವ ನಿಮಗೆ ಒಬ್ಬ ಹಿರಿಯ ವಕೀಲನಾಗಿ ನಾನು ಹೃತ್ಪೂರ್ವಕವಾಗಿ ವಂದಿಸುತ್ತಿದ್ದೇನೆ. ಅನಂತ ಧನ್ಯವಾದಗಳು.

–ಕೆ.ಆರ್. ಶಿವಶಂಕರ್, ವಕೀಲರು, ತ್ಯಾಗರಾಜ ರಸ್ತೆ, ಮೈಸೂರು.

ಹೊಸ ಸೃಷ್ಟಿಗೆ... ಹೊಸ ದೃಷ್ಟಿಗೆ... ಶ್ರೀಕಾರ ಯುಗಾದಿ



ಹಣ್ಣೆಲೆ ಉದುರಿ ಚಿಗುರೆಲೆ ನಳನಳಿಸುವ ಸಂಭ್ರಮ. ಭೂ ಮಾತೆ ಹಸಿರು ಮುಕ್ಕಳಿಸುವ ಮಧುರ ಕ್ಷಣ. ಮಧು ಚೆಲ್ಲುವ ಹೂಗಳ ಮೇಲೆ ಝೇಂಕರಿಸುವ ಜೇನ್ದುಂಬಿಗಳ ಸಡಗರ. ನೆತ್ತಿಯ ಮೇಲೆ ಸುಡುವ ಸೂರ್ಯನಿದ್ದರೂ ತಂಪೆರೆವ ತಂಗಾಳಿಯ ನವೋಲ್ಲಾಸ. ಮುಂಬರುವ ಎಲ್ಲ ಹಬ್ಬಗಳಿಗೂ ಮುನ್ನುಡಿ ಬರೆವ ಕಾಲ. ಕಷ್ಟ–ಸುಖಗಳೆರಡನ್ನೂ ಸಮನಾಗಿ ಸ್ವೀಕರಿಸುವುದರ ಸಂಕೇತವಾಗಿ ಬೇವು–ಬೆಲ್ಲವನ್ನು ಮೆಲ್ಲುವ ದಿನ. ವರುಷಕ್ಕೊಂದು ಹೊಸ ಜನ್ಮ ಪಡೆವ ಪ್ರಕೃತಿ ದೇವಿಗೆ ನಮಿಸುವ ದಿನ. ಇದೆಲ್ಲಕ್ಕೂ ಒಂದೇ ಹೆಸರು ಅದೇ ಯುಗಾದಿ ಅರ್ಥಾತ್ ಉಗಾದಿ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ.94815 33167

ಯುಗಾದಿ ಎಂದರೆ ತಕ್ಷಣ ನಮಗೆ ವರಕವಿ ಬೇಂದ್ರೆ ಅವರ 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ...' ಹಾಡು ಕೇಳಿ ಬರುತ್ತದೆ. ಅಷ್ಟೇ ಅಲ್ಲ, ಮನಸ್ಸಿನ ತುಂಬ ಆವರಿಸಿಕೊಂಡು ಅವ್ಯಕ್ತ ಆನಂದ ನೀಡುತ್ತದೆ. ಪ್ರತಿವರ್ಷ ಯುಗಾದಿ ಹಬ್ಬದಂದು ಜನಸಾಮಾನ್ಯರ ಬಾಯಿಯಿಂದ ಹಿಡಿದು ಬಾನುಲಿ, ದೂರದರ್ಶನದಲ್ಲೆಲ್ಲಾ ಈ ಹಾಡಿನ ವೈಭವ ಇದ್ದೇ ಇರುತ್ತದೆ. ಇದನ್ನು ಬಿತ್ತರ ಮಾಡದ ಟಿ.ವಿ. ಚಾನೆಲ್‌ಗಳೇ ಇಲ್ಲ. ಇದೊಂದು ಜನಪ್ರಿಯ ಚಲನಚಿತ್ರ ಗೀತೆಯೂ ಆಗಿರುವುದರಿಂದ ಇದನ್ನು ಕೇಳದ ಕಿವಿಗಳೇ ಇಲ್ಲವೆನ್ನಬಹುದು. ಬೇಂದ್ರೆ ಅವರ ಇದೊಂದು ಹಾಡು ಸಾಕು ಯುಗಾದಿಯನ್ನು ಅರಿಯಲು. ಚೈತ್ರದ ಸೊಬಗಿನ ನವ ವಸಂತಾಗಮನದ ಯುಗಾದಿಯು ಕವಿಗಳಿಗೆ ಅತ್ಯಂತ ಸ್ಫೂರ್ತಿದಾಯಕವೂ ಹೌದು. ಹಾಗಾಗಿ ಯುಗಾದಿ ಕುರಿತು ಬಹಳಷ್ಟು ಕವಿಗಳು ಬರೆದಿದ್ದಾರೆ. ಇಂದಿಗೂ ಬರೆಯುತ್ತಲೇ ಇದ್ದಾರೆ. ಮೈಸೂರು ಮಲ್ಲಿಗೆಯ ಕವಿ **ಕೆ.ಎಸ್. ನರಸಿಂಹಸ್ವಾಮಿ** ಯುಗಾದಿ ಕುರಿತು ಬರೆಯುವ ಬಗೆಯಿದು –

ಮೃದು ವಸಂತಷೆ ನೆಲದ ಹೃದಯ ಚಿಮ್ಮಿದ ಒಲವೆ
ಹೊಸ ವರುಷ ತೆರೆದ ತಳಿರಿನ ಬಾಗಿಲೆ
ಕೊರೆವ ಚಳಿಯೂ ಇರದ ಉರಿವ ಬಿಸಿಲೂ ಇರದ
ಹರುಷವೇ, ನನ್ನೊಲವೆ, ಬಾಳ ಚೆಲುವೆ!

ಹಾಗೆಯೇ ನಿತ್ಯೋತ್ಸವದ ಕವಿ **ಕೆ.ಎಸ್. ನಿಸಾರ್ ಅಹಮದ್** ಅವರು ಯುಗಾದಿ ಬಂದಿದೆಯೆಂದು ಹಿರಿಹಿರಿ ಹಿಗ್ಗಿ ಮನದುಂಬಿ ಹಾಡುವ ರೀತಿಯಿದು

ಸಿಹಿ ಕಹಿಗಳ ಜೊತೆಗೆ ಬೆಸೆದು,
ಸಮರಸದಲಿ ಬಾಳ ಹೊಸೆದು,
ಹಳತರಲ್ಲಿ ಹೊಸತು ಕೋದು
ನಿಂತಿದೆ ಮನೆ ಹೊಸ್ತಿಲಲ್ಲಿ
ಸಿರಿ ಯುಗಾದಿ ಹಬ್ಬಕೆ

ಅಂತೆಯೇ ನಮ್ಮ ಕವಿ ಗೋಪಾಲಕೃಷ್ಣ ಅಡಿಗರು ಚೈತ್ರ ಹೊರಟನೆ 'ಚೈತ್ರ ಯಾತ್ರೆಗಿನ್ನೊಂದು ಸಲ. ವರ್ಷ ವರ್ಷದ ತೊಡಕು ತುಡಿವ ಸಲಗ...' ಎಂದು ಹಾಡುತ್ತಾರೆ. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು 'ಹೂವ ಬಿಟ್ಟಿವೆ, ಹೂವ ತೊಟ್ಟಿವೆ, ಹೂವನ್ನುಟ್ಟಿವೆ ಮರಗಳು. ಚೈತ್ರ ಯಾತ್ರೆಗೆ ಬಂದು ನಿಂತವೂ ನೂರು ಚೆಲುವಿನ ರಥಗಳು. ಕಾಮ–ರತಿಯರು ಬಂದು ಆಡುವ ರಾಸಲೀಲಾ ಪಥಗಳು, ಸೃಷ್ಟಿ ಬರೆಯುವ ಚೈತ್ರ ಕಾವ್ಯದ ಮಧು ಪವಾಡದ ಕಥೆಗಳು...' ಎನ್ನುತ್ತಾರೆ. ಚೆಂಬೆಳಕಿನ ಕವಿ ಚೆನ್ನವೀರಕಣವಿ ಅವರು 'ಆ ಗಿಡಾ, ಈ ಗಿಡಾ, ಒಂದೊಂದೂ ಜೇಂಗೊಡಾ...' ಎಂದು ಚೈತ್ರದ ಸಿಹಿಗೆ ಬಾಯ್ಚಪ್ಪರಿಸುತ್ತಾರೆ. ಒಟ್ಟಿನಲ್ಲಿ ವಸಂತನನ್ನು ಕರೆತರುವ ಯುಗಾದಿ ಪ್ರಕೃತಿ ತೊಟ್ಟಿಲನ್ನು ತೂಗಿ ನೆಲದ ಜೋಗುಳವಾಡುವ ವಿಶಿಷ್ಟ ಹಬ್ಬ.

ಹಣ್ಣೆಲೆ ಉದುರಿ ಚಿಗುರೆಲೆ ನಳನಳಿಸುವ ಸಂಭ್ರಮ. ಭೂ ಮಾತೆ ಹಸಿರು ಮುಕ್ಕಳಿಸುವ ಮಧುರ ಕ್ಷಣ. ಮಧು ಚೆಲ್ಲುವ ಹೂಗಳ ಮೇಲೆ ಝೇಂಕರಿಸುವ ಜೇನ್ದುಂಬಿಗಳ ಸಡಗರ. ನೆತ್ತಿಯ ಮೇಲೆ ಸುಡುವ ಸೂರ್ಯನಿದ್ದರೂ ತಂಪೆರೆವ ತಂಗಾಳಿಯ ನವೋಲ್ಲಾಸ. ಮುಂಬರುವ ಎಲ್ಲ ಹಬ್ಬಗಳಿಗೂ ಮುನ್ನುಡಿ ಬರೆವ ಕಾಲ. ಕಷ್ಟ–ಸುಖಗಳೆರಡನ್ನೂ ಸಮನಾಗಿ ಸ್ವೀಕರಿಸುವುದರ ಸಂಕೇತವಾಗಿ ಬೇವು–ಬೆಲ್ಲವನ್ನು ಮೆಲ್ಲುವ ದಿನ. ವರುಷಕ್ಕೊಂದು ಹೊಸ ಜನ್ಮ ಪಡೆವ ಪ್ರಕೃತಿ ದೇವಿಗೆ ನಮಿಸುವ ದಿನ. ಇದೆಲ್ಲಕ್ಕೂ ಒಂದೇ ಹೆಸರು ಅದೇ ಯುಗಾದಿ ಅರ್ಥಾತ್ ಉಗಾದಿ. ನಮ್ಮ ಎಲ್ಲ ಧಾರ್ಮಿಕ ಆಚರಣೆ ಹಬ್ಬ–ಹರಿದಿನಗಳಿಗೆ ಪ್ರೇರಣೆಯನ್ನು ನಿಸರ್ಗದಲ್ಲಿ ಕಾಣಬಹುದು. ಹಾಗೆಯೇ ಯುಗಾದಿ ಹಬ್ಬದ ಪ್ರೇರಣೆಗೆ ಮೂಲ ನಿಸರ್ಗವೇ ಆಗಿದೆ.

ವರ್ಷದ ಮೊದಲ ದಿನವನ್ನು ಹೊಸ ವರ್ಷದ ಹಬ್ಬವಾಗಿ ಆಚರಿಸಿ ಸಂಭ್ರಮಪಡುವ ಸಂಪ್ರದಾಯ ಜಗತ್ತಿನೆಲ್ಲೆಡೆ ಬಹು ಹಿಂದಿನಿಂದಲೂ ಉಂಟು. ಜನವರಿ ತಿಂಗಳ ಮೊದಲ ದಿನವನ್ನು ವರ್ಷಾರಂಭವೆಂದು ರೋಮನ್ನರು, ಆಂಗ್ಲರು ಸೇರಿದಂತೆ ಪಾಶ್ಚಿಮಾತ್ಯರೆಲ್ಲರೂ ಆಚರಿಸುತ್ತಾರೆ. ಯುಗಾದಿ ಎನ್ನುವುದು ಯುಗದ ಆದಿ. ಯುಗವೆಂದರೆ ಸೃಷ್ಟಿಯ ಕಾಲಮಾನ ಅರ್ಥಾತ್ ಹೊಸ ವರ್ಷ. ಆದಿ ಎಂದರೆ ಆರಂಭ ಅಥವಾ ವರ್ಷದ ಪ್ರಾರಂಭದ ದಿನ. ಅಂದರೆ ಹೊಸ ವರ್ಷದ ಪ್ರಾರಂಭದ ದಿನವೇ ಯುಗಾದಿ. ಹಲವು ಪರಂಪರೆಗಳ ಆಗಮದ ಕಾಲವಾಗಿ ಯುಗಾದಿ ಭಾರತೀಯರಲ್ಲಿ ರೂಢಿಗೆ ಬಂದಿದೆ. ಉತ್ತರ ಭಾರತದಲ್ಲಿ ವಿಕ್ರಮ ಶಕೆಯ ಆರಂಭದ ದಿನ ಕಾರ್ತಿಕ ಶುದ್ಧ ಪಾಡ್ಯವನ್ನು ಯುಗಾದಿ ಹಬ್ಬವಾಗಿ ಆಚರಿಸುತ್ತಾರೆ.

ಜ್ಯೋತಿಷ್ಯ ಶಾಸ್ತ್ರದಲ್ಲಿ ಮೂರು ರೀತಿಯ ಲೆಕ್ಕಾಚಾರಗಳುಂಟು. ಅವುಗಳೆಂದರೆ 1.ಬಾರ್ಹಸ್ಪತ್ಯಮಾನ, 2.ಚಾಂದ್ರಮಾನ, 3. ಸೌರಮಾನ. ಉತ್ತರ ಭಾರತದವರು ಬಾರ್ಹಸ್ಪತ್ಯಮಾನದಲ್ಲಿ ಯುಗಾದಿಯನ್ನು ಆಚರಿಸುತ್ತಾರೆ. ವಿಶೇಷವಾಗಿ ದಕ್ಷಿಣ ಭಾರತದ ರಾಜ್ಯಗಳಿಗೆ ಯುಗಾದಿ ಅತ್ಯಂತ ವಿಜೃಂಭಣೆ ಹಬ್ಬವಾಗಿದೆ. ನಮ್ಮಲ್ಲಿ ಯುಗಾದಿ ಹಬ್ಬವನ್ನು ಎರಡೂ ರೀತಿಯಲ್ಲಿ ಆಚರಿಸುವ ಪದ್ಧತಿಯಿದೆ. ಒಂದು ಚಾಂದ್ರಮಾನ ಯುಗಾದಿ ಮತ್ತೊಂದು ಸೌರಮಾನ ಯುಗಾದಿ.

ಹೆಸರುಗಳೇ ಹೇಳುವಂತೆ ಮೊದಲನೆಯದು ಚಂದ್ರನನ್ನೂ, ಎರಡನೆಯದು ಸೂರ್ಯನನ್ನೂ ಅವಲಂಬಿಸಿವೆ. ಚಂದ್ರನ ಚಲನೆಯನ್ನು ಅನುಸರಿಸಿ ಅಮಾವಾಸ್ಯೆ–ಹುಣ್ಣಿಮೆಗಳ ಆಧಾರದ ಮೇಲೆ ಮಾಸ ಗಣನೆ ಮಾಡುವ ಪದ್ಧತಿಗೆ ಚಾಂದ್ರಮಾನ ಎಂದು ಹೆಸರು. ತಿಂಗಳು ಹೆಸರು ಬಂದಿರುವುದೂ ಚಂದ್ರನಿಂದಲೇ. ಚಂದ್ರನ ಚಲನೆಯಲ್ಲಿ ವ್ಯತ್ಯಾಸವಾಗುವುದರಿಂದ ಚಾಂದ್ರಮಾನ ಯುಗಾದಿ ನಿರ್ದಿಷ್ಟ ಸಮಯದಲ್ಲಿ ಬರುವುದಿಲ್ಲ. ಮೇಷ ರಾಶಿಗೆ ಸೂರ್ಯ ಪ್ರವೇಶಿಸುವ ದಿನ ಸೌರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ.

ಯುಗಾದಿಗೆ ಗುಡಿಪಾಡ್ಯ, ಪಾಡ್ಯದ ಗುಡಿ ಎಂಬ ಹೆಸರುಗಳೂ ಉಂಟು. ಗುಡಿ ಎಂದರೆ ಬಾವುಟ ಎಂದರ್ಥ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಹಾಗೂ ನಮ್ಮಲ್ಲೂ ಹಲವು ಕಡೆ ಮನೆ ಮನೆಯ ಮುಂದೆ ಪಾಡ್ಯದ ಗುಡಿ ಕಟ್ಟುತ್ತಾರೆ. ಪಾಡ್ಯದ ಗುಡಿ ಎಂದರೆ ಉದ್ದವಾದ ಕೋಲೊಂದರ ತುದಿಗೆ ಹೊಸ ಬಟ್ಟೆಯನ್ನು ಕಟ್ಟಿ ಅದರ ಮೇಲೆ ಹಿತ್ತಾಳೆ ಪಾತ್ರೆಯೊಂದನ್ನು ಬೋರಲು ಹಾಕಿರುತ್ತಾರೆ. ಯುಗಾದಿ ದಿನ ಅದಕ್ಕೆ ಪೂಜೆ ಮಾಡಿ ಪ್ರತಿಯೊಂದು ಮನೆ ಮುಂದೆ ಅದನ್ನು ಮೇಲಕ್ಕೆ ಏರಿಸುತ್ತಾರೆ. ಇದನ್ನು ಧ್ವಜ ಎಂದೂ ಕರೆಯುತ್ತಾರೆ. ಇದೇ ಯುಗಾದಿಯ ಧ್ವಜಾರೋಹಣ. ಮಹಾಭಾರತದಲ್ಲೂ ಇದರ ಬಗ್ಗೆ ಉಲ್ಲೇಖವಿದೆ.

ವರ್ಷದಲ್ಲಿ ಬರುವ ಮೂರೂವರೆ ದಿನಗಳ ಶುಭ ಮುಹೂರ್ತ ಜ್ಯೋತಿಷ್ಯ ಶಾಸ್ತ್ರದಲ್ಲಿ ಅತ್ಯಂತ ಶ್ರೇಷ್ಠವಾದದು. ಅವುಗಳೆಂದರೆ ಯುಗಾದಿ, ಅಕ್ಷಯ ತದಿಗೆ, ವಿಜಯ ದಶಮಿ ಮತ್ತು ಬಲಿಪಾಡ್ಯಮಿಯ ಅರ್ಧ ದಿವಸ. ಈ ಮೂರೂವರೆ ಶುಭಘಳಿಗೆಯಲ್ಲಿ ನಮಗೆ ಯುಗಾದಿಯೇ ವರ್ಷದ ಪ್ರಾರಂಭದ ಶುಭ ದಿನವಾಗಿದೆ. ಈ ದಿವಸ ಏನೇ ಕೆಲಸ ಕಾರ್ಯಗಳನ್ನು ಕೈಗೊಂಡರೂ, ಯಾವುದೇ ಉದ್ದಿಮೆಗಳಲ್ಲಿ ಯೋಜನೆಗಳನ್ನು ಆರಂಭಿಸಿದರೂ ಯಶಸ್ಸು ಕಟ್ಟಿಟ್ಟಬುತ್ತಿ ಎಂಬ ನಂಬಿಕೆ ಇದೆ. ಯುಗ ಯುಗಗಳಿಂದಲೂ ಅತ್ಯಂತ ಮಹತ್ವದ ಕಾರ್ಯಗಳು ಈ ಶುಭ ದಿವಸವೇ ನಡೆದಿವೆ ಎಂದು ಶಾಸ್ತ್ರ ಪುರಾಣಗಳೂ ಹೇಳುತ್ತವೆ. ಹಾಗಾಗಿ ಈಗಲೂ ಸಹ ಯುಗಾದಿಯಂದು ಹೊಸ ಕಾರ್ಯ ಚಟುವಟಿಕೆಗಳಿಗೆ, ಹೊಸ ಪದಾರ್ಥಗಳ ಖರೀದಿಗೆ, ಅವರವರ ಶಕ್ತ್ಯಾನುಸಾರ ಸಣ್ಣ ವ್ಯವಹಾರದಿಂದ ಹಿಡಿದು ದೊಡ್ಡ ದೊಡ್ಡ ವ್ಯವಹಾರಗಳಿಗೆ ನಮ್ಮಲ್ಲಿ ನಾಂದಿ ಹಾಕಲಾಗುತ್ತದೆ. ಅಷ್ಟರಮಟ್ಟಿಗೆ ಯುಗಾದಿ ಜನರಲ್ಲಿ ನವ ಚೈತನ್ಯವನ್ನು ತುಂಬುತ್ತದೆ.

ಯುಗಾದಿ ಹಲವು ಪರಂಪರೆಗಳ ಹಬ್ಬಗಳ ಪ್ರಾರಂಭಕ್ಕೆ ಮುನ್ನುಡಿ ಬರೆವ ದಿನವೂ ಹೌದು. ಬ್ರಹ್ಮದೇವನು ಈ ಜಗತ್ತನ್ನು ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನದ ಸೂರ್ಯೋದಯ ಕಾಲಕ್ಕೆ ಸೃಷ್ಟಿಸಿದ. ಬ್ರಹ್ಮದೇವ ಸೃಷ್ಟಿಯನ್ನು ಆರಂಭಿಸಿದ ದಿನವೇ ಯುಗಾದಿಯಾಗಿದೆ. ಅಂದೇ ಅವನು ಗ್ರಹ, ನಕ್ಷತ್ರ, ಮಾಸ, ಋತು, ವರ್ಷಾಧಿ ಪತಿಯನ್ನು ಸೃಷ್ಟಿಸಿ ಕಾಲಗಣನೆ ಆರಂಭಿಸಿದನೆಂದು ಹೇಮಾದ್ರಿ ಪಂಡಿತನ ಚತುರ್ವರ್ಗ ಚಿಂತಾಮಣಿ ಎಂಬ ಪುರಾಣ ಗ್ರಂಥದಲ್ಲಿ ಹೇಳಲಾಗಿದೆ. ಶ್ರೀರಾಮನು ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಬಂದು ರಾಮರಾಜ್ಯವಾಳಲು ಪ್ರಾರಂಭಿಸಿದ್ದು ಈ ಯುಗಾದಿಯಂದೆ. ಶಾಲಿವಾಹನ ಶಕೆ ಆರಂಭವಾದದ್ದು ಸಹ ಈ ಯುಗಾದಿ ದಿವಸವೆ. ಶಾಲಿವಾಹನ ಆ ದಿನ ಪಟ್ಟಾಭಿಶಕ್ತನಾದನೆಂದೂ, ಆದ್ದರಿಂದಾಗಿ ಈ ಚರಿತ್ರೆ ಕಾಲ ಶಾಲಿವಾಹನ ಶಕ ಆಯಿತೆಂದೂ ಹೇಳಲಾಗುತ್ತದೆ. ಕ್ರಿಸ್ತ ವರ್ಷ ಆರಂಭವಾದ ಎಪ್ಪತ್ತೆಂಟು ವರ್ಷಗಳ ನಂತರ ಶಾಲಿವಾಹನ ಶಕೆ ಆರಂಭವಾಗುತ್ತದೆ. ದಕ್ಷಿಣ ಭಾರತದಲ್ಲಿ ಈ ಶಕೆ ಬಳಕೆಯಲ್ಲಿದೆ. ಭಾರತೀಯ ಪಂಚಾಂಗಗಳು ಈ ಶಕೆಯನ್ನು ಪ್ರಸ್ತಾಪಿಸುತ್ತವೆ. ಯುಗಾದಿ ಹಬ್ಬವು ಜೈನರಿಗೂ ಮಹತ್ವದ ಪವಿತ್ರದಿನವಾಗಿದೆ. ಏಕೆಂದರೆ ಮಲ್ಲಿನಾಥನೆಂಬ 14ನೇ ತೀರ್ಥಂಕರ ಹುಟ್ಟಿದ್ದು ಯುಗಾದಿಯಂದೇ. ಹಾಗೆಯೇ ಆದಿ ತೀರ್ಥಂಕರನ ಮಗ ಭರತ ಚಕ್ರವರ್ತಿಯೂ ದಿಗ್ವಿಜಯ ಸಾಧಿಸಿದ ದಿನವಿದು.

ವೇದಗಳ ಕಾಲದಿಂದಲೂ ಯುಗಾದಿಯು ಹಿರಿಮೆ–ಗರಿಮೆಗಳು ಅನುರಣಿಸಿಕೊಂಡು ಬಂದಿವೆ. ಅಥರ್ವಣ ವೇದ, ಶತಪಥ ಬ್ರಾಹ್ಮಣ, ಧರ್ಮಸಿಂಧು, ನಿರ್ಣಯ ಸಿಂಧು ಮುಂತಾದ ಧರ್ಮಶಾಸ್ತ್ರ ಗ್ರಂಥಗಳಲ್ಲೂ ಯುಗಾದಿಯನ್ನು ಅಭೂತಪೂರ್ವವಾಗಿ ವರ್ಣಿಸಲಾಗಿದೆ ಬ್ರಹ್ಮಾಂಡ ಮತ್ತು ಮಹಾಭಾರತಗಳಲ್ಲೂ ಯುಗಾದಿ ಪ್ರಸ್ತಾಪಗೊಂಡಿದೆ.

ಬೇವು–ಬೆಲ್ಲದ ಮಹತ್ವ: ಯುಗಾದಿಯಂದು ಸೂರ್ಯೋದಯಕ್ಕೂ ಮುನ್ನ ಮುಂಜಾನೆ ಎದ್ದು ಮಂಗಳ ಸ್ನಾನ ಮಾಡಿ ಶ್ರೀರಾಮನನ್ನು ಸ್ಮರಣೆ ಮಾಡಿ ಹೊಸಬಟ್ಟೆ ತೊಟ್ಟು ಮನೆಯನ್ನೆಲ್ಲ ಮಾವು–ಬೇವು ಎಲೆಗಳ ತೋರಣದಿಂದ ಸಿಂಗರಿಸಿ ಹೊಸ ವರ್ಷವನ್ನು ಬರಮಾಡಿಕೊಳ್ಳಲಾಗುತ್ತದೆ. ಬಾವುಟ ಹಾರಿಸುವುದು, ಬೇವು–ಬೆಲ್ಲ ತಿನ್ನುವುದು, ಪಂಚಾಂಗ ಶ್ರವಣ, ವಸಂತ ನವರಾತ್ರಿ ಆರಂಭ ಇಷ್ಟದೇವತಾ ಪೂಜೆಯ ಜೊತೆಗೆ ಸೃಷ್ಟಿಕರ್ತನಾದ ಬ್ರಹ್ಮದೇವನ, ಕಾಲಪುರುಷನ ಮತ್ತು ವರ್ಷಾಧಿಪತಿಯ ಆರಾಧನೆ, ಚಂದ್ರ ದರ್ಶನ ಇವು ಯುಗಾದಿಯ ವೈಶಿಷ್ಟ್ಯ. ಯುಗಾದಿಯಲ್ಲಿ ಬೇವು–ಬೆಲ್ಲಕ್ಕೆ ತುಸು ಹೆಚ್ಚಿನ ಮಹತ್ವ ಉಂಟು. ಹೋಳಿಗೆ ಸೇರಿದಂತೆ ಹಬ್ಬದ ಸಿಹಿ ಅಡುಗೆ ಎಷ್ಟೇ ಇದ್ದರೂ ಸಹ ಬೇವು–ಬೆಲ್ಲ ಸೇವಿಸಿದಾಗಲೇ ಯುಗಾದಿ ಸಾರ್ಥಕವಾಗುವುದೆಂಬ ಭಾವ ಎಲ್ಲರದು. ಕಷ್ಟ–ಸುಖಗಳೆರಡರ ಸಂಕೇತವೇ ಬೇವು–ಬೆಲ್ಲ. ಜೀವನದಲ್ಲಿ ಎರಡನ್ನೂ ಸಮನಾಗಿ ಸ್ವೀಕರಿಸಿ ಬದುಕಿನ ಬಂಡಿ ನೂಕಬೇಕೆಂಬುದು ಯುಗಾದಿಯ ಆಶಯವಾಗಿದೆ. ಜೀವನವೆಲ್ಲಾ ಬೇವು–ಬೆಲ್ಲ. ಎರಡೂ ಸವಿದವನೇ ಕವಿಮಲ್ಲ ಎಂದು ಯುಗದ ಕವಿ ಕುವೆಂಪು ಅವರು ಯುಗಾದಿ ಮತ್ತು ಬೇವು–ಬೆಲ್ಲದ ಮಹತ್ವವನ್ನು ಸಾರಿದ್ದಾರೆ.

ಸಾಮಾನ್ಯವಾಗಿ ಯುಗಾದಿಯಂದು ಜ್ಯೋತಿಷಿಗಳಿಂದ ಹೊಸ ವರ್ಷದ ಫಲಗಳನ್ನು ಕೇಳುವುದು ರೂಢಿಯಲ್ಲಿದೆ. ವರ್ಷದ ಫಲಾಫಲಗಳನ್ನು ತಿಳಿದುಕೊಳ್ಳುವ ಕುತೂಹಲ ಎಲ್ಲರಿಗೂ ಇರುತ್ತದೆ. ಹಾಗಾಗಿ ಯುಗಾದಿ ಸಂದರ್ಭದಲ್ಲಿ ಜ್ಯೋತಿಷಿಗಳಿಗೆ ಬಹಳ ಬೇಡಿಕೆಗಳಿರುತ್ತವೆ. ಅಷ್ಟೇ ಅಲ್ಲ ಜ್ಯೋತಿಷ್ಯಕ್ಕೆ ಸಂಬಂಧಿಸಿದಂತೆ ಪ್ರತಿಯೊಂದಕ್ಕೂ ಅಂದು ಡಿಮ್ಯಾಂಡ್ ಇದ್ದೇ ಇರುತ್ತದೆ. ಅಂತೆಯೇ ಯುಗಾದಿಯಂದು ಜೂಜು ಆಡುವುದು ಬಹಳಷ್ಟು ಕಡೆ ರೂಢಿಯಲ್ಲಿದೆ. ಎಂದೂ ಜೂಜನ್ನೇ ಆಡದವರು ಕೂಡ ಅಂದು ಜೂಜಾಡಿ ತಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುತ್ತಾರೆ. ಕೆಲವು ಕಡೆಯಂತೂ ಮನೆಯವರೆಲ್ಲ, ಊರಿನವರೆಲ್ಲ ಒಂದು ಕಡೆ ಸೇರಿ ಜ್ಯೋತಿಷ್ಯ ಶಾಸ್ತ್ರದಲ್ಲಿ ಪಾರಂಗತರಾದ ಪಂಡಿತರನ್ನು ಆಹ್ವಾನಿಸಿ ಅವರಿಗೆ ಪಾದಪೂಜೆ ಮಾಡಿ ಸನ್ಮಾನಿಸಿ ಪವಿತ್ರ ಸ್ಥಳಗಳಲ್ಲಿ, ಭಕ್ತಿಯ ತಾಣಗಳಲ್ಲಿ, ದೇವಾಲಯಗಳಲ್ಲಿ ಸಂವತ್ಸರ ಕಾಲದಲ್ಲಿ ನಡೆಯುವ ಫಲಿತಾಂಶಗಳನ್ನು ಮೊದಲೇ ತಿಳಿದುಕೊಳ್ಳುತ್ತಾರೆ. ಇದನ್ನು ಪಂಚಾಂಗ ಶ್ರವಣ ಎನ್ನಲಾಗುತ್ತದೆ. ಈ ಪಂಚಾಂಗ ಶ್ರವಣದಲ್ಲಿನ ಅಂಗಗಳಿಂದ ಅಂದರೆ ತಿಥಿಯಿಂದ ಸಂಪತ್ತು, ವಾರದಿಂದ ಆಯಸ್ಸು, ನಕ್ಷತ್ರದಿಂದ ಪಾಪನಾಶ, ಯೋಗದಿಂದ ರೋಗ ದೂರ, ಕರಣದಿಂದ ಗಂಗಾಸ್ನಾನ ಮಾಡಿದಷ್ಟು ಪುಣ್ಯ ಲಭಿಸುತ್ತದೆಂದು ಹೇಳುತ್ತಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ

ಮೊದಲ ದಿನ 35,596 ಮಂದಿ ಪರೀಕ್ಷೆಗೆ ಹಾಜರು, 398 ಮಂದಿ ಗೈರು

ಮೈಸೂರು, ಮಾ.18(ಎಂಟಿವೈ)– ಮೈಸೂರು ನಗರ ಸೇರಿದಂತೆ ಜಿಲ್ಲೆಯ 136 ಪರೀಕ್ಷಾ ಕೇಂದ್ರಗಳಲ್ಲಿ ಬುಧವಾರದಿಂದ ಆರಂಭವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪ್ರಥಮ ಭಾಷೆಯ ಪರೀಕ್ಷೆ ಯಾವುದೇ ಗೊಂದಲವಿಲ್ಲದೆ ಸುಸೂತ್ರವಾಗಿ ನಡೆಯಿತು. 35,596 ವಿದ್ಯಾರ್ಥಿಗಳು ಹಾಜರಾಗಿ 398 ವಿದ್ಯಾರ್ಥಿಗಳು ಗೈರು ಹಾಜರಾದರು.

ಪರೀಕ್ಷಾ ಅಕ್ರಮ ತಡೆಗಾಗಿ ಸಿಸಿ ಕ್ಯಾಮರಾ ಕಣ್ಗಾವಲು ಸೇರಿದಂತೆ ಕಟ್ಟು ನಿಟ್ಟಿನ ಕ್ರಮದೊಂದಿಗೆ ಆರಂಭವಾದ ಪರೀಕ್ಷೆಗೆ ಮೈಸೂರಿನ 43 ಹಾಗೂ ಗ್ರಾಮಾಂತರ ಪ್ರದೇಶದ 93 ಪರೀಕ್ಷಾ ಕೇಂದ್ರದಲ್ಲಿ ಬೆಳಗ್ಗೆ 10 ಗಂಟೆಗೆ ಆರಂಭವಾದ ಪ್ರಥಮ ಭಾಷೆಯ ಪರೀಕ್ಷೆ ಮಧ್ಯಾಹ್ನ 1.15ರವರೆಗೂ ನಡೆಯಿತು. ಎಲ್ಲಾ ಕೇಂದ್ರಗಳಲ್ಲೂ ನಕಲು ಮಾಡುವ ಯಾವುದೇ ಪ್ರಕರಣ ಕಂಡು ಬರದೆ, ಎಲ್ಲಾ ವಿದ್ಯಾರ್ಥಿಗಳು ನಿಗದಿತ ಸಮಯದಲ್ಲಿ ಪರೀಕ್ಷೆ ಬರೆದರು.

ಮೈಸೂರು ಉತ್ತರ ಬ್ಲಾಕ್‌ನಲ್ಲಿ ಹೆಚ್ಚು ಗೈರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಗಮವಾಗಿ ನಡೆಸುವ ಉದ್ದೇಶದಿಂದ 7 ತಾಲೂಕು ಹಾಗೂ ಮೈಸೂರು ನಗರ ಸೇರಿದಂತೆ ಒಟ್ಟು 9 ಬ್ಲಾಕ್‌ಗಳಾಗಿ ವಿಂಗಡಿಸಲಾಗಿತ್ತು. ಮೈಸೂರು ಉತ್ತರ ಬ್ಲಾಕ್‌ನಲ್ಲಿ 19 ಪರೀಕ್ಷಾ ಕೇಂದ್ರಗಳಲ್ಲಿ 5960 ವಿದ್ಯಾರ್ಥಿಗಳಲ್ಲಿ 5855 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ,



ಪರೀಕ್ಷೆ ಬರೆಯುವಲ್ಲಿ ಮಗ್ನರಾಗಿರುವ ವಿದ್ಯಾರ್ಥಿಗಳು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳನ್ನು ವೆಬ್ ಕಾಸ್ಟಿಂಗ್ ಕೊಠಡಿಯಲ್ಲಿ ವೀಕ್ಷಿಸುತ್ತಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ.

105 ವಿದ್ಯಾರ್ಥಿಗಳು ಗೈರು ಹಾಜರಾದರು. ಮೈಸೂರು ದಕ್ಷಿಣ ಬ್ಲಾಕ್‌ನಲ್ಲಿ 16 ಕೇಂದ್ರದಲ್ಲಿ 4473 ವಿದ್ಯಾರ್ಥಿಗಳಲ್ಲಿ 4407 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ, 66 ವಿದ್ಯಾರ್ಥಿಗಳು ಗೈರು ಹಾಜರಾದರು. ಮೈಸೂರು ಗ್ರಾಮಾಂತರ ಬ್ಲಾಕ್‌ನಲ್ಲಿ 17 ಕೇಂದ್ರದಲ್ಲಿ 4758 ವಿದ್ಯಾರ್ಥಿಗಳಲ್ಲಿ 4721 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರೆ, 37 ವಿದ್ಯಾರ್ಥಿಗಳು ಗೈರು ಹಾಜರಾದರು. ಹೆಚ್.ಡಿ.ಕೋಟೆ ಬ್ಲಾಕ್‌ನಲ್ಲಿ 13 ಕೇಂದ್ರಗಳಲ್ಲಿ 3113 ವಿದ್ಯಾರ್ಥಿಗಳಲ್ಲಿ 3063 ವಿದ್ಯಾರ್ಥಿಗಳು ಹಾಜರಾಗಿ 50 ವಿದ್ಯಾರ್ಥಿಗಳು ಗೈರಾದರು. ಹುಣಸೂರು ಬ್ಲಾಕ್‌ನಲ್ಲಿ 15 ಕೇಂದ್ರಗಳಲ್ಲಿ 3984 ವಿದ್ಯಾರ್ಥಿಗಳಲ್ಲಿ 3948 ಪರೀಕ್ಷೆ ಬರೆದರೆ, 36 ವಿದ್ಯಾರ್ಥಿಗಳು ಗೈರಾದರು. ಕೆ.ಆರ್.ನಗರ ಬ್ಲಾಕ್‌ನಲ್ಲಿ 11 ಪರೀಕ್ಷಾ ಕೇಂದ್ರಗಳಲ್ಲಿ 2786 ವಿದ್ಯಾರ್ಥಿಗಳಲ್ಲಿ 2773 ವಿದ್ಯಾರ್ಥಿಗಳು ಹಾಜರಾದರೆ, 13 ವಿದ್ಯಾರ್ಥಿಗಳು ಗೈರಾದರು. ನಂಜನಗೂಡು ಬ್ಲಾಕ್‌ನಲ್ಲಿ 19 ಕೇಂದ್ರದಿಂದ 4787 ವಿದ್ಯಾರ್ಥಿಗಳಲ್ಲಿ 4550 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ, 237 ಮಂದಿ ಗೈರು ಹಾಜರಾಗಿದ್ದಾರೆ. ಪಿರಿಯಾಪಟ್ಟಣ ಬ್ಲಾಕ್‌ನಲ್ಲಿ 13 ಕೇಂದ್ರಗಳಲ್ಲಿ 2873 ವಿದ್ಯಾರ್ಥಿಗಳಲ್ಲಿ 2851 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ, 22 ಗೈರು ಹಾಜರಾದರು. ತಿ.ನರಸೀಪುರ ಬ್ಲಾಕ್‌ನಲ್ಲಿ 13 ಪರೀಕ್ಷಾ ಕೇಂದ್ರಗಳಲ್ಲಿ 3460 ವಿದ್ಯಾರ್ಥಿಗಳಲ್ಲಿ 3428 ಮಂದಿ ಪರೀಕ್ಷೆ ಬರೆದರೆ, 32 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಪ್ರತಿಯೊಬ್ಬರನ್ನು ತಪಾಸಣೆ ಮಾಡಲು ಕ್ರಮ: ಜಿಲ್ಲೆಯಲ್ಲಿನ ಪರೀಕ್ಷಾ ಕೇಂದ್ರಗಳನ್ನು ಬೆಳಗ್ಗೆ 9 ಗಂಟೆಗೆ ತೆರೆಯಲಾಯಿತು. ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳ ಪ್ರವೇಶ ಪತ್ರ ಪರಿಶೀಲಿಸಿದ ಬಳಿಕ ಪರೀಕ್ಷಾ ಕೇಂದ್ರದ ಒಳಗೆ ಬಿಡಲಾಯಿತು. ಮುನ್ನೆಚ್ಚರಿಕಾ ಕ್ರಮವಾಗಿ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತರು ವಿದ್ಯಾರ್ಥಿಗಳಿಗೆ ಬೇಕಾದ ಆರೋಗ್ಯ ಸೇವೆ ಒದಗಿಸಲು ಸಜ್ಜಾಗಿದ್ದರು.

ಜಿಲ್ಲಾಧಿಕಾರಿ ಕಚೇರಿಯಿಂದಲೇ ನಿಗಾ: 136 ಪರೀಕ್ಷಾ ಕೇಂದ್ರಗಳ 2080 ಪರೀಕ್ಷಾ ಕೊಠಡಿಗಳಲ್ಲಿ ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಗಳ ಮೇಲೆ ಸಿಸಿ ಕ್ಯಾಮರ ಕಣ್ಗಾವಲು ಇಡಲಾಗಿತ್ತು. ಜಿಲ್ಲಾಧಿಕಾರಿ ಕಚೇರಿಯಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿತ್ತು. ಸಿಸಿ ಕ್ಯಾಮರಾ ಲೈವ್ ದೃಶ್ಯಾವಳಿ ಪರಿಶೀಲನೆಗೆ ಪ್ರತ್ಯೇಕ ಸಿಬ್ಬಂದಿ ನಿಯೋಜಿಸಲಾಗಿತ್ತು. ಪರೀಕ್ಷಾ ಕೊಠಡಿಯಲ್ಲಿನ ಮೇಲ್ವಿಚಾರಕರ ಮೊಬೈಲ್ ನಂಬರ್‌ಗಳನ್ನು ಪಟ್ಟಿಮಾಡಿಕೊಂಡಿದ್ದ ಸಿಬ್ಬಂದಿ, ಆಯಾ ಕೊಠಡಿಯಲ್ಲಿ ವಿದ್ಯಾರ್ಥಿಗಳ ಚಲನ ವಲನದ ಮೇಲೆ ಅನುಮಾನ ಬಂದರೆ ಜಿಲ್ಲಾಧಿಕಾರಿ ಕಚೇರಿ ವೆಬ್ ಕಾಸ್ಟಿಂಗ್ ಕೊಠಡಿಯಿಂದ ಪರೀಕ್ಷಾ ಕೊಠಡಿ ಮೇಲ್ವಿಚಾರಕರಿಗೆ ಕರೆ ಮಾಡಿ ಮಾಹಿತಿ ನೀಡಲಾಗುತ್ತಿತ್ತು.

ವಿದ್ಯಾರ್ಥಿಗಳಿಗೆ ಶುಭ ಕೋರಿದರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಬಳಿ ಕೆಲವು ಸಂಘಟನೆಗಳ ಕಾರ್ಯಕರ್ತರು ಗುಲಾಬಿ, ಸಿಹಿ ನೀಡಿ ಶುಭ ಕೋರಿದರು. ಕೆಲವೆಡೆ ಶಾಲಾ ಶಿಕ್ಷಕರು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಬಳಿ ಪರೀಕ್ಷಾ ಕೇಂದ್ರಕ್ಕೆ ಹೋಗುವ ಮುನ್ನ ಶುಭ ಕೋರುತ್ತಿದ್ದರು. ಕೆಲವು ಶಾಲೆಯ ಶಿಕ್ಷಕರು ದೇವಾಲಯದಿಂದ ಪ್ರಸಾದ ತಂದು ವಿದ್ಯಾರ್ಥಿಗಳಿಗೆ ನೀಡಿ, ಹಣೆಗೆ ತಿಲಕ ವಿಟ್ಟು ಹಾರೈಸುತ್ತಿದ್ದ ದೃಶ್ಯ ಕಂಡು ಬಂತು.

ಮುಂದಿನ ಪರೀಕ್ಷೆ

ಮಾ.23ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ವಿಜ್ಞಾನ.

ಸುಸೂತ್ರವಾಗಿ ಪರೀಕ್ಷೆ ನಡೆದಿದೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೊದಲ ದಿನ ಪ್ರಥಮ ಭಾಷೆಯ ಪರೀಕ್ಷೆ ಯಾವುದೇ ಗೊಂದಲವಿಲ್ಲದೆ ಸುಸೂತ್ರವಾಗಿ ನೆರವೇರಿದೆ. 136 ಪರೀಕ್ಷಾ ಕೇಂದ್ರಗಳಲ್ಲಿ 35,596 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, 398 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

– ಉದಯ್‌ಕುಮಾರ್, ಡಿಡಿಪಿಐ

ರುದ್ರಾಕ್ಷಿಗಳ ಪ್ರದರ್ಶನ, ಮಾರಾಟ ಇಂದು ಕೊನೆ



ಮೈಸೂರು: ಯುಗಾದಿ ಹಬ್ಬದ ಅಂಗವಾಗಿ ಹೈದರಾಬಾದ್ ಮೂಲದ ಇಂಡ'ಸ್–ನೇಪಾಳ' ರುದ್ರಾಕ್ಷ ಸಂಸ್ಥೆ ವ'ತಿಯಿಂದ ಮೈಸೂರಿನ ಅಗ್ರಹಾರದಲ್ಲಿರುವ ಜೆಎಸ್‌ಎಸ್ ಆಸ್ಪತ್ರೆ ಎದುರು ಆಯೋಜಿಸಿರುವ ನೇಪಾಳ'ದ' ರುದ್ರಾಕ್ಷಿಗಳ' ಪ್ರದರ್ಶನ ಮತ್ತು ಮಾರಾಟ ಮಾ.19 ಕೊನೆ ದಿನವಾಗಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಈ ರುದ್ರಾಕ್ಷಿಗಳ ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ ಜಗತ್ತಿನಲ್ಲಿ ಅತ್ಯಂತ ವಿರಳವಾದ ದುಂಡುಮುಖದ ಒಂದು ಮುಖಿ ರುದ್ರಾಕ್ಷಿ, ರತ್ನದ ಹರಳುಗಳು ಲಭ್ಯವಿದೆ. ಅಲ್ಲದೇ ಯುಗಾದಿಯಂದು ರುದ್ರಾಕ್ಷಿ ಧರಿಸುವುದು ಶುಭದಾಯಕವಾಗಿರುವುದರಿಂದ ಅಂತಿಮ ದಿನವಾದ ಗುರುವಾರ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ರುದ್ರಾಕ್ಷಿ ಖರೀದಿಸುವಂತೆ ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ ಡಾ.ನರೇಂದ್ರ ಕಾಶಿರೆಡ್ಡಿ ಮೊ.ನಂ.: 7097296666 ಸಂಪರ್ಕಿಸಬಹುದು.

ಜಯಶ್ರೀಗೆ ಪಿಎಚ್.ಡಿ



ಮೈಸೂರು, ಮಾ.18– ಡಾ.ವಿಜಯ್ ಶೇಷಾದ್ರಿ ಅವರ ಮಾರ್ಗದರ್ಶನದಲ್ಲಿ, ಜಯಶ್ರೀ ಎಸ್.ಎಲ್ ಅವರು ಆಂಗ್ಲ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

6ನೇ ವರ್ಷದ ಸವಿನೆನಪು



ಹೆಚ್.ವಿ.ಹೇಮಲತಾ
19-03-2020

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷವಾದರು ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು
ಪಿ.ಎಸ್.ಕುಮಾರಸ್ವಾಮಿ
ಪುಷ್ಪಲ್, ರಜತ್,
ನವೀನ್ ಕುಮಾರ್,
ಹಾಗೂ
ಕುಟುಂಬವರ್ಗದವರು



ಪಿ ಎಂ ಶ್ರೀ ಪ್ರಾಯೋಗಿಕ ವಿದ್ಯಾಲಯ
पी एम श्री प्रयोगिक विद्यालय
PM SHRI DEMONSTRATION SCHOOL
Regional Institute of Education (NCERT) Mysuru - 06
(Affiliated to CBSE, New Delhi)
Regional Institute of Education (NCERT), Mysuru - 570006 Ph.No: 0821-2512570

ADMISSION NOTICE 2026-2027

The Application for admission to **Balvatika-I and Grade -I** for the academic year 2026-27 to be filled ONLINE (Google form) from **20.03.2026 at 12.00 noon to 29.03.2026 midnight 12.00 am.**

For further query please contact school office or visit school official website **www.dms.riemysore.ac.in & www.riemysore.ac.in**

Sd/- Dean of Instruction



ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

JSS HOSPITAL
JSS HOSPITAL IN SERVICE TO LIFE
MYSURU - 570 004

REQUIRED DUTY MEDICAL OFFICER

No: MED-II/HOS/EST/O1/2010-11

Applications are invited from competent and qualified professionals for the position of:

DUTY MEDICAL OFFICER / CASUALTY MEDICAL OFFICER

Qualification: MBBS

Freshers and retired medical officers can also apply.

Salary: Not a constraint for the right candidates.

Interested candidates are requested to send their biodata to **the Director, Medical Education Division, JSS Mahavidyapeetha, Mysuru,** or email it to **med@jssonline.org** within 7 days from the date of this notification.

Sd/- Director



PUBLIC NOTICE

Notice is hereby given to the public that my client intends to purchase the immovable property described in the Schedule hereunder from its owners Sri. S. Srinivas, Sri. Prem M. S., Smt. Bhavana R., and Sri. S. Muralidhar.

Any person having any right, title, interest, claim, lien, charge, mortgage, tenancy, inheritance or any other objection in respect of the said property is hereby required to notify the undersigned in writing with supporting documents within 7 days from the date of publication of this notice, failing which it shall be presumed that no such claim exists and the proposed purchase will be completed.

SCHEDULE OF PROPERTY

All that piece and parcel of vacant land bearing No. 23/B, situated at 1st Main, 4th Stage, Thonachikopal Layout, Mysuru, measuring 200.62 Sq.Mtrs., bounded by: North: House No. 24, East: CITB Model House, West: Road, South: House No. 22

Sd/- **Monish J S Kumar,** Advocate
4, 4th Main, Jayanagar,
Mysuru - 570014
email: monishjs.adv@gmail.com
Mob+91 99869 70705





PUBLIC NOTICE

My client intends to enter into Joint Development Agreement with respect to the lands mentioned in the Schedule hereunder with its owner, **M/s. Sira Realty Private Limited**, having its office at No. 324, Golden Point-4, First Floor, Thimmaiah Road, Off Queens Road Cross, Vasanthnagar, Bengaluru–560052. The owner represents and warrants that it is the absolute owner of the Schedule Property and that it has neither conveyed nor has entered into any Agreement of Sale/Development Agreement/Memorandum of Understanding nor has entered into any sort of arrangement with any person/s for sale/transfer/development of the Schedule Property and further represents that it has not encumbered, mortgaged, created any charge or lien on the Schedule Property in any manner and apart from them there are no other person/s, firm or company having any sort of right, title or claim over the Schedule Property. Any person/s having objection/s or claim/s, shall with documentary evidence, lodge their objection(s)/claim(s) **within fifteen (15) days** from the date of this notice with the Undersigned, failing which my client shall proceed with the above-mentioned transaction.

SCHEDULE

All that piece and parcel of the **Commercially** converted lands bearing **(i) Survey No. 106/2,** measuring **4 guntas**, **(ii) Survey No. 106/3**, measuring **14 guntas** and **(iii) Survey No. 106/4**, measuring **1 acre 32 guntas**, all situated at **Belavatha** Village, **Kasaba** Hobli, **Mysore** Taluk, Mysore District which is bounded on the:

East by : Property bearing Survey No. 106/1 & Canal
West by : Property bearing Survey No. 105
North by : Canal and
South by : Properties bearing Survey Nos. 106/1 & 106/5

Jayanth M Pattanshetti, Sushanth J Pattanshetti,
Jayanth Pattanshetti Associates LLP *Advocates,*
102, Ground Floor, "Rams Infantry Manor", No.70,
Infantry Road, Bengaluru-560001.
Ph: 080 41238516 / 9980530355
Place : Bengaluru Date : 18-03-2026

PUBLIC NOTICE

My Client is intended to purchase below mentioned Schedule Properties from B V Manjunatha & S Sharmila and they have acquired the title of the Schedule Properties through Sale deed & with other transactions. Any person having any right, title, interest, claim in or to the Schedule Properties or any part thereof by way of any agreement, contract, lease, trust, inheritance, gift, possession, mortgage, exchange or any such deed/instrument of transfer, easement or otherwise, may submit their objection(s), claim(s) by direct or in writing with us at the under mentioned address through Registered Post along with the supporting documentary proof, within Seven (7) days from the date of this publication. Any objections received thereafter will not be binding on my Client and my Client shall proceed with the Sale.

SCHEDULE

1. BV Manjunath- Sy. No. 75/1B (Old No. 75), measuring 1 Acre 22 Guntas, 2. BV Manjunath -Sy. No.74/1 extent 1.06 acres. 3. S Sharmila -Sy. No.74/4 extent 1.05 acres (0-05 guntas foot karab) excluding 1.00 acres. All properties are situated at Kenchalagudu Village, Jayapura Hobli, Mysore Taluk, Mysore District

Sd/- B.S Leena Devi Papanna
Advocate . Roll No: KAR1558/05
#9/1, V.V Mohalla, Mysore,
Mob: 9449135412
Date: 18.03.2026, Mysore

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀ. ರಾಚೇಗೌಡ, ಬಿನ್. ದೊಡ್ಡಮೊಗೆಗೌಡ, ವಯಸ್ಸು ಸುಮಾರು 59 ವರ್ಷ, ವಾಸ: ಕುಪ್ಪೆ ಗ್ರಾಮ, ಬೋಳನಹಳ್ಳಿ ಪೋಸ್ಟ್, ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಹಾಗೂ ಶ್ರೀ. ಪುರುಶೋತ್ತಮ ಕುಂಬ್ಳ, ಬಿನ್ ಕೆ. ಸೂರಪ್ಪಯ್ಯ ಇವರುಗಳು ಮೈಸೂರು ತಾಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿರುವ ಸರ್ವೆ ನಂಬರ್ 116/17 ಮತ್ತು 116/18 ರ ತಲಾ 0.17.08 [ಹದಿನೇಳುವರೆ ಗುಂಟೆ] ಖುಷ್ಕಿ ಜಮೀನನ್ನು ಇದರ ಸಂಪೂರ್ಣ ವಿವರಗಳನ್ನು ಈ ಸಾರ್ವಜನಿಕ ತಿಳುವಳಿಕೆಯ ಕೊನೆಯಲ್ಲಿ ಕಾಣಿಸಿರುವ ಅನುಸೂಚಿ-1 ಮತ್ತು 2 ರಲ್ಲಿ ವಿವರಿಸಲಾಗಿದೆ. ಅದರ ಮಾಲೀಕರಾದ ಶ್ರೀ.ಆರ್. ರಕ್ಷಿತ್, ಬಿನ್. ಬಿ.ಎಲ್. ರಾಜಶೇಖರ್, ವಾಸ: ಸಾಯಿರಾಂ ನಿಲಯ, ಆಂಜನೇಯ ಇಂಡಸ್ಟ್ರೀಸ್ ಹಿಂಭಾಗ, ಕೆ.ಎಂ. ರಸ್ತೆ, ಚಿಕ್ಕಮಗಳೂರು ಜಿಲ್ಲೆ [ಅನುಸೂಚಿ-1] ಹಾಗೂ ಅನುಸೂಚಿ-2 ಜಮೀನನ್ನು ಶ್ರೀ. ಗೌತಮ್. ಕೆ. ಬಿನ್. ಜಿ. ಕಾಂತರಾಜು, ಮನೆ ನಂಬರ್ 991/992, ಪೇಟೆ ಮುಖ್ಯ ರಸ್ತೆ, ಹೊಳೆನರಸೀಪುರ ಟೌನ್, ಹಾಸನ ಜಿಲ್ಲೆ, ಇವರುಗಳಿಂದ ಕ್ರಯಕ್ಕೆ ಖರೀದಿ ಮಾಡಲು ನಿರ್ಧರಿಸಿದ್ದು ಹಾಗೂ ಆ ರೀತಿ ಉದ್ದೇಶ ಹೊಂದಿದ್ದು, ಅನುಸೂಚಿ ಜಮೀನಿನ ಬಗ್ಗೆ ಸಂಬಂಧಪಟ್ಟಂತಹ ಯಾವುದೇ ವ್ಯಕ್ತಿಗಳಿಗಾಗಲಿ, ಸಂಸ್ಥೆಗಳಿಗಾಗಲಿ ಯಾವುದೇ ತೆರನಾದ ಹಕ್ಕು, ಆಸಕ್ತಿ, ಟೈಟಲ್, ಬಾಧ್ಯತೆ, ತಕರಾರು, ಅಧಿಕಾರ ಇತ್ಯಾದಿಗಳು ಇದ್ದಲ್ಲಿ ಈ ಸಾರ್ವಜನಿಕ ತಿಳುವಳಿಕೆ ಜಾರಿ ಆದ ದಿನದಿಂದ 15 ದಿನಗಳೊಳಗೆ ಸಂಬಂಧಪಟ್ಟವರು ಅ ರೀತಿ ಹಕ್ಕು, ಆಸಕ್ತಿ, ಟೈಟಲ್, ಬಾಧ್ಯತೆ, ಅಧಿಕಾರ, ತಕರಾರು ಇತ್ಯಾದಿಗಳನ್ನು ಸಾಬೀತು ಪಡಿಸುವ ಬಗ್ಗೆ ಅಗತ್ಯವಾದ ಸಕಲ ದಾಖಲಾತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿರುವ ವಕೀಲರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಆ ರೀತಿ 15 ದಿನಗಳೊಳಗೆ ಯಾವುದೇ ಹಕ್ಕು, ಆಸಕ್ತಿ, ಟೈಟಲ್, ಬಾಧ್ಯತೆ, ಅಧಿಕಾರ, ತಕರಾರು ಇತ್ಯಾದಿಗಳಿಗೆ ಸಂಬಂದಪಟ್ಟಂತೆ ಯಾವುದೇ ಆಕ್ಷೇಪಣೆ, ಬರದೇ ಇದ್ದಲ್ಲಿ, ಅಂತಹ ಯಾವುದೇ ತಕರಾರು, ಅಕ್ಷೇಪಣೆ ಇತ್ಯಾದಿಗಳು ಏನೂ ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಅನುಸೂಚಿ ಜಮೀನುಗಳನ್ನು ಕ್ರಯಕ್ಕೆ ಖರೀದಿಸುವ ಸಲುವಾಗಿ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಾರೆ. ಸದರಿ 15 ದಿನಗಳ ನಂತರ ಬಂದ ಅಥವಾ ಬರಬಹುದಾದ ಯಾವುದೇ ತಕರಾರು, ಆಕ್ಷೇಪಣೆಗಳು ನಮ್ಮ ಕಕ್ಷಿಗಾರರನ್ನು ಬದ್ಧಪಡಿಸುವುದಿಲ್ಲ ಹಾಗು ಅವುಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕ ತಿಳುವಳಿಕೆಯನ್ನು ನೀಡಲಾಗಿದೆ

ಅನುಸೂಚಿ

1.ಮೈಸೂರು ತಾಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿರುವ ಸರ್ವೆ ನಂಬರ್ 116/18 ರಲ್ಲಿ 0.17.08 [ಹದಿನೇಳುವರೆ ಗುಂಟೆ] ಖುಷಿ ಜಮೀನು. ಇದರ ಚಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂಬರ್ 116/8ಎ ರಲ್ಲಿ ಗೌತಮ್. ಕೆ ರವರಿಗೆ ಕ್ರಯಕ್ಕೆ ಕೊಟ್ಟಿರುವ ಸ್ವತ್ತು. ಪಶ್ಚಿಮಕ್ಕೆ : ಸರ್ವೆ ನಂಬರ್ 116/8ಎ ರ ಉಳಿಕೆ ಜಮೀನು, ಉತ್ತರಕ್ಕೆ : ಸರ್ವೆ ನಂಬರ್ 116/4 ರ ಜಮೀನು. ದಕ್ಷಿಣಕ್ಕೆ : ರಸ್ತೆ.2.

2.ಮೈಸೂರು ತಾಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿರುವ ಸರ್ವೆ ನಂಬರ್ 116/17 ರಲ್ಲಿ 0.17.08 [ಹದಿನೇಳುವರೆ ಗುಂಟೆ] ಖುಷಿ ಜಮೀನು. ಇದರ ಚಕ್ಕುಬಂದಿ: ಸರ್ವೆ ನಂಬರ್ 116/8ಎ ಉಳಿಕೆ ಜಮೀನು ಪೂರ್ವಕ್ಕೆ : ಪಶ್ಚಿಮಕ್ಕೆ : ಸರ್ವೆ ನಂಬರ್ 116/8ಎ ರ ಉಳಿಕೆ ಜಮೀನು. ಉತ್ತರಕ್ಕೆ : ಸರ್ವೆ ನಂಬರ್ 116/4 ರ ಜಮೀನು. ದಕ್ಷಿಣಕ್ಕೆ : ರಸ್ತೆ.

ಸಹಿ/- ಕೆ. ಸತ್ಯಶಂಕರ್ ರಾವ್
ವಕೀಲರು, ನಂ: 31/10, ಪಾಚಿ ಕಾಂಪ್ಲೆಕ್ಸ್, ಮಳಿಗೆ ನಂ 06 & 07,
2ನೇ ಮಹಡಿ, ಟಿ ನರಸೀಪುರ-ಮೈಸೂರು ಮುಖ್ಯ ರಸ್ತೆ,
ಚಾಮುಂಡಿ ವಿಹಾರ, ನಜ಼ರ್‌ಬಾದ್, ಮೈಸೂರು. ಮೊ: 9448345026

ದಿನಾಂಕ: 18-03-2026, ಸ್ಥಳ: ಮೈಸೂರು



ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ

E-Mail ID: itataff ulb krnagar@yahoo.co.in,
Phone(O): 08223-262242, Fax: 08223-262241

ಸಂಸಕೃ/ಜೆ.ಇ.01/ಟಿ.ಪ್ರ/ಪಿ.ಆರ್-04/2025-26 ದಿನಾಂಕ: 12/03/2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕೆ.ಆರ್ ನಗರ ಪುರಸಭೆ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಪುರಸಭಾ ನಿಧಿಯಡಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕಾಮಗಾರಿಗಳನ್ನು ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ **https://kppp.karnataka.gov.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆಂದು ತಿಳಿಸಿದೆ.

1. ಟೆಂಡರ್‌ನ್ನು ಸಲ್ಲಿಸಲು ಕಡೆಯ **ದಿನಾಂಕ: 27/03/2026 ಸಂಜೆ 5.30** ಗಂಟೆಯವರೆಗೆ 2. ಟೆಂಡರ್ ತೆರೆಯುವ **ದಿನಾಂಕ: 30/03/2026ರಂದು** ಕಛೇರಿಯ ಅವಧಿಯಲ್ಲಿ ಅಥವಾ ಮುಂದೆ ಸೂಚಿಸುವ /ನಿಗದಿಪಡಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ ಸಂ	ವಿವರ	ಮೀಸಲಾತಿಯ ವಿವರ	ಯೋಜನೆಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂಗಳಲ್ಲಿ
1.	DALA/2025-26/SE7182/CAL.1-2	ಸಾಮಾನ್ಯ	ಪುರಸಭಾ ನಿಧಿ	19.44	48,579/-
2.	DMA/2025-26/OW/WORK_INDENT 54849/CALL-2	ಸಾಮಾನ್ಯ	ಪುರಸಭಾ ನಿಧಿ	2,97	7,425/-
3.	DMA/2025-26/EL/WORK_INDENT54685	ಸಾಮಾನ್ಯ	ಪುರಸಭಾ ನಿಧಿ	33.32	66,640/-
4.	DMA/2025-26/IND5529/CALL-2	ಸಾಮಾನ್ಯ	ಪುರಸಭಾ ನಿಧಿ	9.83	25,000/-

ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳು ಇದ್ದರೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಕೆ.ಪಿ.ಪಿ.ಪಿ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-ಮಾನ್ಯ ಆಡಳಿತಾಧಿಕಾರಿಯವರು
ಪುರಸಭೆ, ಕೆ.ಆರ್.ನಗರ

ಸಹಿ/-ಮುಖ್ಯಾಧಿಕಾರಿ
ಪುರಸಭೆ, ಕೆ.ಆರ್.ನಗರ

DIPR/DDMYS/1846/KSMCA/1042/2025-26

ಮೈಸೂರು ಮಿತ್ರ

ಭ್ರಷ್ಟ ರಾಜ್ಯ ಸರ್ಕಾರ ದೇವಸ್ಥಾನದ ಹುಂಡಿ ಹಣವನ್ನೂ ಲೂಟಿ ಮಾಡುತ್ತಿದೆ

ಮಾಜಿ ಸಚಿವ ಸಾ.ರಾ.ಮಹೇಶ್ ವಾಗ್ದಾಳಿ



ಮಾಜಿ ಸಚಿವ ಸಾ.ರಾ.ಮಹೇಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮಾಜಿ ಶಾಸಕ, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್‌ಕುಮಾರ್, ಮಾಜಿ ಮೇಯರ್‌ಗಳಾದ ಎಂ.ಜೆ.ರವಿಕುಮಾರ್, ಆರ್.ಲಿಂಗಪ್ಪ, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ಇತರರಿದ್ದಾರೆ.

ಮೈಸೂರು,ಮಾ.18(ಎಂಟಿವೈ)– ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲೇ ಮುಳುಗಿದೆ. ದೇವಾಲಯದ ಹುಂಡಿ ಹಣವನ್ನೂ ಲೂಟಿ ಮಾಡುವ ದುಸ್ಥಿತಿಗೆ ತಲುಪಿದೆ ಎಂದು ಮಾಜಿ ಶಾಸಕ ಸಾ.ರಾ. ಮಹೇಶ್ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ತಮ್ಮ ಕಚೇರಿಯಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರವನ್ನು ಶೇ.40 ಪರ್ಸೆಂಟ್ ಸರ್ಕಾರ ಎಂದು ಆರೋಪಿಸಿ, ಜನರಿಗೆ ಭ್ರಷ್ಟಾಚಾರ ಮುಕ್ತ ಆಡಳಿತದ ಭರವಸೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈಗ ದೇವಾಲಯದಲ್ಲೂ ಲಂಚ ಪಡೆಯುತ್ತಿದೆ ಎಂದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಲ್ಲಿ ನಡೆದ ಧನುರ್ಮಾಸದ ಜಾತ್ರಾ ಮಹೋತ್ಸವದಲ್ಲಿ ಕೇವಲ ಪೇಂಟಿಂಗ್ ಕೆಲಸಕ್ಕೆ ಜಿಎಸ್‌ಟಿ ಹೊರತುಪಡಿಸಿ 5,27,639 ರೂ. ಬಿಲ್ ಮಾಡಲಾಗಿದೆ. ಈ ಹಿಂದೆ ಇದೇ ಕೆಲಸಕ್ಕೆ ಕೇವಲ 1 ಲಕ್ಷ ರೂ. ವೆಚ್ಚವಾಗುತ್ತಿತ್ತು. ಲೈಟಿಂಗ್ಸ್, ಸೌಂಡ್ ಸಿಸ್ಟಮ್ ಮತ್ತು ಬ್ಯಾರಿಕೇಡ್ ವ್ಯವಸ್ಥೆಗೆ 14,74,876 ರೂ. ಬಿಲ್ ಮಾಡಿದ್ದಾರೆ. ನಿರ್ಮಿತಿ ಕೇಂದ್ರದಿಂದ ಈ ಜಾತ್ರೆಗಾಗಿ 32 ಲಕ್ಷ ರೂ. ಡ್ರಾ ಮಾಡಲಾಗಿದೆ. ಈ ಜಾತ್ರೆಗೆ ಮೆರಗು ತುಂಬಲು ರೈತರು ಜಾನುವಾರು ಪ್ರದರ್ಶಿಸುತ್ತಾರೆ. ವ್ಯಾಪಾರಿಗಳು ಅಂಗಡಿಗಳನ್ನು ಹಾಕುತ್ತಾರೆ. ಆದರೆ, ಯಾವ ಕೆಲಸಕ್ಕೆ 32 ಲಕ್ಷ ರೂ. ಖರ್ಚು ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ಈ ಜಾತ್ರೆಗೆ 2019ರಲ್ಲಿ 4.47 ಲಕ್ಷ, 2020–21 (ಕೋವಿಡ್ ಸಮಯ) 21,000 ರೂ, ನಾನು ಶಾಸಕನಾಗಿದ್ದಾಗ 2022–23ರಲ್ಲಿ 3,74,600 ರೂ. ಖರ್ಚು ಮಾಡಲಾಗಿತ್ತು. ಈ ಬಾರಿ 32 ಲಕ್ಷ ಎಂದರೆ ಸರ್ಕಾರ ಎಷ್ಟು ಪರ್ಸೆಂಟ್ ಭ್ರಷ್ಟಾಚಾರ ಮಾಡುತ್ತಿದೆ ಎಂದು ಜನರೇ ತೀರ್ಮಾನಿಸಬೇಕು. ದೇವಾಲಯದ ಅಭಿವೃದ್ಧಿಗೆ ಬಳಸಬೇಕಾಗಿದ್ದ 80 ಲಕ್ಷ ರೂ. ಹುಂಡಿ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಸಿಎಂ ಜಿಲ್ಲೆಯಲ್ಲಿ ಈ ರೀತಿಯಾದರೆ ರಾಜ್ಯದ ಗತಿಯೇನು? ಈ ಭ್ರಷ್ಟಾಚಾರಗಳ ಹಿಂದೆ ಯಾರಿದ್ದಾರೆ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಆಸ್ಪತ್ರೆ, ಗ್ರಾ.ಪಂನಲ್ಲಿ ಭ್ರಷ್ಟಾಚಾರ: ಕೆ.ಆರ್.ನಗರದ ಜನರಲ್ ಆಸ್ಪತ್ರೆ ಮತ್ತು ಮಹಿಳಾ ಹಾಗೂ ಮಕ್ಕಳ ಆಸ್ಪತ್ರೆಯಲ್ಲಿ ಶುಲ್ಕ ಏರಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಹಿಂದೆ ಶುಲ್ಕವಿರಲಿಲ್ಲ. ಈಗ 10 ರೂ. ಮಾಡಲಾಗಿದೆ. ಜನರಲ್ ಆಸ್ಪತ್ರೆಗೆ 5 ರೂ. ಇದ್ದ ಶುಲ್ಕವನ್ನು ಹೆಚ್ಚಿಸಲಾಗಿದೆ. ಆಸ್ಪತ್ರೆಯಲ್ಲಿದ್ದ 60 ಲಕ್ಷ ರೂ. ಹಣ ಎಲ್ಲಿ ಖರ್ಚಾಗಿದೆ ಎಂಬ ಮಾಹಿತಿಯೇ ಇಲ್ಲ. ಸಾಲಿಗ್ರಾಮ ಗ್ರಾ.ಪಂ. ಪಿಡಿಒ ಒಬ್ಬರನ್ನು ರಜೆಯ ಮೇಲೆ ಕಳುಹಿಸಿ ಕೇವಲ 15 ದಿನಗಳಲ್ಲಿ ಹಳೆಯ ಡೇಟ್ ಹಾಕಿ ಗ್ರಾ.ಪಂ. ಖಾತೆಯಿಂದ 44 ಲಕ್ಷ ರೂಪಾಯಿ ಹಣ ಡ್ರಾ ಮಾಡಲಾಗಿದೆ ಎಂದು ದೂರಿದರು.

ದಿವಾಳಿ ಸರ್ಕಾರ: 17 ಬಾರಿ ದಾಖಲೆಯ ಬಜೆಟ್ ಮಂಡಿಸಿದ್ದೇನೆ ಎಂದು ಹೇಳಿಕೊಳ್ಳುವ ಸಿಎಂ ಸಿದ್ದರಾಮಯ್ಯ ರಾಜ್ಯವನ್ನು ದಿವಾಳಿಯತ್ತ ಕೊಂಡೊಯ್ಯುತ್ತಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಸರ್ಕಾರ ದಿವಾಳಿಯಾಗಿರುವುದು ತಿಳಿಯುತ್ತದೆ. 2018–19ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ ಬಜೆಟ್‌ನ ಶೇ.24 ರಷ್ಟು ಹಣವನ್ನು ಅಭಿವೃದ್ಧಿ ಕೆಲಸಗಳಿಗೆ (ಬಂಡವಾಳ ವೆಚ್ಚ) ಮೀಸಲಿಡಲಾಗುತ್ತಿತ್ತು. ಆದರೆ, 2026–27ರ ಬಜೆಟ್‌ನಲ್ಲಿ ಇದು ಕೇವಲ ಶೇ.16.7ಕ್ಕೆ ಕುಸಿದಿದೆ. ಅಭಿವೃದ್ಧಿ ಕೆಲಸಗಳಿಗೆ ಶೇ.10ರಷ್ಟು ಹಣ ಕಡಿತವಾಗಿದೆ. ಹಿಂದಿನ ಎಲ್ಲಾ ಸಿಎಂಗಳು ಸೇರಿ ಮಾಡಿದ್ದ ಒಟ್ಟು ಸಾಲ 3.27 ಲಕ್ಷ ಕೋಟಿ. ಇದನ್ನು ಸಿಎಂ ಸಿದ್ದರಾಮಯ್ಯ 8.24 ಲಕ್ಷ ಕೋಟಿಗೆ ಏರಿಸಿದ್ದಾರೆ. ವೋಟ್ ಬ್ಯಾಂಕ್ ರಾಜಕಾರಣ ಬಿಟ್ಟು ಅಭಿವೃದ್ಧಿ ಮಾಡಿ. ದೂರದೃಷ್ಟಿಯ ಯೋಜನೆಗಳನ್ನು ಜಾರಿಗೆ ತನ್ನಿ. ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಕಡೆ ಗಮನಹರಿಸಿ ಎಂದು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್‌ಕುಮಾರ್, ಮಾಜಿ ಮೇಯರ್‌ಗಳಾದ ಎಂ.ಜೆ.ರವಿಕುಮಾರ್, ಆರ್.ಲಿಂಗಪ್ಪ, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಮುಖಂಡರಾದ ಸೋಮಣ್ಣ, ಅಶ್ವಿನಿ ಅನಂತು, ಮಾಜಿ ಜಿ.ಪಂ ಅಧ್ಯಕ್ಷ ದ್ವಾರಕೀಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಾಸಕ ಜಿ.ಟಿ.ದೇವೇಗೌಡ ನಮ್ಮಲ್ಲಿಲ್ಲ

ಮೈಸೂರು ಭಾಗದಲ್ಲಿ ಪಕ್ಷವನ್ನು ಏಕಾಂಗಿಯಾಗಿ ಕಟ್ಟಿದ್ದೇನೆ, 2028ರ ಚುನಾವಣೆಗೂ ಜೆಡಿಎಸ್‌ನಿಂದಲೇ ಸ್ಪರ್ಧೆ ಮಾಡುತ್ತೇನೆ ಎಂಬ ಶಾಸಕ ಜಿ.ಟಿ.ದೇವೇಗೌಡ ಹೇಳಿಕೆಗೆ ಪ್ರತಿಕ್ರಿಯಿಸಿದ ಸಾರಾ ಮಹೇಶ್, ಜಿ.ಟಿ.ದೇವೇಗೌಡರು 2006ರಿಂದ 13ರವರೆಗೆ ಎಲ್ಲಿದ್ದರು? ಅಂದು ಜಿ.ಪಂ, ಪಾಲಿಕೆಯಲ್ಲಿ ಜೆಡಿಎಸ್ ಅಧಿಕಾರದಲ್ಲಿರಲಿಲ್ಲವೇ?. ಪ್ರಸ್ತುತ ಜಿ.ಟಿ.ದೇವೇಗೌಡರು ನಮ್ಮ ಜೊತೆಯಲ್ಲಿ ಇಲ್ಲ. ಕುಮಾರಸ್ವಾಮಿ ಅವರೇ ಅದನ್ನು ಸ್ಪಷ್ಟಪಡಿಸಿದ್ದಾರೆ. ಅಲ್ಲಿಗೆ ಎಲ್ಲಾ ವಿಚಾರವೂ ಮುಗಿದಿದೆ. ಇಷ್ಟರ ಮೇಲೂ ಮುಂದಿನ ದಿನದಲ್ಲಿ ಪಕ್ಷದ ವರಿಷ್ಠರು ಬೇರೆ ಏನಾದರು ತೀರ್ಮಾನ ತೆಗೆದುಕೊಂಡರೆ ಅದಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಈಗಾಗಲೇ ಪಕ್ಷದ ಕಷ್ಟ ಸುಖ ಎರಡರಲ್ಲೂ ಜೊತೆಯಿರುವ ಮುಖಂಡನನ್ನು ಹುಡುಕುತ್ತಿದ್ದೇವೆ. ಈ ಕುರಿತು ಕುಮಾರಸ್ವಾಮಿ ಅವರು ಸ್ಪಷ್ಟ ಪಡಿಸಿದ್ದಾರೆ. ಅವರ ನಿರ್ಧಾರವೇ ಅಂತಿಮ. ನಾನು ಹಿಂದೆ ಬಿಜೆಪಿಯಲ್ಲಿದ್ದೆ. ನಂತರ ಜೆಡಿಎಸ್‌ಗೆ ಬಂದೆ. ನಾವು ಎಲ್ಲಿದ್ದೇವೊ, ಅಲ್ಲಿ ನಿಷ್ಠರಾಗಿರಬೇಕು. ನಾವಿರುವ ಪಕ್ಷ ನಮಗೆ ತಾಯಿ ಇದ್ದಂತೆ. ಜಿಟಿಡಿ ನಮ್ಮ ಪಕ್ಷದಲ್ಲೇ ಇದ್ದು ಕೆ.ಆರ್.ನಗರಕ್ಕೆ ಬಂದು ಏನು ಮಾಡಿದರು. ಸಹಕಾರ ಚುನಾವಣೆಯಲ್ಲಿ ಯಾವ ಪಕ್ಷಕ್ಕೆ ಸಹಾಯ ಮಾಡಿದರು. ಇದೆಲ್ಲವೂ ನಮಗೆ ಗೊತ್ತಿದೆ ಎಂದರು.

ಜಿಟಿಡಿಯ ನಿಷ್ಠೆ, ಪ್ರಾಮಾಣಿಕತೆ, ಬದ್ಧತೆ ಎಲ್ಲವನ್ನೂ ಪಕ್ಷದ ಹೈಕಮಾಂಡ್ ಗಮನಿಸಿಯೇ ಮಹತ್ವದ ನಿರ್ಧಾರ ಕೈಗೊಂಡಿದೆ. ಹೆಚ್.ಡಿ.ಕುಮಾರಸ್ವಾಮಿ ಅವರೇ ಜಿ.ಟಿ.ದೇವೇಗೌಡರು ನಮ್ಮೊಂದಿಗೆ ಇಲ್ಲ ಎಂದು ಹೇಳಿದ್ದಾರೆ. ಚುನಾವಣೆಗೆ ಇನ್ನೂ ಎರಡೂವರೆ ವರ್ಷಗಳಿವೆ. ಹೈ ಕಮಾಂಡ್ ಅವರಿಗೇ ಟಿಕೆಟ್ ನೀಡಿದರೆ ನಮ್ಮ ಅಭ್ಯಂತರ ಇಲ್ಲ ಎಂದು ಸಾ.ರಾ.ಮಹೇಶ್ ತಿಳಿಸಿದರು.

ಯುಗಾದಿ, ರಂಜಾನ್ ಹಬ್ಬದಂದು ಶಾಂತಿ ಸೌಹಾರ್ದತೆ ಕಾಪಾಡಿ

ಅನ್ಯ ಧರ್ಮದ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದರೆ ಕಠಿಣ ಕ್ರಮ: ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಎಚ್ಚರಿಕೆ



ಯುಗಾದಿ, ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಶಾಂತಿ ಸಭೆ ನಡೆಯಿತು.

ಮೈಸೂರು, ಮಾ.18(ಬಿಎಲ್‌ಯು)– ಯುಗಾದಿ ಹಾಗೂ ರಂಜಾನ್ ಹಬ್ಬವನ್ನು ಶಾಂತಿ ಸೌಹಾರ್ದತೆಯಿಂದ ಆಚರಿಸಬೇಕು. ಸೋಷಿಯಲ್ ಮೀಡಿಯಾದಲ್ಲಿ ಅನ್ಯ ಧರ್ಮದ ಬಗ್ಗೆ ಅವಹೇಳನಕಾರಿ ವಿಚಾರ ಪೋಸ್ಟ್ ಮಾಡಿದರೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಎಚ್ಚರಿಸಿದ್ದಾರೆ.

ಯುಗಾದಿ ಹಾಗೂ ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಮೈಸೂರು ಪೊಲೀಸ್ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಹಿಂದೂ ಹಾಗೂ ಮುಸ್ಲಿಂ ಧರ್ಮಿಯರು ಪರಸ್ಪರ ಹೊಂದಾಣಿಕೆ ಹಾಗೂ ಬಾಂಧವ್ಯದಿಂದ ಹಬ್ಬ ಆಚರಣೆ ಮಾಡಬೇಕೆಂದು ಸಲಹೆ ನೀಡಿದರು.

ಯಾವುದೇ ಗಲಾಟೆಗೆ ಅವಕಾಶ ನೀಡದಂತೆ ಆಯಾ ಭಾಗದ ಮುಖಂಡರು ಎಚ್ಚರಿಕೆ ವಹಿಸಬೇಕು. ಈ ಮೂಲಕ ಮೈಸೂರು ನಗರದಲ್ಲಿ ಶಾಂತಿ, ಸೌಹಾರ್ದತೆ ಕಾಪಾಡಬೇಕು ಎಂದರು.

> **ರಂಜಾನ್ ಹಬ್ಬದಂದು ಸಾಮೂಹಿಕ ಪ್ರಾರ್ಥನೆ ನಡೆಯುವ ಈದ್ಗಾ ಮೈದಾನದ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗುವುದು. ಕೆಎಸ್‌ಆರ್ ಪಿ ಹಾಗೂ ಹೋಂ ಗಾರ್ಡ್ ಸಿಬ್ಬಂದಿಗಳನ್ನು ಬಂದೋಬಸ್ತ್‌ಗೆ ನಿಂಯೋಜಿಸಲಾಗುವುದು. ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗುವುದು.**
> **–ಸೀಮಾ ಲಾಟ್ಕರ್, ಪೊಲೀಸ್ ಆಯುಕ್ತೆ**

ಈ ವೇಳೆ ಮಾತನಾಡಿದ ಕೆಲವು ಮುಸ್ಲಿಂ ಮುಖಂಡರು, ರಂಜಾನ್ ಹಬ್ಬದ ದಿನದಂದು ಸಾಮೂಹಿಕ ಪ್ರಾರ್ಥನೆ ನಡೆಯುವ ಬನ್ನಿಮಂಟಪದ ಈದ್ಗಾ ಮೈದಾನದ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಬೇಕು. ವಾಹನಗಳು ಸಂಚರಿಸಿದರೆ ಅಲ್ಲಿ ಪ್ರಾರ್ಥನೆ ಮಾಡಲು ತೊಂದರೆ ಆಗುತ್ತದೆ. ಪ್ರಾರ್ಥನೆ ಮುಗಿಯುವ ತನಕ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಮನವಿ ಸಲ್ಲಿಸಿದರು.

ಈದ್ಗಾ ಮೈದಾನದ ಬಳಿ ನೀವು ಕೇಳಿರುವ ರಸ್ತೆಯಲ್ಲಿ ಪ್ರಾರ್ಥನೆ ಮುಗಿಯುವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗುವುದು. ನಿಮ್ಮ ಏನೆ ಸಮಸ್ಯೆ ಇದ್ದರೂ ಅದನ್ನು ಪರಿಹರಿಸಲಾಗುವುದು. ಆದರೆ ಶಾಂತಿ ಕಾಪಾಡಬೇಕು. ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡಬಾರದು ಎಂದು ಸಲಹೆ ನೀಡಿದರು.

ಮೈಸೂರಿನಲ್ಲಿ ಡ್ರಗ್ಸ್ ನಿಯಂತ್ರಣ ಮಾಡುವಲ್ಲಿ ಪೊಲೀಸರು ಪರಿಣಾಮಕಾರಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ರಾತ್ರಿ 10 ಗಂಟೆಗೆ ಅಂಗಡಿ, ಮುಂಗಟ್ಟುಗಳನ್ನು ಮುಚ್ಚಿಸುತ್ತಿದ್ದಾರೆ. ಈ ಮೂಲಕ ಸಾರ್ವಜನಿಕರ ಸಮಸ್ಯೆ ಪರಿಹಾರಕ್ಕೆ ಸಕರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು ಮೆಚ್ಚುಗೆ ವ್ಯಕ್ತಪಡಿಸಿದರು. ಡಿಸಿಪಿ ಸುಂದರ್ ರಾಜ್ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಒಳ ಮೀಸಲಾತಿ ರದ್ದಿಗೆ ಆಗ್ರಹಿಸಿ ಮಾ.23, ವರುಣದಿಂದ ಮೈಸೂರುವರೆಗೆ ಕಾಲ್ನಡಿಗೆ ಜಾಥಾ

ಮೈಸೂರು, ಮಾ.18(ಜಿಎ)–ಅವೈಜ್ಞಾನಿಕವಾಗಿ ಹಂಚಿಕೆ ಮಾಡಲಾದ ಒಳ ಮೀಸಲಾತಿ ಕಾಯ್ದೆ ರದ್ದುಗೊಳಿಸಬೇಕೆಂದು ಆಗ್ರಹಿಸಿ ಮಾ.23ರಂದು ಬೆಳಗ್ಗೆ 10.30ಕ್ಕೆ ವರುಣ ಗ್ರಾಮದಿಂದ ಮೈಸೂರು ಡಿಸಿ ಕಚೇರಿವರೆಗೆ ಕಾಲ್ನಡಿಗೆ ಜಾಥಾವನ್ನು ವರುಣ ವಿಧಾನಸಭಾ ಕ್ಷೇತ್ರದ ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಥದಲ್ಲಿ ಸುಮಾರು 600 ರಿಂದ 800 ಮಂದಿ ಪಾಲ್ಗೊಂಡು ಡಿಸಿ ಕಚೇರಿ ತಲುಪಿ ಮನವಿಪತ್ರ ಸಲ್ಲಿಸಲಾಗುವುದು ಎಂದರು.

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿನ 101 ಜಾತಿಗಳಿಗೆ ಒಳ ಮೀಸಲಾತಿಯನ್ನು ವೈಜ್ಞಾನಿಕವಾಗಿ ಹಂಚಿಕೆ ಮಾಡಲು ಸಾಧ್ಯವೇ ಇಲ್ಲ. ಅದು ಸರ್ಕಾರ, ನ್ಯಾಯಾಲಯಗಳಿಗೂ ತಿಳಿದಿರುವ ವಿಷಯವಾಗಿದೆ. ಶಾಲಾ ದಾಖಲಾತಿ, ನೇಮಕಾತಿ, ಬಡ್ತಿ ವಿಚಾರಗಳಲ್ಲಿ ಇದು ಇನ್ನಷ್ಟು ಕಗ್ಗಂಟಾಗಲಿದೆ. ಆದರೂ ಸಹಾ ಆಳುವ ಸರ್ಕಾರಗಳು ಒಳ ಮೀಸಲಾತಿ ವಿಚಾರವನ್ನು ಮುನ್ನೆಲೆಗೆ ತಂದು ಇಡೀ ಪರಿಶಿಷ್ಟ ಜಾತಿಯನ್ನು ಬಗೆಹರಿಸಲಾಗದ ಗೊಂದಲಕ್ಕೆ ಸಿಲುಕಿಸಿವೆ ಎಂದು ಆರೋಪಿಸಿದರು.

ಪ್ರಸಕ್ತ ನಾಗಮೋಹನ್ ದಾಸ್ ವರದಿಯಲ್ಲಿ ಮಾಡಿರುವ ವರ್ಗೀಕರಣಗಳಿಗೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ. ಸಮಾನ ಶೋಷಿತ ಸಮುದಾಯಗಳನ್ನು ಯಾವುದೇ ಕುಲಶಾಸ್ತ್ರೀಯ ಅಧ್ಯಯನಗಳಿಲ್ಲದೇ ಬೇರೆ ಬೇರೆ ಗುಂಪುಗಳನ್ನಾಗಿ ವರ್ಗೀಕರಿಸಿರುವುದು; ಶತ ಶತಮಾನಗಳಿಂದ ವಂಚನೆಗೊಳಗಾದ ಬಹು ಸಂಖ್ಯಾತ ಅಸ್ಪೃಶ್ಯ ಸಮುದಾಯಗಳಿಗೆ ಹಲವು ನೇಮಕಾತಿಗಳಲ್ಲಿ ಅರ್ಜಿಯನ್ನೇ ಹಾಕಲಾಗದೇ ಮತ್ತೊಮ್ಮೆ ಶೋಷಣೆಗೊಳಗಾಗಬೇಕಾದ ಪರಿಸ್ಥಿತಿಗೆ ದೂಡಲಾಗಿದೆ ಎಂದರು.

ಹಲವಾರು ಲೋಪಗಳಿಗೆ ನಾಗಮೋಹನ ದಾಸ್ ಒಳಮೀಸಲಾತಿ ವರ್ಗೀಕರಣ ಕಾರಣವಾಗಿದೆ. ಹೀಗಾಗಿ ಈ ಎಲ್ಲ ಕಾರಣಗಳಿಂದ ಒಳ ಮೀಸಲಾತಿ ಕಾಯ್ದೆ ರದ್ದುಗೊಳಿಸಿ ಈ ಹಿಂದೆ ಇದ್ದ ಹಳೇ ಮೀಸಲಾತಿಯನ್ನು ಮುಂದುವರಿಸುವಂತೆ ಆಗ್ರಹಿಸಿ ಈ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.3.2026 ಗುರುವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಉತ್ತರಭಾದ್ರ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಕುತ್ತಿಗೆ, ಬೆನ್ನು ನೋವಿಗೆ ಆಕ್ಯೂಪಂಕ್ಚರ್, ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಪಿಸಿಒಡಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9.30 ರಿಂದ.

■ **ದೀನಾಶ್ರಮ ತೋಟ, ಬೆಳ್ಳಿವನ :** ದೀನಾಶ್ರಮ ಸ್ಥಾಪಕರ ಸ್ಮರಣಾರ್ಥ ದಿವ್ಯ ಬಲಿಪೂಜೆ, ಉಪಸ್ಥಿತರು: ಡಾ.ಮರಿ ಜೋಸೆಫ್, ಫಾ.ಎಫ್.ಮೈಕಲ್, ಸ್ಥಳ: ದೀನಾಶ್ರಮ ತೋಟ, ನಾಯ್ಡುನಗರ, ಬೆಳಗ್ಗೆ 10.30ಕ್ಕೆ.

■ **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್:** ಸ್ವಾಮಿ ಎ.ಪಾರ್ಥಸಾರಥಿ ಅವರ ಶಿಷ್ಯೆ ಸುನಂದಜಿ ಅವರಿಂದ ಸತ್ಯದ ಹಾದಿ ಕುರಿತು ಉಪನ್ಯಾಸ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ.ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಾ.ಪಿ.ಎಸ್. ಮುರಳೀಧರ್, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಮಹಿಳಾ ರಂಗ, ವಿಶೇಷ ಕಾರ್ಯಕ್ರಮ ಯುಗಾದಿ ಕವಿಗೋಷ್ಠಿ, ಪ್ರಸ್ತುತಿ–ದಿಗ್ವಿಜಯ್ .ಬಿ, 9.25 ರೂಪಕ ಯುಗಾದಿ ಹೊಸಹಾದಿ, ರಚನೆ – ಸಿ.ಎಸ್.ಪೂರ್ಣಿಮಾ, ನಿರ್ಮಾಣ–ಕೀರ್ತನಾ ವಿ., 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ.ಕೆ.ವಾಗೀಶ್–ಹಾಡುಗಾರಿಕೆ, 11.00 ಸುತ್ತ ಮುತ್ತ, ಪ್ರಸ್ತುತಿ–ಚಂದನಾ .ಸಿ, ನಿತಿನ್ ರಾಜಾರಾಂ ಶಾಸ್ತ್ರೀ, ಅರ್ಚನಾ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃ ಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಹಣ್ಣು ಹೊನ್ನು ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ ದೇಸಿ ಹಣ್ಣು, ತರಕಾರಿಗಳ ಬೇಸಾಯ, ಮಾರಾಟ ಮತ್ತು ಬೀಜೋತ್ಪಾದನೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಮೈಸೂರಿನ ಸಿ.ಎನ್. ಕೇಶವಮೂರ್ತಿ ಮತ್ತು ಮೈಸೂರಿನ ಸಹಜ ಸೀಡ್ಸ್ ಸಂಸ್ಥೆಯ ಉತ್ಪಾದನಾ ವ್ಯವಸ್ಥಾಪಕರಾದ ಕೆ. ಎಸ್. ಮಂಜು, ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಯುವವಾಣಿ–ಯುಗಾದಿ ಕವಿಗೋಷ್ಠಿ. ಪ್ರಸ್ತುತಿ–ದಿಗ್ವಿಜಯ್ ಬಿ., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಜೆ. ಶ್ರೀನಿವಾಸ ಐಯ್ಯಂಗಾರ್ –ವೀಣಾವಾದನ, 10.00 ನಾಟಕ–ಮುಖವಾಡ ಹೊದ್ದ ಮನಸ್ಸು, 10.30 ಸವಿನೆನಪು

ಸುತ್ತೂರಿನಲ್ಲಿಂದು

■ **ಸುತ್ತೂರು ಶ್ರೀ ಕ್ಷೇತ್ರ :** ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಪ್ರಾತಃಕಾಲ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಬೆಳಗ್ಗೆ 8.00ಕ್ಕೆ ಶ್ರೀಮಠದ ಹಾಗೂ ಗ್ರಾಮದ ಹೊನ್ನೇರು ಬಂಡಿಗಳು ಮಂಗಳವಾದ್ಯ ಹಾಗೂ ಕಲಾತಂಡಗಳೊಂದಿಗೆ ಶ್ರೀಮಠದಿಂದ ಹೊರಟು, ಭೂಮಿತಾಯಿಗೆ ಪೂಜೆ ಸಲ್ಲಿಸಿ, ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ, ಬೆಳಗ್ಗೆ 9.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಂದ ಭಕ್ತಿ ಗೀತೆಗಳ ಕಾರ್ಯಕ್ರಮ, 10.30ಕ್ಕೆ ಹೊಳಲ್ಕೆರೆಯ ಕೊಟ್ರೆ ನಂಜಪ್ಪ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ.ಜಿ.ವಿ.ಮಂಜುನಾಥ ಅವರಿಂದ ಅಲ್ಲಮಪ್ರಭು ಜೀವನ ಮತ್ತು ವಚನ ವೈಭವ ವಿಷಯ ಕುರಿತು ಉಪನ್ಯಾಸ, ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟವಾಗಿರುವ ಶ್ರೀ ಪರಾಭವ ನಾಮ ಸಂವತ್ಸರದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವನ್ನು ಪಂಚಾಂಗಕರ್ತರಾದ ಸಿದ್ಧಾಂತಿ ಡಾ.ಕೆ.ಜಿ.ಪುಟ್ಟಹೊನ್ನಯ್ಯ ಅವರಿಂದ ಪಠಣ, ಸಂವಾದ, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾ.

ಪುನೀತ್ ರಾಜ್‌ಕುಮಾರ್ 51ನೇ ಹುಟ್ಟುಹಬ್ಬ



ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಪುನೀತ್ ರಾಜ್‌ಕುಮಾರ್ ಅವರ 51ನೇ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಪುನೀತ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಸಾರ್ವಜನಿಕರಿಗೆ ಪಾನಕ ವಿತರಿಸಲಾಯಿತು. ಮಾಜಿ ಸಂಸದ ಪ್ರತಾಪ್‌ಸಿಂಹ, ಚಿತ್ರನಟ ಸೋಮಣ್ಣ, ಬಿ.ಎಸ್.ರವಿ, ಮಹೇಶ್, ದೊರೆ, ಮಂಜು, ವಿಶ್ವನಾಥ್ ಇನ್ನಿತರರಿದ್ದರು.

ವಿಜಯನಗರದಲ್ಲಿ ಅಂಗಡಿಗಳ ತೆರವು

ಬುಲ್ಡೋಜರ್ ಸಂಸ್ಕೃತಿ ಎಂದ ಎಸ್‌ಡಿಪಿಐ

ಮೈಸೂರು, ಮಾ.18(ಜಿಎ)–ಮೈಸೂರಿನ ವಿಜಯನಗರದಲ್ಲಿ ರಸ್ತೆಬದಿ ವ್ಯಾಪಾರಿಗಳ ಅಂಗಡಿಗಳನ್ನು ಬುಲ್ಡೋಜರ್ ಸಂಸ್ಕೃತಿ ಅನುಸರಿಸಿ ನೆಲಸಮಗೊಳಿಸಿರುವುದನ್ನು ಎಸ್‌ಡಿಪಿಐ ಖಂಡಿಸುತ್ತದೆ ಹಾಗೂ ಸಂತ್ರಸ್ತರಿಗೆ ಕೂಡಲೇ ಪುನರ್ವಸತಿ ಕಲ್ಪಿಸಬೇಕೆಂದು ಆಗ್ರಹಿಸುತ್ತದೆ ಎಂದು ಜಿಲ್ಲಾಧ್ಯಕ್ಷ ರಫತ್‌ಖಾನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿರುದ್ಯೋಗಿ ಯುವಕರು ಅಂಗಡಿಗಳನ್ನು ಇರಿಸಿಕೊಂಡು ಜೀವನ ಕಟ್ಟಿಕೊಂಡಿದ್ದರು. ಆದರೆ ಅಂಗಡಿಗಳ ಮೇಲ್ಭಾಗದಲ್ಲಿ ಹೈಟೆನ್ಷನ್ ವಿದ್ಯುತ್ ಲೈನ್ ಇದೆ ಎಂಬ ಕಾರಣ ನೀಡಿ ಅಧಿಕಾರಿಗಳು ಅಂಗಡಿಗಳನ್ನು ತೆರವುಗೊಳಿಸಿದ್ದಾರೆ. ಈ ಬಳಿಕ ಅವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿಲ್ಲ. ಹೀಗಿದ್ದರೂ ಸ್ಥಳೀಯ ಶಾಸಕರು ಇವರ ನೆರವಿಗೆ ಬಾರದಿರುವುದು ವಿಷಾದದ ಸಂಗತಿ ಎಂದರು. ರಾಜ್ಯದಲ್ಲಿ ನಡೆಸುತ್ತಿರುವ ಬುಲ್ಡೋಜರ್ ಸಂಸ್ಕೃತಿ ಕೂಡಲೇ ನಿಲ್ಲಿಸಬೇಕು, ಅಂಗಡಿ ತೆರವುಗೊಳಿಸಿದುದರಿಂದ ಆಗಿರುವ ನಷ್ಟ ಭರಿಸಿಕೊಡಬೇಕು. ರಾಜ್ಯದಲ್ಲಿ ಖಾಲಿ ಇರುವ 3 ಲಕ್ಷ ಉದ್ಯೋಗ ಕೂಡಲೇ ಭರ್ತಿ ಮಾಡಬೇಕು. ಇಲ್ಲದಿದ್ದರೆ ಎಸ್‌ಡಿಪಿಐ ತೀವ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.

ಮಾ.22 ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಮಾ.18– ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ ಹಾಗೂ ಅರವಿಂದ ಕಣ್ಣಿನ ಆಸ್ಪತ್ರೆ ಕೊಯಮತ್ತೂರು ವತಿಯಿಂದ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಮಾ.22ರಂದು ಬೆಳಗ್ಗೆ 7.30ರಿಂದ ಮಧ್ಯಾಹ್ನ 12.30 ರವರೆಗೆ ಮೈಸೂರಿನ ಮಂಡಿಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9448753597, 9916155453 ಮೂಲಕ ಸಂಪರ್ಕಿಸುವಂತೆ ಶಿಬಿರದ ಆಯೋಜಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫಲವತ್ತಾದ ಭೂಮಿಯಲ್ಲಿ ಕೈಗಾರಿಕೆಗಳು ಬೇಡ

ಪ್ರಸ್ತಾಪ ಕೈಬಿಡದಿದ್ದರೆ ರೈತರಿಂದ ಉಗ್ರ ಹೋರಾಟ

ಮೈಸೂರು, ಮಾ.18(ಜಿಎ)–ನಂಜನಗೂಡು ತಾಲೂಕಿನ ಮುದ್ದಹಳ್ಳಿ, ಯಲಚಗೆರೆ, ಸಿಂಧುವಳ್ಳಿ ಗ್ರಾಮಗಳಲ್ಲಿನ ಫಲವತ್ತಾದ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ನಿಯಮಬಾಹಿರವಾಗಿ ಸ್ವಾಧೀನಪಡಿಸಿಕೊಳ್ಳುವುದನ್ನು ಸರ್ಕಾರ ಕೈಬಿಡಬೇಕು. ಇಲ್ಲದಿದ್ದರೆ ತೀವ್ರ ಹೋರಾಟ ನಡೆಸಲಾಗುವುದು ಎಂದು ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ಪದಾಧಿಕಾರಿ ಮಂಜುಕಿರಣ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಗ್ರಾಮಗಳ 448 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಮೊದಲಿನಿಂದಲೂ ರೈತರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇವು ಫಲವತ್ತಾದ ಭೂಮಿಗಳಾಗಿವೆ. ಇದರ ಅರಿವಿದ್ದ ಕಾರಣ ಶಾಸಕರು ಮೊದಲು ರೈತರ ನೆರವಿಗೆ ಬರುವುದಾಗಿ ತಿಳಿಸಿ ಭರವಸೆ ನೀಡಿದ್ದರೂ, ಈಗ ಯಾರದೋ ಒತ್ತಡಕ್ಕೆ ಮಣಿದು ಅಸಹಾಯಕರಾಗಿರುವುದು ಸರಿಯಲ್ಲ ಎಂದರು. 2003ರಲ್ಲಿಯೇ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಸುಮಾರು 19 ವರ್ಷಗಳ ವಿಳಂಬ ನಡೆದಿದೆ. ಇದು ನಿಯಮಬಾಹಿರ. ಈ ಅವಧಿಯಲ್ಲಿ ರೈತರ ತಮ್ಮ ಜಮೀನು ಸ್ವಾಧೀನ ಪಡಿಸಿಕೊಳ್ಳುವುದಿಲ್ಲ ಎಂಬ ನಿರೀಕ್ಷೆಯಿಂದ ಪಂಪ್‌ಸೆಟ್, ದೀರ್ಘ ಕಾಲದ ಬೆಳೆಗಳನ್ನು ಕೈಗೊಂಡಿದ್ದಾರೆ ಇದರಿಂದಾಗಿ ಇವರಿಗೆ ಈಗ ಭಾರೀ ಆತಂಕವುಂಟಾಗಿದೆ. ಹೀಗಾಗಿ ಎಲ್ಲ ನಿಯಮಗಾಳಿಗೆ ತೂರಿ ಸ್ವಾಧೀನಕ್ಕೆ ಮುಂದಾಗಿರುವ ಸರ್ಕಾರ ತನ್ನ ನಿರ್ಧಾರ ಕೈಬಿಡದಿದ್ದರೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಗುರುಸ್ವಾಮಿ, ವೆಂಕಟೇಶ್, ವರಕೋಡು ಕೃಷ್ಣೇಗೌಡ, ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ನಿಧನ

ರಾಜೇಗೌಡ



ಹುಣಸೂರು: ತಾಲೂಕಿನ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿಯ ಮೂಡಲಕೊಪ್ಪಲಿನ ಮಾಜಿ ಯಜಮಾನರಾದ ರಾಜೇಗೌಡ (74) ಮಂಗಳವಾರ ನಿಧನರಾದರು. ಮೃತರು ಎಚ್.ಡಿ.ಕೋಟೆ ತಾಲೂಕಿನ ಜೆಡಿಎಸ್ ಮಾಜಿ ಅಧ್ಯಕ್ಷ ದಿವಂಗತ ಶಂಭುಗೌಡರ ಬೀಗರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ ಮೂಡಲಕೊಪ್ಪಲು ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

20.3.2026 ಶುಕ್ರವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಪಿಸಿಒಡಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9.30 ರಿಂದ.

■ **ಶ್ರೀ ಗಣಪತಿ ಸೇವಾ ಮಂಡಲಿ ಟ್ರಸ್ಟ್ :** ಏಳನೇ ರಾಮೋತ್ಸವ, ಯುಗಾದಿ ಹಬ್ಬ, ಸಂಜೆ 6.30 ರಿಂದ ಶಾರದಾದೇವಿ ಮಹಿಳಾ ಸಮಾಜದ ತಂಡದವರಿಂದ ದೇವರ ನಾಮಗಳು, ಸಂಜೆ 7 ರಿಂದ ಜ್ಯೋತಿಷ್ಯರತ್ನ ಡಾ. ಶ್ರೀಧರ ಶರ್ಮ ಅವರಿಂದ ಪಂಚಾಂಗ ಶ್ರವಣ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, ರಾಮಕೃಷ್ಣನಗರ.

■ **ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ:** ಜಿಲ್ಲಾ ನಾಟಕೋತ್ಸವ ಅಂಗವಾಗಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ವಿಚಾರ ಸಂಕಿರಣ, ನಾಟಕ ಪ್ರದರ್ಶನ, ಅಧ್ಯಕ್ಷತೆ : ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜಮೂರ್ತಿ, ಉದ್ಘಾಟನೆ : ಸಾಮಾಜಿಕ ಹೋರಾಟಗಾರ್ತಿ ಶ್ರೀಮತಿ ಸವಿತಾ ಪ. ಮಲ್ಲೇಶ್, ಮುಖ್ಯ ಅತಿಥಿಗಳು : ಹಿರಿಯ ರಂಗ ನಿರ್ದೇಶಕರಾದ ಶ್ರೀಮತಿ ಕೆ.ಆರ್. ಸುಮತಿ, ಆಕಾಶವಾಣಿ ನಿರೂಪಕಿ ಡಾ. ಶಭಾನ ಮೈಸೂರು, ರಂಗ ಗೌರವ : ಹಿರಿಯ ರಂಗಕರ್ಮಿ ಶ್ರೀಮತಿ ಹೆಚ್.ಬಿ. ಯಶೋಧ ರಾಮಚಂದ್ರ, ಹವ್ಯಾಸಿ ರಂಗಭೂಮಿ ಹಿರಿಯ ಕಲಾವಿದೆ ಶ್ರೀಮತಿ ವಿಜಯಲಕ್ಷ್ಮಿ ಮಂಜುನಾಥ್, ವೃತ್ತಿ ರಂಗಭೂಮಿ ಕಲಾವಿದೆ ಶ್ರೀಮತಿ ಸುಲೋಚನಾ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 4ಕ್ಕೆ.

■ **ಸೋಮನಾಥ ಜ್ಯೋತಿರ್ಲಿಂಗ ಮಹಾರುದ್ರ ಪೂಜೆ :** ಗುರುದೇವ್ ಶ್ರೀ ರವಿಶಂಕರ್ ಅವರ ಮಾರ್ಗದರ್ಶನದಲ್ಲಿ 45ನೇ ವಾರ್ಷಿಕೋತ್ಸವದ ಅಂಗವಾಗಿ ಸೋಮನಾಥ ಜ್ಯೋತಿರ್ಲಿಂಗ ಮಹಾರುದ್ರ ಪೂಜೆ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ.ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ – ಡಿ.ಪುರುಷೋತ್ತಂ ಮತ್ತು ಎಂ. ಆರ್. ಸುಧಾ, ವ್ಯಾಖ್ಯಾನ–ಡಾ. ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಅರೋಗ್ಯ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎ. ಅನಂತಪದ್ಮನಾಭನ್ –ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ.ಎನ್.ಮಂಜುನಾಥ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ. ಎಸ್. ಗೋಪಾಲಕೃಷ್ಣನ್–ಕೊಳಲು ವಾದನ, 4.00 ಮಹಿಳಾರಂಗ, 4.30 ಪ್ರಾಯೋಜಿತ ಕಾರ್ಯಕ್ರಮ, ಆಧುನಿಕ ಕೃಷಿ ಚಾವಡಿ ವಿಜ್ಞಾನಿಗಳಿಂದ ಕೃಷಿಕರವರೆಗೆ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, 6.50 ಕೃಷಿರಂಗ, ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಪರಾಗ–ಬೇಸಾಯದ ಬದುಕು ಸರಾಗ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಚಂದ್ರಿಕಾ – ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಕೃಷಿ, ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿ; ಸರ್ಕಾರಕ್ಕೆ ಜಿ.ಟಿ.ದೇವೇಗೌಡರ ಆಗ್ರಹ

ವಿಧಾನಸಭೆಯಲ್ಲಿ ಸಮಗ್ರ ವಿಚಾರವಾಗಿ ಸುದೀರ್ಘ ಅವಧಿಗೆ ಮಾತನಾಡಿ ಸರ್ಕಾರದ ಗಮನ ಸೆಳೆಯುವ ಯತ್ನ

ನದಿಗಳಿಂದ ಏತ ನೀರಾವರಿ ಯೋಜನೆಗಳ ಮೂಲಕ ಕೆರೆಗಳಿಗೆ ನೀರು ತುಂಬಿಸಿ, ಅಂತರ್ಜಲ ಹೆಚ್ಚುವಂತೆ ಮಾಡಿದರೆ ರೈತರ ಪಂಪ್‌ಸೆಟ್‌ಗಳಲ್ಲಿ ಜಲ ಸಂವರ್ಧನೆಯಾಗಿ, ಆ ಮೂಲಕ ರೈತರು ಬೆಳೆಗಳನ್ನು ಬೆಳೆದು, ಸಂಕಷ್ಟದಿಂದ ಪಾರಾಗುವುದರಿಂದ ಕೃಷಿ, ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಸರ್ಕಾರವನ್ನು ಆಗ್ರಹಪಡಿಸಿದರು.

ಇಂದು ವಿಧಾನಸಭೆ ಅಧಿವೇಶನದಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಸುದೀರ್ಘವಾಗಿ ಮಾತನಾಡಿದ ಜಿ.ಟಿ.ದೇವೇಗೌಡರು, ಸುಮಾರು 60ರಷ್ಟು ಮಳೆಯಾಶ್ರಯವನ್ನು ನಂಬಿರುವ ಕೃಷಿಕರು, ರೈತರು ರಾಜ್ಯದಲ್ಲಿದ್ದಾರೆ. ಅವರು ಬರಗಾಲ ಬಂದಾಗ ಆಹಾರಕ್ಕೆ ದನ ಕರುಗಳ ಮೇವಿಗೂ ಹಾಹಾಕಾರಪಡುತ್ತಾರೆ.

ಉದಾ: ನಮ್ಮ ಭಾಗದ ಜಮೀನು ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಮುಳುಗಡೆಯಾಗಿ, ಡ್ಯಾಂನ ನೀರು ಕೆಳಗಡೆ ಹರಿದು ಹೋಗುತ್ತದೆ. ಆದರೆ ನಮ್ಮ ಕ್ಷೇತ್ರದ ನೀರಾವರಿ ಆಗುವುದಿಲ್ಲ. ಆ ಕಡೆ ಕಬಿನಿ ಇದೆ, ಅದರ ಪಕ್ಕದಲ್ಲಿ ಖುಷ್ಕಿ ಜಮೀನುಗಳಿವೆ. ನಮ್ಮ ಕ್ಷೇತ್ರದಲ್ಲಿ ದೊಡ್ಡಮಾರಗೌಡನಹಳ್ಳಿ ವ್ಯಾಪ್ತಿಯಲ್ಲಿ ಕುಮರಳ್ಳಿ ಕೆರೆ, ದೊಡ್ಡಮಾರಗೌಡನಹಳ್ಳಿ ಕೆರೆ, ನುಗ್ಗಳ್ಳಿ ಕೆರೆ, ಶೆಟ್ಟಿ ನಾಯಕಹಳ್ಳಿ ಕೆರೆ, ಮಾದಳ್ಳಿ ಕೆರೆ, ಕೆರೆಹುಂಡಿ ಕೆರೆ, ಕುಮಾರಬೀಡು ಕೆರೆ, ಮೂಗನಹುಂಡಿ ಕೆರೆ ಸೇರಿದಂತೆ 20 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಗೆ 73 ಕೋಟಿ ಅಂದಾಜುಪಟ್ಟಿ ತಯಾರಿಸಿ, ಸರ್ಕಾರಕ್ಕೆ ಸಲ್ಲಿಸಿ, ಕಳೆದ 2 ವರ್ಷಗಳಿಂದ ಮನವಿ ಮಾಡುತ್ತಿದ್ದೇನೆ. ಆದರೆ, ಇದುವರೆಗೂ ಈ ಯೋಜನೆ ಜಾರಿಯಾಗಿಲ್ಲ. ಆದ್ದರಿಂದ ಈ ರೀತಿಯ ಏತ ನೀರಾವರಿ ಯೋಜನೆಗಳು ಜಾರಿಗೊಂಡರೆ ರೈತರಿಗೆ ಅನುಕೂಲವಾಗುತ್ತದೆ. ಈಗಲಾದರೂ ಮಂಜೂರು ಮಾಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು 1994ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆಗ ನನ್ನ ಪುಟ್ಟ ಬಾಡಿಗೆ ಮನೆಯಲ್ಲೇ ನಾನು, ಸಿದ್ದರಾಮಯ್ಯರವರು ಇಬ್ಬರೇ ಚುನಾವಣಾ ಪ್ರಚಾರ ಮಾಡಿ 35,500, ಮತಗಳಿಂದ ಗೆದ್ದಿದ್ದರು. ಆಗ ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು. ಸಿದ್ದರಾಮಯ್ಯರನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದರು. ಆಗ ಯಾವುದೋ ಒಂದು ಪತ್ರಿಕೆಯಲ್ಲಿ 'ದನ ಕಾಯುವವ ಮುಖ್ಯಮಂತ್ರಿಯಾಗಿದ್ದಾರೆ, ಕುರಿ ಕಾಯುವವ ಹಣಕಾಸು ಸಚಿವಾಗಿದ್ದಾರೆ ಎಂದು ಸುದ್ದಿ ಮಾಡಿದ್ದರು.


ಆದರೆ ರೈತರ ಮಕ್ಕಳು ಅಧಿಕಾರ ಸಿಕ್ಕಾಗ ಸಮರ್ಥವಾಗಿ ಆಳುತ್ತಾರೆ ಎನ್ನುವುದಕ್ಕೆ ಇವರೇ ಸಾಕ್ಷಿ. ಕರ್ನಾಟಕ ರಾಜ್ಯದ ರೈತ ಕುಟುಂಬದ ಕನ್ನಡಿಗ ನಮ್ಮ ರಾಜ್ಯದಿಂದ ಭಾರತದ ಮೊದಲ ಪ್ರಧಾನಿಯಾದರು. ಅದೇ ರೈತ ಕುಟುಂಬದಿಂದ ಬಂದಿರುವ ಸಿದ್ದರಾಮಯ್ಯನವರು ರಾಜ್ಯದಲ್ಲಿ ಹೆಚ್ಚಿನ ಅವಧಿಗೆ ಆಡಳಿತ ನಡೆಸಿದ ಮುಖ್ಯಮಂತ್ರಿಯಾಗಿ, ರಾಜ್ಯದಲ್ಲಿ 2026–27ನೇ ಸಾಲಿನಲ್ಲಿ ದಾಖಲೆ 17ನೇ ಆಯ–ವ್ಯಯವನ್ನು ಮಂಡಿಸಿದ್ದಾರೆ. ಇದೊಂದು ಹೆಮ್ಮೆಯ ಸಂಗತಿ ಎಂದು ಪ್ರಶಂಸಿಸಿ ಅಭಿನಂದನೆ ಸಲ್ಲಿಸಿದರು.

ರಾಜ್ಯದ ಜನರ ನಿರೀಕ್ಷೆಗಳು ಬೆಟ್ಟದಷ್ಟಿವೆ. ಆದರೆ ಯಾರೇ ಮುಖ್ಯಮಂತ್ರಿಗಳಾದರು ನಿರೀಕ್ಷೆಗಳನ್ನು ಈಡೇರಿಸುವುದಕ್ಕೆ ಆಗುವುದಿಲ್ಲ. ಆದರೆ ಈಗಿನ ಬಜೆಟ್‌ನಲ್ಲಿ ಸ್ವಲ್ಪ ಮಟ್ಟಿಗೆ ಸರ್ಕಾರ ಅಭಿವೃದ್ಧಿ ಕಡೆ ಗಮನ ಹರಿಸಿದೆ. ಹಿಂದಿನ ಬಜೆಟ್‌ನಲ್ಲಿ ಗ್ಯಾರಂಟಿಗಳ ಮಧ್ಯೆ ಅಭಿವೃದ್ಧಿ ಕಳೆದು ಹೋಗಿತ್ತು. ಈ ಬಾರಿ ಅಭಿವೃದ್ಧಿ ಕೆಲಸಗಳು ಚೇತರಿಸಿಕೊಳ್ಳುವ ನಿರೀಕ್ಷೆ ಇದೆ. ಇದಕ್ಕೆ ಮೂಲ ಕಾರಣ ರಾಜ್ಯದ ಬಜೆಟ್ ಗಾತ್ರ! ಈ ಬಾರಿ ಬಜೆಟ್ ಗಾತ್ರ ಹೆಚ್ಚಿಸಿರುವುದರಿಂದ ಗ್ಯಾರಂಟಿಗಳಿಗೂ ಅನುದಾನ ಮೀಸಲಿಟ್ಟಿರುವುದರ ಜೊತೆಗೆ, ಅಭಿವೃದ್ಧಿ ಕಾರ್ಯಗಳಿಗೂ ಹಣ ಒದಗಿಸಲು ಸಾಧ್ಯವಾಗಿರುವುದರಿಂದ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳಾಗಲಿವೆ ಎಂದು ಆಶಾಭಾವದಿಂದ ನುಡಿದರು.

ಕೃಷಿಯು ಐಟಿ–ಬಿಟಿ ಮೀರಿಸಿದೆ

ಕೃಷಿ ಮುಂದಿನ ವರ್ಷಗಳಲ್ಲಿ ಐಟಿ–ಬಿಟಿ ವಲಯಗಳ ರೀತಿ ಅಭಿವೃದ್ಧಿಯಾಗುವ ಲಕ್ಷಣಗಳಿವೆ. ಆದುದರಿಂದ ಮುಂಬರುವ ವರ್ಷ ಗಳಲ್ಲಿ ಸರ್ಕಾರ ರೈತರಿಗೆ ನೀರಾವರಿ ಸೇರಿದಂತೆ ಎಲ್ಲ ಸವಲತ್ತುಗಳನ್ನು ಒದಗಿಸಬೇಕು. ರೈತರ ಜಮೀನಿಗೆ ಬೆಲೆ ನಿಗದಿಪಡಿಸಿ, ಕಾನೂನು ತೊಡಕು ನಿವಾರಿಸಬೇಕು. ಈ ಬಗ್ಗೆ ಹಿರಿಯ ಸಚಿವ ಹೆಚ್.ಕೆ. ಪಾಟೀಲ್ ರವರು 'ಕೃಷ್ಣೆಯ ಕಣ್ಣೀರು' ಪುಸ್ತಕ ಬರೆದಿದ್ದಾರೆ. ನಿಮ್ಮದೇ ಸರ್ಕಾರ 10–11 ವರ್ಷ ಅಧಿಕಾರದಲ್ಲಿದ್ದೀರಿ, ಕೃಷ್ಣ–ಕಾವೇರಿ ಕಣ್ಣೀರು ಎರಡೂ ರೈತರ ಕಣ್ಣೀರೆ. ಈಗಲಾದರು ತಾವು ಬರೆದಿರುವ ಪುಸ್ತಕದ ರೀತಿ ಕಾರ್ಯಕ್ರಮ ರೂಪಿಸಿ, ಕಾರ್ಯಗತಗೊಳಿಸುವಂತೆ ಮನವಿ ಮಾಡಿದರು.

ಗೌಡರ ಶ್ರಮ ಅನನ್ಯ




1995–96ರಲ್ಲಿ ಶ್ರೀ ಹೆಚ್.ಡಿ.ದೇವೇಗೌಡರು, ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಶ್ರೀ ಸಿದ್ದರಾಮಯ್ಯನವರು ಕೂಡ ಹಣಕಾಸು ಸಚಿವರಾಗಿದ್ದರು. ಆಲಮಟ್ಟಿ ಜಲಾಶಯದ ಎತ್ತರವನ್ನು ಹೆಚ್ಚಿಸುವ ಸಲುವಾಗಿ, ನೀರಾವರಿ ಬಾಂಡ್‌ಗಳ ಮೂಲಕ ಹಣ ಸಂಗ್ರಹಿಸಿ, ನೀರಾವರಿ ಯೋಜನೆಗಳಿಗೆ ಹಣಕಾಸಿನ ನಿರ್ಬಂಧಗಳನ್ನು ನಿವಾರಿಸುವತ್ತ ಗಮನಹರಿಸಿದರು. ಇದರಲ್ಲಿ ಕೃಷ್ಣಾ ನದಿ ನೀರಿನ ರಾಜ್ಯದ ಪಾಲನ್ನು ಬಳಸಿಕೊಳ್ಳುವಲ್ಲಿ ನಿರ್ಣಾಯಕವಾಗಿದ್ದ ಪ್ರಮುಖ ಮೂಲಸೌಕರ್ಯ ಅಭಿವೃದ್ಧಿಗೆ ಹಣಕಾಸು ಒದಗಿಸಲು ಬಾಂಡ್‌ಗಳನ್ನು ನೀಡುವುದು ಸೇರಿದೆ. ನಾರಾಯಣಪುರ ಕಾಲುವೆ ನಿರ್ಮಾಣ ಸೇರಿದಂತೆ ಪ್ರಮುಖ ಯೋಜನೆಗಳಿಗೆ ಹಣವನ್ನು ಪಡೆಯುವಲ್ಲಿ ಅವರ ಪ್ರಯತ್ನಗಳು ಗಮನಾರ್ಹವಾಗಿದ್ದವು, ಇದು ತ್ವರಿತವಾಗಿ ಪೂರ್ಣಗೊಂಡಿತು. ರೈತರ ಕಲ್ಯಾಣಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಕ್ಕಾಗಿ ಅವರು ಗುರುತಿಸಲ್ಪಟ್ಟಿದ್ದಾರೆ. ನಂತರ, ಪ್ರಧಾನಿಯಾಗಿ ಸೇವೆ ಸಲ್ಲಿಸುತ್ತಿರುವಾಗ, ಅವರು ತ್ವರಿತ ನೀರಾವರಿ ಪ್ರಯೋಜನ ಕಾರ್ಯಕ್ರಮ (AIBP) ಅಡಿಯಲ್ಲಿ ಮೇಲ್ಭಾಗದ ಕೃಷ್ಣಾ ಯೋಜನೆ (UKP)ಗಳಿಗೆ ಹೆಚ್ಚುವರಿ ಹಣವನ್ನು ಒದಗಿಸಿದ್ದು, ದಾಖಲೆಯಲ್ಲಿ ಉಳಿದಿದೆ ಎಂದು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಸವಿವರವಾಗಿ ಸದನಕ್ಕೆ ತಿಳಿಸಿದರು.

ವಸತಿ



ಕಳೆದ 3 ವರ್ಷಗಳಿಂದ ಹೊಸದಾಗಿ ಒಂದು ಮನೆಯನ್ನು ನೀಡಿಲ್ಲ. 2014ರಿಂದ ಇಲ್ಲಿವರೆಗೆ ಸಾಮಾನ್ಯ ವರ್ಗದವರಿಗೆ ಮನೆ ನಿರ್ಮಾಣಕ್ಕೆ ರೂ. 1,20,000 ಹಾಗೂ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ರೂ 2,00,000 ಸಹಾಯ ಧನ ನೀಡಲಾಗುತ್ತಿತ್ತು, ಈ ಸಾಲಿನ ಬಜೆಟ್‌ನಲ್ಲಿ ಸಾಮಾನ್ಯ ವರ್ಗದವರಿಗೆ ರೂ. 2,00,000 ಹಾಗೂ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ರೂ. 3,00,000 ಮಾಡಿರುತ್ತೀರಿ ಅದು ಸಂತೋಷ. ಆದರೆ, ಈಗಿನ ದರದಲ್ಲಿ ಮನೆ ನಿರ್ಮಿಸುವುದು ಬಹಳ ಕಷ್ಟ ಆದ್ದರಿಂದ ಎಲ್ಲರಿಗೂ ಸಮವಾಗಿ ರೂ. 5,00,000 ಮಂಜೂರು ಮಾಡಲು ಕ್ರಮ ಕೈಗೊಳ್ಳುವಂತೆ ಸದನದಲ್ಲಿದ್ದ ವಸತಿ ಸಚಿವ ಜಮೀರ್ ಅಹಮದ್ ಅವರಲ್ಲಿ ಜಿ.ಟಿ. ದೇವೇಗೌಡರು ಮನವಿ ಮಾಡಿದರು.

ವಿದ್ಯುತ್



ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಮನೆಗಳು ನಿರ್ಮಾಣವಾಗಿದ್ದು, ಖಾತೆ ಮಾಡಿಸಿಕೊಂಡಿದ್ದಾರೆ. ಲೈಸೆನ್ಸ್ ಪಡೆಯದಿದ್ದರೆ ಇವರಿಗೆ 30–40 ಅಳತೆಯಲ್ಲಿ ಜಿ+2 ಬಿಟ್ಟು 3ನೇ ಅಂತಸ್ತು ಹೆಚ್ಚಿಗೆ ಕಟ್ಟಿದ್ದರೆ ಅವರಿಗೆ ವಿದ್ಯುಚ್ಛಕ್ತಿ ಸಂಪರ್ಕ ಕೊಡುತ್ತಿಲ್ಲ. ಗ್ರಾಪಂ ಅಥವಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 2024ರ ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಓ.ಸಿ. ಇಲ್ಲದೆ ಯಾವುದೇ ಕಟ್ಟಡಕ್ಕೂ ವಿದ್ಯುತ್ ಸಂಪರ್ಕ ಕೊಡುವಂತೆ ಇಲ್ಲ. ಅದರಲ್ಲಿ ವಾಣಿಜ್ಯ, ವಾಸದ ಮನೆ, ಕೈಗಾರಿಕೆ, ಹೀಗೆ ಯಾವುದೆಂದು ವಿವರ ವಾಗಿ ಹೇಳಿಲ್ಲ.ಈ ಆದೇಶವನ್ನು ಬೇರೆ ರಾಜ್ಯ ಗಳಲ್ಲಿ ಜಾರಿ ಮಾಡಿರುವುದು ಕಂಡು ಬಂದಿರುವುದಿಲ್ಲ. ಆದರೆ, ರಾಜ್ಯದಲ್ಲಿ ಮಾತ್ರ ಇದನ್ನು ಜಾರಿಗೆ ತರಲಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರ 2025ರ ಸೆಪ್ಟಂಬರ್‌ನಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಾಗೂ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರತಕ್ಕ 30–40(1200ಅಡಿ), ಇದರ ಒಳಗಡೆ ಇರುವ ಜಿ+2 (ನೆಲಮಹಡಿ, ಮೊದಲನೆ ಮತ್ತು ಎರಡನೇ ಮಹಡಿ) ವಾಸದ ಕಟ್ಟಡಗಳಿಗಾಗಿ ವಿನಾಯಿತಿ ನೀಡಲಾಗಿದೆ.

ಗ್ರಾಪಂ ವ್ಯಾಪ್ತಿಗೆ ನವೆಂಬರ್ 2025ರಲ್ಲಿ ಆದೇಶ ಮಾಡಿ, ಗ್ರಾಪಂ ವ್ಯಾಪ್ತಿಯಲ್ಲಿ ರುವ ವಾಸದ ಕಟ್ಟಡಗಳಿಗೂ 30–40(1200ಅಡಿ), ಕೊಡಬಹುದೆಂದು ಹೇಳುತ್ತಿದ್ದೀರಿ. ಅದು ರೆವಿನ್ಯೂಗೆ(11–ಎ) ಮಾತ್ರ, ಕಂದಾಯ ನಿವೇಶನಗಳಿಗೆ ಕೊಟ್ಟಿರುವುದಿಲ್ಲ. ಆರ್.ಟಿ.ಸಿ. ಲ್ಯಾಂಡ್ ಹಾಗೂ ಫಾರ್ಮ್ ಹೌಸ್‌ಗಳಿಗೆ ನೀಡಿರುವುದಿಲ್ಲ. ಬಡವರು ಜೀವನ ಮಾಡುವುದಕೋಸ್ಕರ ಸಣ್ಣ ಹಾಲಿನ ಡೈರಿ ಅಂಗಡಿಗೆ, ಒಂದು ಟೀ ಅಂಗಡಿ, ತರಕಾರಿ, ಸಣ್ಣ ಪುಟ್ಟ ವ್ಯಾಪಾರ ಮಾಡುವ ಅಂಗಡಿಗಳಿಗೂ ಕೊಡುತ್ತಿಲ್ಲ. ಇದನ್ನು ಒಂದು ಬಾರಿ ಪರಿಷ್ಕರಿಸಿ, ವಿಶೇಷ ಪ್ರಕರಣವೆಂದು ಪರಿಗಣಿಸಿ, ಒಂದು ಸಣ್ಣ ಪ್ರಮಾಣದ ದಂಡ ವಿಧಿಸಿ, ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸಲು ಸರ್ಕಾರಕ್ಕೆ ಮನವಿ ಮಾಡಿದರು.



ವಿಧಾನಸಭೆಯಲ್ಲಿ ಬಜೆಟ್ ಮೇಲೆ ಶಾಸಕ ಜಿ.ಟಿ.ದೇವೇಗೌಡರು ಸುದೀರ್ಘ ಮಾತನಾಡಿದರು.

ಕೃಷಿ



2005–06ರಲ್ಲಿ 10ರಿಂದ 12 ಲಕ್ಷ ಹೆಕ್ಟೆರ್ ತೋಟಗಾರಿಕೆ ಬೆಳೆ ಇದ್ದು ಇದು 2023–24ರಲ್ಲಿ 25 ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದೆ ವರ್ಷದಿಂದ ವರ್ಷಕ್ಕೆ ಕೃಷಿ ಬೆಳೆಗಳ ಬದಲಾಗಿ ತೋಟಗಾರಿಕೆ ಬೆಳೆಗಳು ಗಣನೀಯ ವಾಗಿ ಏರಿಕೆಯಾಗುತ್ತಿವೆ. ಅಡಿಕೆ ಬೆಳೆಯಲ್ಲಿ 2005_06ರಲ್ಲಿ 2 ಲಕ್ಷ ಇದ್ದ ವಿಸ್ತೀರ್ಣ ಇದೀಗ ಸುಮಾರು 7 ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದ್ದು ಕಂಡುಬರುತ್ತದೆ ಇದೇ ರೀತಿ ಬಹಳಷ್ಟು ತೋಟಗಾರಿಕೆ ಮತ್ತು ವಾಣಿಜ್ಯ ಬೆಳೆಗಳ ವಿಸ್ತೀರ್ಣ ಏರಿಕೆಯಾಗುತ್ತಿದ್ದು ಆಹಾರ ಧಾನ್ಯಗಳ ಉತ್ಪಾದನೆಗೆ ಬೇಕಾದ ವಿಸ್ತೀರ್ಣ ಕಡಿಮೆ ಆಗುತ್ತಿದೆ ಒಟ್ಟಾರೆ ಭೌಗೋಳಿಕ ವಿಸ್ತೀರ್ಣದಲ್ಲಿ ಶೇಕಡ 56%ರಿಂದ 60% ಮಾತ್ರ ಉಪ ಯೋಗವಾಗುತ್ತಿದ್ದು ಸುಮಾರು 10–12 ಲಕ್ಷ ಹೆಕ್ಟೇರ್ ಬಂಜರು ಭೂಮಿಯಾಗಿರುತ್ತದೆ. ಈ ರೀತಿಯ ಏರುಪೇರು ಆಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡ ಅಂಶಗಳ ಮೇಲೆ ಕೃಷಿ ಗಣತಿ ಆಗಬೇಕು ಎಂದರು.

ನಗರಗಳ ಬೆಳವಣಿಗೆಯಿಂದಾಗಿ ಕೃಷಿಭೂಮಿ ಪರಿವರ್ತಿತವಾಗುತ್ತಿದೆ ಹಾಗಾಗಿ ಕೃಷಿ ಬೆಳೆಗಳ ವಿಸ್ತೀರ್ಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದು ಒಂದು ಕಡೆಯಾದರೆ ಜನಸಂಖ್ಯೆ ಏರಿಕೆ ಹಾಗೂ ಆಹಾರದ ಬೇಡಿಕೆ ಹೆಚ್ಚಾಗಿರುವುದು ಮತ್ತೊಂದು ಕಡೆ ಈ ಎಲ್ಲಾ ಅಂಶಗಳ ಬಗ್ಗೆ ಮಾಹಿತಿ ಪಡೆದು ಯೋಜನೆ ರೂಪಿಸಬೇಕಾದರೆ ಕೃಷಿ ಗಣತಿ ಅತೀ ಮುಖ್ಯ ಪಾತ್ರ ವಹಿಸುತ್ತದೆ ಎಂಬುದನ್ನು ಹೇಳಬೇಕಾಗಿಲ್ಲ. ಆದ್ದರಿಂದ ಕೂಡಲೇ ಕಾರ್ಯ ಪ್ರವೃತ್ತರಾಗಬೇಕು ಎಂದು ಜಿಟಿ.ದೇವೇಗೌಡರು ಆಗ್ರಹಿಸಿದರು.

ಕೃಷಿ ತಾಂತ್ರಿಕ ವರ್ಗಾವಣೆ


ಕೃಷಿ ತಾಂತ್ರಿಕ ವರ್ಗಾವಣೆ ಇತ್ತೀಚಿನ ದಿನಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ, ಕಾರಣ, ಹಿಂದೆ ಕೃಷಿ ಇಲಾಖೆಯಲ್ಲಿ ಹೊಸ ತಳಿ, ತಂತ್ರಜ್ಞಾನ ಬಿಡುಗಡೆ ಆದಲ್ಲಿ, ಕೃಷಿ ಸಹಾಯಕರು ಹಳ್ಳಿಗಳಿಗೆ ಭೇಟಿ ನೀಡಿ ರೈತರ ಮನವೊಲಿಸಿ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುತ್ತಿದ್ದಲ್ಲದೆ, ಕ್ಷೇತ್ರೋತ್ಸವಗಳನ್ನು ಏರ್ಪಡಿಸಿ ಸುತ್ತಮುತ್ತ ಗ್ರಾಮಗಳ ರೈತರನ್ನು ಕರೆತಂದು ತೋರಿಸಿ ಮನವರಿಕೆ ಮಾಡಿ ಕೊಡುತ್ತಿದ್ದರು. ಆದರೆ, ನಾನು ನನ್ನ ಕ್ಷೇತ್ರದಲ್ಲಿ ಪ್ರತಿದಿನ ಪ್ರವಾಸ ಮಾಡುತ್ತಿದ್ದು, ಎಲ್ಲಿಯು ಸಹ ಒಂದು ಪ್ರಾತ್ಯಕ್ಷಿಕೆಯಾಗಲಿ, ಕ್ಷೇತ್ರೋತ್ಸವ ಆಗಲಿ ನಡೆಯುತ್ತಿಲ್ಲ. ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರು ಮಾಹಿತಿ ಪಡೆಯಲು ಬಂದರೆ ಅಲ್ಲಿ ಕೃಷಿ ಅಧಿಕಾರಿಗಳೇ ಇಲ್ಲ. ಬಹುತೇಕ ಹುದ್ದೆಗಳು ಖಾಲಿ ಇದ್ದು, ಕೃಷಿ ಅಧಿಕಾರಿಗಳ ಹುದ್ದೆ ಭರ್ತಿಗೆ ಕ್ರಮ ವಹಿಸಬೇಕು. ಮುಖ್ಯವಾಗಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸಬೇಕಾದ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಖಾಲಿ ಇರುವ ಹುದ್ದೆಗಳ ವಿವರವನ್ನು ಸದನಕ್ಕೆ ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನ ಬಹಳಷ್ಟು ಮುಂದುವರಿದಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ರೈತರು ಮೊಬೈಲ್ ಬಳಸುತ್ತಾರೆ. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ತಂತ್ರಜ್ಞಾನ ಮಾಹಿತಿಯನ್ನು ನೇರವಾಗಿ ಮೊಬೈಲ್ ಮೂಲಕ ರೈತರಿಗೆ ಸುಲಭವಾಗಿ ತಲುಪಿಸಬಹುದಾಗಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿ ತಂತ್ರಜ್ಞಾನ ತಜ್ಞರನ್ನು ಬಳಸಿಕೊಂಡು ಕ್ರಮ ವಹಿಸಬೇಕೆಂದು ಒತ್ತಾಯಿಸುತ್ತೇನೆ. ತಾವು ಡಿಜಿಟಲ್ ಕೃಷಿ ಸೇವಾ ಕೇಂದ್ರ ಸ್ಥಾಪಿಸುವುದಾಗಿ ಹೇಳಿದ್ದೀರಿ. ಆದರೆ ಈವರೆಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ಅಧಿಕಾರಿಗಳ ಬಹಳಷ್ಟು ಹುದ್ದೆ ಖಾಲಿ ಇದ್ದು, ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ಅವರಿಗೆ ಕೃಷಿ ತಾಂತ್ರಿಕತೆ ಬಗ್ಗೆ ಗೊತ್ತಿಲ್ಲ. ಆದ್ದರಿಂದ ಕೃಷಿ ಅಧಿಕಾರಿಗಳನ್ನು ನೇಮಿಸುವಂತೆ ಸರ್ಕಾರಕ್ಕೆ ಆಗ್ರಹಿಸಿದರು.

ಈಗ ರೈತರು ಬಳಸುತ್ತಿರುವ ತಳಿಗಳಾಗಲಿ, ಸಸ್ಯ ಸಂರಕ್ಷಣಾ ಔಷಧಿಗಳಾಗಲಿ, ಅಥವಾ ಕೃಷಿ ಯಂತ್ರೋಪಕರಣವಾಗಲಿ ಎಲ್ಲವನ್ನು ಸಹ ಖಾಸಗಿ ಕಂಪನಿಗಳಿಂದ ಬರುತ್ತಿರುವ ತಾಂತ್ರಿಕತೆಯನ್ನು ರೈತರು ಬಳಸುತ್ತಿದ್ದಾರೆ ಹಾಗೂ ಅಧಿಕ ಉತ್ಪಾದನೆ ಪಡೆದು ಲಾಭವನ್ನು ಸಹ ಪಡೆಯುತ್ತಾರೆ. ಆದರೆ ರೈತರ ತಾಂತ್ರಿಕತೆಯ ಬೇಡಿಕೆಯ ಅವಶ್ಯಕತೆಗೆ ಅನುಗುಣವಾಗಿ ಕೃಷಿ ಇಲಾಖೆಯಲ್ಲಿ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳು ಬದಲಾಗಬೇಕಿದೆ. ಕೃಷಿ ಇಲಾಖೆ ಅಧಿಕಾರಿಗಳು ಕೃಷಿ ವಿವಿಗಳು ಹೊರ ತಂದಿರುವ ಮಾತ್ರ ಸೀಮಿತವಾಗಿದ್ದು, ಬದಲಾದ ಸನ್ನಿವೇಶಕ್ಕೆ ತಕ್ಕಂತೆ ರೈತರಿಗೆ ಮಾಹಿತಿ ನೀಡುತ್ತಿಲ್ಲ. ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ಸಹಯೋಗದೊಂದಿಗೆ ಮಾಹಿತಿ ನೀಡುವಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

ಸಕಾಲದಲ್ಲಿ ಕಾರ್ಯಕ್ರಮ ನೀಡದಿರುವುದು

ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿದ್ದ ಪಂಡಿತ್ ಜವಾಹರಲಾಲ್ ನೆಹರುರವರು "Everything else can wait but not Agricul ture" ಎಂದು ಹೇಳಿದ್ದರು.



ಅಂದರೆ ಮುಂಗಾರು ಪ್ರಾರಂಭವಾದ ಕೂಡಲೇ ರೈತರು ತಮ್ಮ ಕೃಷಿ ಚಟುವಟಿಕೆಗಳನ್ನು ಯಾರಿಗೂ ಕಾಯದೆ ಆರಂಭಿಸುತ್ತಾರೆ. ಆದರೆ ಅವರಿಗೆ ಕೃಷಿ ಇಲಾಖೆಯಿಂದ ನೀಡುತ್ತಿರುವ ಪರಿಕರಗಳ ಅದರಲ್ಲೂ ಭೂಮಿ ಸಿದ್ದತೆ ಮತ್ತು ಅಂತರ ಬೇಸಾಯಕ್ಕೆ ಬೇಕಾದ ಕೃಷಿ ಉಪಕರಣಗಳನ್ನು ಹಂಗಾಮ ಪ್ರಾರಂಭಕ್ಕೆ ಮುನ್ನ ಸಹಾಯಧನದಲ್ಲಿ ವಿತರಿಸಬೇಕು. ಆದರೆ ನಾನು ಗಮನಿಸಿದಂತೆ ಸಕಾಲದಲ್ಲಿ ಕೃಷಿ ಇಲಾಖೆಯಿಂದ ಯಾವುದೇ ಕೃಷಿ ಉಪಕರಣಗಳನ್ನು ಸಹಾಯ ಧನದಲ್ಲಿ ವಿತರಿಸುತ್ತಿಲ್ಲ. ಕೃಷಿ ಅಧಿಕಾರಿಗಳನ್ನು ಕೇಳಿದರೆ ಇನ್ನೂ ಕಾರ್ಯಕ್ರಮ ಬಂದಿಲ್ಲ ವೆಂದು ಹೇಳುತ್ತಾರೆ. ಹಾಗಾದರೆ ಬಿತ್ತನೆ ಮಾಡಿದ ನಂತರ ನೀಡುತ್ತೀರಾ. ಇದರಿಂದ ರೈತರಿಗೆ ತೊಂದರೆ ಆಗುತ್ತಿಲ್ಲವೇ. ರೈತರ ಹಿತದೃಷ್ಟಿಯಿಂದ ಹಂಗಾಮ ಪ್ರಾರಂಭಕ್ಕೆ ಮುನ್ನ ಸಾಕಷ್ಟು ಪ್ರಮಾಣದಲ್ಲಿ ರೈತರ ಬೇಡಿಕೆಗೆ ಅನುಸಾರ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಹಾಗೂ ಕೃಷಿ ಯಂತ್ರೋಪಕರಣಗಳನ್ನು ವಿತರಿಸುವಂತೆ ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದರು.



ಕೃಷಿ ಯಂತ್ರಧಾರೆ ಸೇವಾ ಕೇಂದ್ರಗಳ ಸುಧಾರಣೆ

ಇದೇ ಸದನದಲ್ಲಿ ನಾನು, ಹಿಂದೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಬೆಲೆ ಬಾಳುವ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಅನಾನುಕೂಲವಾಗಿದ್ದು ಅವರ ಅನು ಕೂಲಕ್ಕೆ ಬಾಡಿಗೆ ಆಧಾರದ ಮೇಲೆ ಕೃಷಿ ಯಂತ್ರೋಪಕರಣಗಳನ್ನು ನೀಡಲು 'ಕೃಷಿ ಯಂತ್ರಧಾರೆ' ಸೇವಾ ಕೇಂದ್ರಗಳ ಅಗತ್ಯತೆ ಬಗ್ಗೆ ಗಮನ ಸೆಳೆದಿದ್ದೆ. ಕೃಷಿ ಸಚಿವರಾಗಿದ್ದ ಸನ್ಮಾನ್ಯ ಶ್ರೀ ಕೃಷ್ಣಬೈರೇ ಗೌಡರು ಇಡೀ ರಾಜ್ಯದಲ್ಲಿ ಹಂತ ಹಂತವಾಗಿ ಕೃಷಿ ಯಂತ್ರ ಧಾರೆ ಸೇವಾ ಕೇಂದ್ರಗಳನ್ನು(Customer Hiring Centre) ತೆರೆಯಲು ಹೆಚ್ಚಿನ ಮುತುವರ್ಜಿ ವಹಿಸಿದ್ದರು. ನಿಜಕ್ಕೂ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇಂದು ಈ ಸೇವಾ ಕೇಂದ್ರಗಳು ನಿರುಪಯುಕ್ತ ವಾಗಿದ್ದು, ಹಲವಾರು ಕಡೆ ಬಾಗಿಲು ಮುಚ್ಚಿರುವುದನ್ನು ಗಮನಿಸಿದ್ದೇನೆ. ರಾಜ್ಯದಲ್ಲಿ ಸುಮಾರು 750 ಈ ರೀತಿಯ ಕೃಷಿ ಯಂತ್ರಧಾರೆ ಸೇವಾ ಕೇಂದ್ರಗಳನ್ನು ತೆರೆದಿದ್ದು, ಪ್ರತಿ ಸೇವಾಕೇಂದ್ರದಲ್ಲೂ ಕೃಷಿ ಉಪಕರಣಗಳ ಖರೀದಿಸಲು ಹಾಗೂ ನಿರ್ವಹಣೆಗಾಗಿ 50 ರಿಂದ 75 ಲಕ್ಷ ರೂ ಸಹಾಯ ಧನ ನೀಡಲಾಗಿದೆ. ಅಂದರೆ ಕನಿಷ್ಠ 375 ಕೋಟಿ ಖರ್ಚು ಮಾಡಿದ್ದರು ಸಹ ಅದರ ಉಪಯೋಗ ರೈತರಿಗೆ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ಈ ಕೃಷಿ ಯಂತ್ರಧಾರೆ ಸೇವಾ ಕೇಂದ್ರಗಳ ಕಾರ್ಯವೈಖರಿ ಬಗ್ಗೆ ಹಲವಾರು ಜನಪ್ರತಿನಿಧಿಗಳು, ದಿನಪತ್ರಿಕೆಗಳು ಹಾಗೂ ದೂರದರ್ಶನದಲ್ಲೂ ಬೇಸರ ವ್ಯಕ್ತಪಡಿಸುತ್ತಿದ್ದನ್ನು ನಾನು ಗಮನಿಸಿದ್ದು, ಇಷ್ಟು ದೊಡ್ಡ ಮೊತ್ತದ ಹಣ ಖರ್ಚಾಗಿದ್ದರೂ ಸಹ ಸರಿಯಾದ ನಿರ್ವಹಣೆ ಇಲ್ಲದೆ, ರೈತರಿಗೂ ಉಪಯೋಗಕ್ಕೆ ಬಾರದಿರುವುದು ಬೇಸರದ ಸಂಗತಿ ಎಂದು ಅಸಮಾಧಾನ ಹೊರ ಹಾಕಿದರು.

ನಗರ ಪ್ರದೇಶಗಳಲ್ಲಿ ಓಲಾ, ಉಬರ್ ಸಂಸ್ಥೆಗಳು ಬಾಡಿಗೆ ವಾಹನಗಳನ್ನು ಒದಗಿಸುತ್ತಿರುವ ರೀತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಯಂತ್ರಗಳ ಒಡೆತನ ಹೊಂದಿರುವವರನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ನೊಂದಾಯಿಸಿಕೊಂಡು ಪ್ರತ್ಯೇಕ App ಗಳ ಮೂಲಕ ಅವಶ್ಯಕತೆ ಇರುವ ರೈತರಿಗೆ ದೊರೆಯುವಂತೆ ಮಾಡಿದ್ದಲ್ಲಿ ಕೃಷಿ ಯಂತ್ರೋಪಕರಣ ಹೊಂದಿರುವ ರೈತರಿಗೂ ಸಹ ಹೆಚ್ಚಾಗಿ ಉದ್ಯೋಗ ಅವಕಾಶಗಳು, ಲಾಭ ದೊರೆಯುವಂತೆ ಹಾಗೂ ಕೃಷಿ ಯಂತ್ರೋಪಕರಣ ಹೊಂದಿರದ ರೈತರು ಶೀಘ್ರವಾಗಿ ಅವಶ್ಯಕತೆಗೆ ಅನುಗುಣವಾಗಿ ಸ್ಥಳೀಯವಾಗಿ ಕೃಷಿ ಯಂತ್ರೋಪಕರಣವನ್ನು ಪಡೆಯಬಹುದಾಗಿದೆ.

> "ಹಾಲಿ ಇರುವ ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಬೇಕಾದ ಕೃಷಿ ಯಂತ್ರೋಪಕರಣಗಳು ಲಭ್ಯವಿಲ್ಲ. ಲಭ್ಯವಿರುವುದು ಸಹ ನಿರ್ವಹಣೆ ಇಲ್ಲದೆ ಕೆಟ್ಟು ನಿಂತಿವೆ ಮತ್ತು ಕೆಲವು ಉಪಕರಣಗಳು ಕಾಣೆಯಾಗಿವೆ. ಆದ್ದರಿಂದ ಕೃಷಿ ಸಚಿವರು, ಈ ಕೇಂದ್ರಗಳನ್ನು ಪುನಶ್ಚೇತನ ಗೊಳಿಸಲು ಕ್ರಮ ಕೈಗೊಳ್ಳಬೇಕು. ಇವುಗಳ ನಿರ್ವಹಣೆಯನ್ನು ಗ್ರಾಮೀಣ ಪ್ರದೇಶದಲ್ಲಿರುವ ಸ್ತ್ರೀ ಸಂಘ ಅಥವಾ ಯುವಕರ ಸಂಘಗಳಿಗೆ ತರಬೇತಿ ನೀಡಿ ಈಗಾಗಲೇ ಸರ್ಕಾರದಿಂದ ಘೋಷಿತವಾಗಿರುವ ಯುವ ನಿಧಿಯ ಮೂಲಕ ಪ್ರೋತ್ಸಾಹಿಸಿ ನಿರುದ್ಯೋಗಿ ಪದವಿ, ಡಿಪ್ಲೋಮಾ ಪಡೆದ ಯುವ ರೈತರನ್ನು ಬಳಸಿಕೊಳ್ಳಬೇಕು. ಪರ್ಯಾಯವಾಗಿ ಕೃಷಿ ಯಂತ್ರಧಾರೆ ಕೇಂದ್ರಕ್ಕೆ ಬದಲಾಗಿ ರೈತ ಸಂಪರ್ಕ ಕೇಂದ್ರಗಳ ಜಾರಿಗೆ ತರಬೇಕು. –ಜಿ.ಟಿ.ದೇವೇಗೌಡರು

ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ

ಹಿಂದೆ ನಾವೆಲ್ಲಾ ವ್ಯವಸಾಯ ಮಾಡುತ್ತಿದ್ದ ಕಾಲದಲ್ಲಿ ರೈತರು ತಮ್ಮ ಜಮೀನಿನ ಕೃಷಿ ಚಟುವಟಿಕೆಗಳಿಗೆ ಜಾನುವಾರು, ಕೃಷಿ ಕಾರ್ಮಿಕರನ್ನು ಬಳಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಜಾನುವಾರು ನಿರ್ವಹಣೆ ಕಷ್ಟವಾಗಿದ್ದು, ಕೃಷಿ ಕಾರ್ಮಿಕರ ಅಲಭ್ಯತೆಯಿಂದಾಗಿ ಬಹುತೇಕ ರೈತರು ಕೃಷಿ ಯಂತ್ರೋಪಕರಣಗಳ ಬಳಕೆಗೆ ಮುಂದಾಗುತ್ತಿದ್ದಾರೆ. ಆದರೆ ಶೇ.80ರಷ್ಟು ರೈತರು ಸಣ್ಣ ಮತ್ತು ಅತೀ ಸಣ್ಣ ರೈತರಾಗಿದ್ದು ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಸರ್ಕಾರದ ಸಹಾಯಧನದ ಮೇಲೆ ಅವಲಂಬಿತರಾಗಿದ್ದಾರೆ. ಆದರೆ ಸರ್ಕಾರದಿಂದ ಸಾಕಷ್ಟು ಸಹಾಯಧನ ದೊರೆಯುತ್ತಿಲ್ಲ. ಪ್ರತಿ ವರ್ಷ ಸರ್ಕಾರದ ಸಹಾಯಧನ ಹೆಚ್ಚಾಗಬೇಕೇ ಹೊರತು ಕಡಿಮೆ ಆಗಬಾರದು ಎಂದರು.

ಕೃಷಿ ಅರಣ್ಯಕ್ಕೆ ಪ್ರೋತ್ಸಾಹ




ಕೃಷಿಯಲ್ಲಿ ಕೃಷಿ ಅರಣ್ಯ ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ರೈತನಿಗೆ ಬೇಕಾದ ಯಾವುದೇ ಮರಗಳನ್ನು ಬೆಳೆಸಲು ಹಾಗೂ ಮಾರಾಟ ಮಾಡಲು ಮುಕ್ತವಾಗಿರ ಬೇಕು. ಉದಾಹರಣೆಗೆ ತೇಗ ಬೆಳೆದರೆ ರೈತ ಮುಕ್ತವಾಗಿ ಮಾರಾಟ ಮಾಡಲು ಅವಕಾಶ ವಿಲ್ಲ. ಅದಕ್ಕೆ ಅರಣ್ಯ ಇಲಾಖೆ ಅನುಮತಿ ಪಡೆಯ ಬೇಕು. ಇಂತಹ ನಿಬಂಧನೆಗಳನ್ನು ಕೈ ಬಿಟ್ಟು ರೈತರಿಗೆ ಮುಕ್ತ ಅವಕಾಶ ಮಾಡಿಕೊಡಬೇಕು. ಇದಕ್ಕಾಗಿ ಬೇರೆ–ಬೇರೆ ಮಂಡಳಿಗಳು ಇರುವಂತೆ ಟ್ರೀ ಬೋರ್ಡ್ ತೆರೆದು ರೈತರಿಗೆ ಮರಗಳನ್ನು ಬೆಳೆಸಲು ಪ್ರೋತ್ಸಾಹಿಸುವ ಜೊತೆಗೆ ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸವಂತೆ ಗೌಡರು ಮನವಿ ಮಾಡಿದರು.

ರೈತರಿಗೆ ನೀಡುವ 4000 ನೆರವು ನೀಡಬೇಕು


ಈ ಹಿಂದೆ ಯಡಿಯೂರಪ್ಪರವರು ಮುಖ್ಯಮಂತ್ರಿಗಳಾಗಿದ್ದಾಗ, ಸಂಕಷ್ಟದಲ್ಲಿ ಸಿಲುಕಿರುವ ರೈತರಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರ ನೀಡುತ್ತಿದ್ದ 6000 ರೂ ಜೊತೆಗೆ 4000 ರೂ ಸೇರಿಸಿ ಒಟ್ಟು 10,000 ರೂ ನೀಡಲಾಗುತ್ತಿತ್ತು. ಆದರೆ, ಈಗ ರಾಜ್ಯ ಸರ್ಕಾರ 4000 ರೂ.ಗಳನ್ನು ನಿಲ್ಲಿಸಿರುವುದು ಸರಿಯಲ್ಲ. ದಯವಿಟ್ಟು ಅದನ್ನು ಮುಂದುವರಿಸಬೇಕೆಂದು ಒತ್ತಾಯಿಸಿದರು.

ಅನುದಾನ ಕಲ್ಪಿಸಿ




ಕೆ.ಹೆಚ್. ರಾಮಯ್ಯ

ಕೆ.ಹೆಚ್. ರಾಮಯ್ಯ ಅವರ ಜೀವನ ಜನಸೇವೆಗಾಗಿ ಮುಡಿಪಾಗಿತ್ತು. ಅವರ ಪುತ್ರಿ ಯಶೋಧರಾ, ಪತಿ ಹೆಚ್.ಸಿ. ದಾಸಪ್ಪ, ಪುತ್ರ ತುಳಸಿದಾಸ್ ದಾಸಪ್ಪ ಕೊನೆವರೆಗೂ ಜನಸೇವೆಗೆ ಮೀಸಲಿದ್ದರು. ಅವರ ಕುಟುಂಬದ ದಾಸಪ್ಪ ವಿಚಾರ ಸಂಸ್ಥೆಯು ಗ್ರಾಮೀಣ ಹೆಣ್ಣು ಮಕ್ಕಳಿಗಾಗಿ ಹಾಸ್ಟೆಲ್ ನಿರ್ಮಾಣ ಮಾಡುತ್ತಿದೆ. ಆದರೆ ಅನುದಾನದ ಕೊರತೆಯಿಂದ ಅರ್ಧಕ್ಕೆ ನಿಂತಿದೆ. ಈ ಹಿನ್ನೆಲೆಯಲ್ಲಿ ಹಾಸ್ಟೆಲ್ ನಿರ್ಮಾಣಕ್ಕೆ 2 ಕೋಟಿ ಅನುದಾನ ನೀಡಬೇಕೆಂದು ಜಿ.ಟಿ. ದೇವೇಗೌಡರು ಸಿಎಂ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದರು.




ಯಶೋಧರಾ



ಹೆಚ್.ಸಿ.ದಾಸಪ್ಪ



ತುಳಸಿದಾಸಪ್ಪ



ಲಾಲ್‌ಬಹದ್ದೂರ್ ಶಾಸ್ತ್ರಿ



ನಿಜಲಿಂಗಪ್ಪ

ಕೃಷ್ಣಾ ಮೇಲ್ದಂಡೆ ಯೋಜನೆ

ಈ ರಾಜ್ಯದ ದಿಟ್ಟ ಹಾಗೂ ಪ್ರಾಮಾಣಿಕ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಸನ್ಮಾನ್ಯ ಶ್ರೀ ನಿಜಲಿಂಗಪ್ಪನವರು, ಅದೇ ವೇಳೆಈ ದೇಶದಲ್ಲಿ ಪ್ರಧಾನಮಂತ್ರಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಸನ್ಮಾನ್ಯ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು 1966ರಲ್ಲಿ ಕರೆತಂದು ಶಂಕುಸ್ಥಾಪನೆ ನೆರವೇರಿಸಿದರು. ಆಗ ಶ್ರೀ ಬಾಳೇಕುಂದ್ರಿಯವರು ಮುಖ್ಯ ಅಭಿಯಂತರರಾಗಿದ್ದರು, ಶಂಕುಸ್ಥಾಪನೆ ನೆರವೇರಿಸಿದ್ದಕ್ಕಾಗಿ ಅವರಿಗೆ ರೈತರ ಪರವಾಗಿ, ಒಬ್ಬ ಪ್ರಗತಿಪರ ರೈತನಾಗಿ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.

ಆದರೆ ರೈತರು ಬಹಳಷ್ಟು ನಿರೀಕ್ಷೆಯಿಂದ ನಮ್ಮ ಜಮೀನುಗಳಿಗೆ ನೀರು ಬರುತ್ತದೆ... ಬರುತ್ತದೆ ಎಂದು ಕಾತುರದಿಂದ ಕಾಯುತ್ತಲ್ಲೇ ಇದ್ದಾರೆ. ಆದರೆ ಅವರ ಜಮೀನುಗಳಿಗೆ ನೀರು ಹರಿದಿಲ್ಲ. ಮುಳುಗಡೆ ಆಗಿರುವ ಜಮೀನಿಗಳಿಗೆ ಪರಿಹಾರ ಸಿಕ್ಕಿಲ್ಲ. ಇದಕೋಸ್ಕರ ಈಗಲೂ ನಿರಂತರ ಹೋರಾಟ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಮಹತ್ವಾಕಾಂಕ್ಷಿ ಯೋಜನೆಯಾದ ಯು.ಕೆ.ಪಿ. ಸ್ಟೇಜ್–3 ಯೋಜನೆ ಯಡಿ ಆಲಮಟ್ಟಿ ಆಣೆಕಟ್ಟನ್ನು 519.6 ಮೀಟರ್‌ನಿಂದ 524.256 ಮೀಟರ್‌ಗೆ ಎತ್ತರಿಸುವ ಕಾಮ ಗಾರಿಯಿಂದ ಮುಳುಗಡೆಯಾಗುವ ಜಮೀನು ಹಾಗೂ ನೀರಾವರಿ ಕಾಲುವೆ ಜಾಲಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ರೈತರು ಮತ್ತು ಸಂತ್ರಸ್ತರ ದೀರ್ಘಕಾಲದ ಬೇಡಿಕೆಗೆ ನಮ್ಮ ಸರ್ಕಾರ ಸ್ಪಂದಿಸಿ, ಪರಿಷ್ಕೃತ ಒಪ್ಪಂದದ ದರಗಳನ್ನು ಅನುಮೋದಿಸಿದೆ.


ಮುಳುಗಡೆಗೊಳ್ಳುವ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.30.00ಲಕ್ಷ ಹಾಗೂ ತರಿ ಜಮೀನಿಗೆ ಪ್ರತಿ ಎಕರೆಗೆ ರೂ.40.00ಲಕ್ಷ ನಿಗದಿಪಡಿಸಲಾಗಿದೆ. ಒಪ್ಪಂದದ ಐ–ತೀರ್ಪುಗಳ ಮುಖಾಂತರ ಜಮೀನನ್ನು ಸ್ವಾಧೀನಪಡಿಸುವ ಪ್ರಕ್ರಿಯೆಯನ್ನು ಪ್ರಸಕ್ತ ವರ್ಷದಲ್ಲಿ ಪ್ರಾರಂಭಿಸಲಾಗುವುದು ಎಂದು ಹೇಳಲಾಗಿದೆ. ಒಂದು ಮಾತು ಹೇಳ ಬಯಸುತ್ತೇನೆ ಕರ್ನಾಟಕ ರಾಜ್ಯದಲ್ಲಿ ಉತ್ತರ ಕರ್ನಾಟಕ ರೈತರ ಭಾಗಕ್ಕೆ ಇದೊಂದು ದೊಡ್ಡ ಯೋಜನೆ. 1983ರಲ್ಲಿ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ, ಹೆಚ್.ಡಿ.ದೇವೇಗೌಡರು ನೀರಾವರಿ ಮಂತ್ರಿಗಳಾಗಿ, ರೈತರ ಬಗೆಗಿನ ಕಾಳಜಿಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ತ್ವರಿತಗತಿಯಲ್ಲಿ ಮಾಡಲು ಕ್ರಮ ಕೈಗೊಂಡಿರುವುದು ಶ್ಲಾಘನೀಯ ಎಂದು ಬಣ್ಣಿಸಿದರು.

ಕೃಷಿ ವಿಶ್ವವಿದ್ಯಾನಿಲಯಗಳ ಕಾರ್ಯವೈಖರಿ ಬಗ್ಗೆ ಅವಲೋಕನ

ರಾಜ್ಯದಲ್ಲಿ 8 ಕೃಷಿ ವಿವಿಗಳಿದ್ದು, ಮುಖ್ಯಮಂತ್ರಿಗಳು, ಕೃಷಿ ಸಚಿವರು, ತೋಟಗಾರಿಕೆ ಸಚಿವರು, ರೇಷ್ಮೆ ಸಚಿವರು ಹಾಗೂ 8 ವಿವಿಗಳ ಕುಲಪತಿಗಳನ್ನು ಒಳಗೊಂಡಂತೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಹೈಪವರ್ ಕಮಿಟಿ ಮಾಡಬೇಕು. ಆ ಸಮಿತಿಯು ಕೃಷಿ ಅಧ್ಯಯನ ನಡೆಸಿ ಯಾವ ರೀತಿ ಕಾರ್ಯ ನಿರ್ವಹಿಸಬೇಕು. ಸಂಶೋಧನಾ ಫಲಿತಾಂಶ ಎಷ್ಟರಮಟ್ಟಿಗೆ ರೈತರಿಗೆ ಅನುಕೂಲವಾಗುವುದೆಂಬ ವಿಷಯದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಜಾರಿಗೆ ತರಬೇಕು ಎಂದರು.


ನೀರಾವರಿ ಪದ್ಧತಿ: ಜಲಾಶಯಗಳ ನಿರ್ವಹಣೆಗೆ ಸಾವಿರಾರು ಕೋಟಿ ಖರ್ಚು ಮಾಡಿ ನೀರಾವರಿ ಪ್ರದೇಶ ಅಭಿವೃದ್ಧಿ ಪಡಿಸಲಾಗುತ್ತಿದೆ. ಇಲ್ಲಿ ರೈತರು ನೀರಾವರಿಗಾಗಿ ಯಾವುದೇ ಹಣ ಖರ್ಚು ಮಾಡುವುದಿಲ್ಲ. ಆದರೆ ಜಲಾಶಯಗಳ ನೀರಾವರಿ ಸೌಲಭ್ಯ ಇಲ್ಲದೆ ಇರುವ ಕಡೆ ರೈತನ ಸ್ವಂತಕ್ಕಾಗಿ ಬೋರ್‌ವೆಲ್ ತೆಗೆದು ಬೇಸಾಯ ಮಾಡುತ್ತಿದ್ದು ಅವರಿಗೆ ಸ್ಪ್ರಿಂಕ್ಲರ್, ಫ್ಲೋಜ್, ಹನಿ ನೀರಾವರಿಗೆ ಸಹಾಯಧನ ನೀಡಲಾಗುತ್ತದೆ. ಕೊಳವೆ ಬಾವಿ ಕೊರೆಯಲು ಅಥವಾ ಟ್ರಾನ್ಸ್ ಫಾರ್ಮರ್ ಅಳವಡಿಸಿಕೊಳ್ಳಲು ಮಾತ್ರ ಸಹಾಯಧನ ಇರುವುದಿಲ್ಲ ರೈತರು ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಳ್ಳಲು ಕನಿಷ್ಠ 2–3 ಲಕ್ಷ ರೂ ಖರ್ಚು ಮಾಡಬೇಕಾಗುತ್ತದೆ. ಇಂತಹ ರೈತರಿಗೆ ಶೇ.75ರಷ್ಟು ಸಹಾಯಧನ ನೀಡಬೇಕು ಎಂದರು. ಪ್ರಸ್ತುತ ಕೃಷಿ ಯಂತ್ರೋಪಕರಣಗಳಿಗೆ ಗರಿಷ್ಠ ಸಹಾಯಧನ ಒಂದು ಲಕ್ಷಕ್ಕೆ ಸೀಮಿತವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಬೆಲೆ ಏರಿಕೆಯಿಂದಾಗಿ ಕೃಷಿ ಯಂತ್ರೋಪಕರಣಗಳ ಬೆಲೆಯೂ ಸಹ ಜಾಸ್ತಿ ಆಗುತ್ತಿದ್ದು, ಈಗಿರುವ ಒಂದು ಲಕ್ಷ ಮಿತಿಯನ್ನು ಎರಡು ಲಕ್ಷಗಳಿಗೆ ಏರಿಸಬೇಕೆಂದು ಮನವಿ ಮಾಡಿದರು. ಈ ಹಿಂದೆ ಬಸವರಾಜ್ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ, ರೈತ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸಕ್ಕಾಗಿ (ಇಂಜಿನಿಯರಿಂಗ್, ಮೆಡಿಕಲ್) ಸ್ಕಾಲರ್‌ಶೀಪ್ ನೀಡುತ್ತಿದ್ದರು. ಈಗ ಅದೂ ನಿಂತಿದೆ. ಅದನ್ನೂ ಮುಂದುವರಿಯಬೇಕೆಂದು ಮನವಿ ಮಾಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ




ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (ಸಿಎಚ್‌ಸಿ)/ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಿ, ಸಿಬ್ಬಂದಿಯನ್ನು ನಿಯೋಜಿಸಲು ಕ್ರಮ ಕೈಗೊಳ್ಳಬೇಕು. ತಾಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ನರ್ಸ್ ಹಾಗೂ ಸಿಬ್ಬಂದಿಗಳ ಕೊರತೆ ಇದ್ದು, ಪ್ರಸಕ್ತ ಬಜೆಟ್‌ನಲ್ಲಿ 2500 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದ್ದೀರಿ. ಆದರೆ ಯಾವ ಕಾಲ ಮಿತಿ ಎಂಬುದನ್ನು ನಿಗದಿಪಡಿಸಿಲ್ಲ. ಹೋಬಳಿ ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಆಂಬುಲೆನ್ಸ್ ಸೇವೆ ಒದಗಿಸುವಂತೆ ಕೋರಿದರು.

ಪ್ರಾಥಮಿಕ ಶಿಕ್ಷಣ



ಗ್ರಾಮ ಪಂಚಾಯ್ತಿ, ಪಟ್ಟಣ ಪಂಚಾಯ್ತಿ, ನಗರಸಭೆ ಹಾಗೂ ಮಹಾನಗರಪಾಲಿಕೆ ವ್ಯಾಪ್ತಿಯ ಹಲವಾರು ಸರ್ಕಾರಿ ಶಾಲೆಗಳಿಗೆ ಮೂಲ ದಾಖಲಾತಿಗಳು ಇರುವುದಿಲ್ಲ (ಉದಾ: ಬಹಳ ಹಿಂದೆ ದಾನಿಗಳು ಆಯಾ ಗ್ರಾಮಗಳಲ್ಲಿ ಬಡ ಮಕ್ಕಳ ಶಿಕ್ಷಣಕ್ಕಾಗಿ ಜಮೀನುಗಳನ್ನು ದಾನ ಮಾಡಿರುತ್ತಾರೆ. ಆದರೆ ಈಗ ಆ ಜಮೀನಿನ ಬೆಲೆ ದುಪ್ಪಟ್ಟಾಗಿದ್ದು, ಅವರ ಕುಟುಂಬದ ಮಕ್ಕಳು, ಮೊಮ್ಮಕ್ಕಳು ಜಾಗದ ಖಾತೆ ನಮ್ಮ ಹೆಸರಿನಲ್ಲಿದೆ ಅಂತ ಹೇಳಿ ತೊಂದರೆ ಕೊಡುತ್ತಿದ್ದಾರೆ) ಆದ್ದರಿಂದ ಕೂಡಲೇ ಶಿಕ್ಷಣ ಸಂಸ್ಥೆಗಳಿಗೆ ಖಾತಾ ಮಾಡಲು ಕ್ರಮ ಕೈಗೊಳ್ಳಬೇಕೆಂದರು. ಈ ಬಾರಿ ಬಜೆಟ್‌ನಲ್ಲಿ ಶಾಲಾ ಕೊಠಡಿಗಳ ನಿರ್ಮಾಣ, ದುರಸ್ಥಿ ಕಾಮಗಾರಿಗಳಿಗಾಗಿ 565 ಕೋಟಿ, ಶೌಚಾಲಯ ನಿರ್ಮಾಣಕ್ಕಾಗಿ 75 ಕೋಟಿ ಹಾಗೂ ಪೀಠೋಪಕರಣಗಳ ಖರೀದಿಗಾಗಿ 25 ಕೋಟಿ ಅನುದಾನ ಒದಗಿಸಲಾಗಿದೆ ಎಂದು ಹೇಳಿರುತ್ತೀರಿ. ಸಂತೋಷ. ಆದರೆ ಕರ್ನಾಟಕದಲ್ಲಿ ಅಂದಾಜು ಸುಮಾರು 48,000 ಸರ್ಕಾರಿ ಶಾಲೆಗಳಿದ್ದು, ಯಾವುದಕ್ಕೂ ಅನುದಾನ ಸಾಲುವುದಿಲ್ಲ. ಹೊಸದಾಗಿ ಶಾಲಾ ಕೊಠಡಿ, ಶೌಚಾಲಯ, ಲೈಬ್ರರಿ ಅವಶ್ಯಕತೆ ಇದ್ದು, ಮಂಜೂರು ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳಿಲ್ಲದೆ, ಬಾಡಿಗೆ ಕಟ್ಟಡಗಳಲ್ಲಿ, ಸರ್ಕಾರಿ ಶಾಲಾ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಪ್ರಸ್ತಾಪಿಸಿಲ್ಲ. ಆಯಾ ಜಿಲ್ಲೆಗಳಲ್ಲಿರುವ ಫ್ಯಾಕ್ಟರಿಗಳು, ಖಾಸಗಿ ಕಂಪನಿಗಳ ಸಿಎಸ್‌ಆರ್ ಅನುದಾನ ದಿಂದ ಅಥವಾ ಕೆಲವು ದಾನಿಗಳು ನಿರ್ಮಿಸಿಕೊಡಲು ಉತ್ಸುಕರಾಗಿರುತ್ತಾರೆ. ಅಂತಹ ಕಂಪನಿಗಳನ್ನು ಸಂಪರ್ಕಿಸಿ ಅಂಗನವಾಡಿ ಕೇಂದ್ರಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಬೇಕು.


ಉನ್ನತ ಶಿಕ್ಷಣ



ಉನ್ನತ ಶಿಕ್ಷಣ ಸಚಿವರೆ ಇತ್ತೀಚೆಗೆ 4 ವಿಶ್ವ ವಿದ್ಯಾಲಯಗಳನ್ನು ಮುಚ್ಚುವುದಾಗಿ ಘೋಷಿಸಿದ್ದಾರೆ. ಸರ್ಕಾರಿ ವಿವಿಗಳನ್ನು ಮುಚ್ಚಿ ಖಾಸಗಿ ವಿವಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದೀರಿ. ಇದರ ಬದಲು ವಿಶ್ವವಿದ್ಯಾಲಯಗಳಿಗೆ ಉಪನ್ಯಾಸಕರ ನೇಮಕ, ಮೂಲಸೌಕರ್ಯ ಕಲ್ಪಿಸಿದರೆ ರಾಜ್ಯದ ಬಡ ವಿದ್ಯಾಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಪ್ರತಿವರ್ಷ ಗ್ಯಾರಂಟಿಗಳಿಗಾಗಿ 50 ಸಾವಿರ ಕೋಟಿ ಖರ್ಚಾಗುತ್ತಿದ್ದು, ಇದರಲ್ಲಿ 20 ಸಾವಿರ ಕೋಟಿ ಕಡಿತಗೊಳಿಸಿ ಉನ್ನತ ಶಿಕ್ಷಣಕ್ಕೆ ವಿನಿಯೋಗಿಸಿ ಉನ್ನತ ಶಿಕ್ಷಣಕ್ಕೆ ವಿನಿಯೋಗಿಸುವುದರಿಂದ ಬಡ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಪಡೆದು ರಾಜ್ಯದ ಅಭಿವೃದ್ಧಿಯಾಗುತ್ತದೆ. ಕುಮಾರಸ್ವಾಮಿರವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಉನ್ನತ ಶಿಕ್ಷಣ ಸಚಿವನಾಗಿ ರಾಜ್ಯದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆದು ಪಕ್ಷಾತೀತವಾಗಿ 220 ಪ್ರಥಮ ದರ್ಜೆ ಕಾಲೇಜುಗಳಿಗೆ ರೂ. 1000 ಕೋಟಿ ಅನುದಾನದಲ್ಲಿ ಕಟ್ಟಡ, ಆಡಿಟೋರಿಯಂ, ಲೈಬ್ರರಿ, ಶೌಚಾಲಯ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಯಿತು. ರಾಜ್ಯದಲ್ಲಿ 418 ಕಾಲೇಜುಗಳಲ್ಲಿ ಖಾಲಿ ಇದ್ದ 396 ಪ್ರಾಂಶುಪಾಲರ ನೇಮಕ ಮಾಡಲು, ಆರ್ಥಿಕ ಇಲಾಖೆ ಕಾರ್ಯದರ್ಶಿಯವರ ಜೊತೆ ಚರ್ಚಿಸಿ, ಕ್ಯಾಬಿನೆಟ್‌ನಲ್ಲಿ ಅನುಮತಿ ಸಹ ದೊರಕಿಸಿ ಕೊಟ್ಟಿದ್ದೆ. ಬಳಿಕ ನೇಮಕ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿತ್ತು. ಆದರೆ, ಇಲ್ಲಿತನಕ ನೇಮಕವಾಗಿಲ್ಲ. ತುರ್ತಾಗಿ ನೇಮಕ ಮಾಡಲು ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಪದವಿ ಕಾಲೇಜುಗಳಲ್ಲಿ ಪ್ರಥಮ ವರ್ಷ ವ್ಯಾಸಂಗ ಮಾಡುತ್ತಿರುವ ಎಲ್ಲಾ ವರ್ಗದ 1,10,000 ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್ ಟಾಪ್ ವಿತರಿಸಲಾಗಿತ್ತು. ಇದರಿಂದ ಕೊರೊನಾ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮನೆಯಲ್ಲೇ ಕುಳಿತು ಪಾಠ ಕೇಳಲು ಸಾಕಷ್ಟು ಉಪಯೋಗವಾಯಿತು.

ಸ್ಮಶಾನ: ಸ್ವತಂತ್ರ ಬಂದು ಇಷ್ಟು ವರ್ಷವಾದರೂ ಎಷ್ಟೋ ಗ್ರಾಮದಲ್ಲಿ ಇನ್ನೂ ಸ್ಮಶಾನ ಇಲ್ಲ. ಸರ್ಕಾರಿ ಜಮೀನುಗಳು ಇರುವ ಕಡೆ ಕೂಡಲೇ ಸ್ಮಶಾನಕ್ಕೆ ಜಾಗ ಗುರುತಿಸಿ ದಾಖಲಾತಿ ಮಾಡಬೇಕು. ಸರ್ಕಾರಿ ಜಾಗ ಇಲ್ಲದ ಕಡೆ ರೈತರಿಂದ ಜಮೀನು ಖರೀದಿ ಮಾಡಿ ಸ್ಮಶಾನ ನಿರ್ಮಾಣ ಮಾಡಬೇಕು. ಆದರೆ, ಜಿಲ್ಲಾಧಿಕಾರಿಗಳ ಜೊತೆ ಮಾತನಾಡುವಾಗ ಪರಿಶಿಷ್ಟ ಜನರ ಸ್ಮಶಾನಕ್ಕೆ ಖರೀದಿ ಮಾಡಲು ಅನುದಾನ ಇದೆ. ಆದರೆ, ಸಾಮಾನ್ಯ ವರ್ಗದವರಿಗೆ ಅನುದಾನ ಇಲ್ಲ ಎಂದು ತಿಳಿಸಿರುತ್ತಾರೆ. ಮನುಷ್ಯರಾದ ಪ್ರತಿಯೊಬ್ಬರಿಗೂ ಕೂಡ ರುದ್ರಭೂಮಿ ಬೇಕಾಗಿದೆ. ಆದ ಕಾರಣ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಗೌಡರು ಮನವಿ ಮಾಡಿದರು.

ರೈತರಿಗೆ ನೀರೇ ಸಂಜೀವಿನಿ



ನಮ್ಮ ರಾಜ್ಯದಲ್ಲಿ ನೀರಾವರಿಗೆ ಒಳಪಟ್ಟಿರುವ ಜಮೀನು ಶೇ.29ರಿಂದ 32ರಷ್ಟು ಇದೆ. ಇದರಲ್ಲಿ ಶೇ.50ರಿಂದ 60ರಷ್ಟು ಉತ್ತರ ಕರ್ನಾಟಕ ಭಾಗಕ್ಕೆ ಸೇರಿದೆ. ಉತ್ತರ ಕರ್ನಾಟಕ ಹಿಂದುಳಿದಿದೆ ಎಂದು ಯಾವಾಗಲೂ ಹೇಳುತ್ತೇವೆ. ಆದರೆ, ಈ ನೀರಾವರಿ ಯೋಜನೆ ಪೂರ್ಣ ಮಾಡಿದರೆ ಸಂಪೂರ್ಣ ಅಭಿವೃದ್ಧಿಯಾಗುತ್ತದೆ. ರೈತರಿಗೆ ನೀರೆ ಸಂಜೀವಿನಿ ಇದ್ದಂತೆ. ರೈತರ ಜಮೀನಿಗೆ ನೀರು ಕೊಟ್ಟರೆ ಬೇರೆ ಏನೂ ಬೇಡ. ಐ.ಟಿ. ಬಿ.ಟಿ. ಅಭಿವೃದ್ಧಿ ಮಾಡುವಲ್ಲಿ ರೈತರ ಅಭಿವೃದ್ಧಿ ಮರೆತಿದ್ದೀರಿ. ಯಾವುದೇ ದೇಶ ಉತ್ಪಾದನಾ ವಲಯ ಗಟ್ಟಿಯಾಗಲಿಲ್ಲ ವೆಂದರೆ ಆರ್ಥಿಕ ಅಭಿವೃದ್ಧಿ ಕುಂಠಿತವಾಗುತ್ತದೆ. ಐಟಿ–ಬಿಟಿಯಿಂದ ನೌಕರಿ, ಉದ್ಯೋಗ ಸಿಗಲಿದೆ. ಆರ್ಥಿಕವಾಗಿ ರೈತ ಕುಟುಂಬಗಳು ಅಭಿವೃದ್ಧಿ ಹೊಂದುವುದಿಲ್ಲ. ಉದಾ:–2008ರಲ್ಲಿ ಜಾಗತಿಕ ಹಿಂಜರಿತವಾದಾಗ ಅಮೇರಿಕ, ಯುರೋಪ್ ದೇಶಗಳು ತತ್ತರಿಸಿ ಹೋದವು. ಆದರೆ, ಭಾರತ ಸೇರಿದಂತೆ ಸಿಂಗಾಪೂರ್, ಜಪಾನ್, ವಿಯೆಟ್ನಾಂ ದೇಶಗಳಿಗೆ ಜಾಗತಿಕ ಆರ್ಥಿಕ ಹಿಂಜರಿತದ ಬಿಸಿ ತಟ್ಟಲಿಲ್ಲ. ಕಾರಣ, ಕೃಷಿ ಜೊತೆಗೆ ಉತ್ಪಾದನಾ ವಲಯಗಳು ಯಶಸ್ವಿಯಾಗಿ ಕೆಲಸ ಮಾಡಿದ ಪರಿಣಾಮ ನಮ್ಮಲ್ಲಿ ಇನ್ನು ಕೃಷಿ ಮಾಡುವವರು ಇದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲಾ ಆಡಳಿತ ಮಂಡಳಿಯ ತಾಂತ್ರಿಕ ದೋಷದಿಂದ

ಇಬ್ಬರು ಎಸ್ಎಸ್ಎಲ್ಸಿ ಪರೀಕ್ಷೆಯಿಂದ ವಂಚಿತ



ಪರೀಕ್ಷೆಯಿಂದ ವಂಚಿತರಾದ ವಿದ್ಯಾರ್ಥಿಗಳ ಪೋಷಕರು, ಗ್ರಾಮಸ್ಥರು ಪ್ರತಿಭಟಿಸಿದರು.

ಮಡಿಕೇರಿ, ಮಾ.18– ಶಿಕ್ಷಣ ಇಲಾಖೆ ವೆಬ್‌ಸೈಟ್‌ನಲ್ಲಿ ಹಾಲ್ ಟಿಕೆಟ್ ಸೃಷ್ಟಿಯಾಗದೆ ತಾಲೂಕಿನ ಬೆಟ್ಟಗೇರಿ ಗ್ರಾಮದ ಇಬ್ಬರು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ವಂಚಿತರಾಗಿದ್ದಾರೆ

ಘಟನೆ ಹಿನ್ನೆಲೆ: ತಾಲೂಕಿನ ಬೆಟ್ಟಗೇರಿ ಗ್ರಾಮದ ಉದಯ ಖಾಸಗಿ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ತರಗತಿ ನಡೆಸಲು ಶಿಕ್ಷಣ ಇಲಾಖೆಯಿಂದ ಅನುಮತಿ ಇರಲಿಲ್ಲ ನ್ಯಾಯಾಲಯದ ಅನುಮತಿ ಮೇರೆಗೆ ಪರೀಕ್ಷೆ ನಡೆಸುತ್ತಿದ್ದರು.

ಈ ಬಾರಿ ಒಟ್ಟು 17 ವಿದ್ಯಾರ್ಥಿಗಳಿದ್ದು, ಈ ಪೈಕಿ 'ಸ್ಟೂಡೆಂಟ್ ಎಚೀವ್ ಮೆಂಟ್ ಟ್ರ್ಯಾಕಿಂಗ್ ಸಿಸ್ಟಮ್' ಮೂಲಕ ಐವರು ಮೊದಲಿಗೆ ಪರೀಕ್ಷೆ ಬರೆಯಲು ಶಿಕ್ಷಣ ಇಲಾಖೆ ಅವಕಾಶ ನೀಡಿತ್ತು. ನಿನ್ನೆ ಇನ್ನು 10 ಮಂದಿ ವಿದಾರ್ಥಿಗಳಿಗೂ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಶಾಲಾ ಆಡಳಿತ ಮಂಡಳಿ ಮನವಿ ಮಾಡಿದ ಹಿನ್ನೆಲೆಯಲ್ಲಿ ಅವಕಾಶ ನೀಡಲಾಗಿತ್ತು. ಇನ್ನುಳಿದ ಇಬ್ಬರು ವಿದ್ಯಾರ್ಥಿಗಳ ಪೈಕಿ ಓರ್ವ ವಿದ್ಯಾರ್ಥಿ ಶಾಲೆಯಿಂದ 'ಟಿ.ಸಿ' ಪಡೆದಿರುವುದಾಗಿ ಹಾಗೂ ಮತ್ತೋರ್ವ ವಿದ್ಯಾರ್ಥಿಯ ದಾಖಲಾತಿಯಲ್ಲಿ 'ಶಿಕ್ಷಣಾಧಿಕಾರಿಗಳಿಂದ ತಿರಸ್ಕರಿಸಲ್ಪಟ್ಟಿದೆ' ಎಂದು ದಾಖಲಾತಿಯಲ್ಲಿ ನಮೂದಾಗಿತ್ತು.

ತಮೀಮ್, ಪ್ರಥಮ್ ಎಂಬುವರಿಗೆ ಹಾಲ್ ಟಿಕೆಟ್ ಬಂದಿಲ್ಲ ಎಂದು ಪರೀಕ್ಷೆಗೆ ಕೂರಲು ನಿರಾಕರಿಸಲಾಯಿತು. ಈ ವಿಷಯ ತಿಳಿದ ವಿದ್ಯಾರ್ಥಿಗಳ ಪೋಷಕರು ಮತ್ತು ಗ್ರಾಮಸ್ಥರು ಶಾಲೆ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಒಟ್ಟು 1630 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಎಲ್ಲಿಯೂ ಸಮಸ್ಯೆಯಾಗಿಲ್ಲ. ಉದಯ ಪ್ರೌಢಶಾಲೆಯ 15 ವಿದ್ಯಾರ್ಥಿಗಳಿಗೆ ಒಟ್ಟು 4 ಸೆಂಟರ್‌ಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ಇಬ್ಬರು ವಿದ್ಯಾರ್ಥಿಗಳ ಹಾಲ್ ಟಿಕೆಟ್ ಸೃಷ್ಟಿಯಾಗದೇ ಇರಲು ಶಾಲೆಯ ಆಡಳಿತ ಮಂಡಳಿಯ ತಾಂತ್ರಿಕ ಸಮಸ್ಯೆಯೇ ಕಾರಣವಾಗಿದೆ ಹೊರತು ಶಿಕ್ಷಣ ಇಲಾಖೆಯಿಂದ ಯಾವುದೇ ಸಮಸ್ಯೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು. ಇಬ್ಬರು ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪೂರಕ ಪರೀಕ್ಷೆ ಬರೆಯಲು ಅವಕಾಶ ನೀಡಲು ಉನ್ನತಾಧಿಕಾರಿಗಳೊಂದಿಗೆ ಚರ್ಚಿಸಲಾಗುತ್ತದೆ ಎಂದು ಹೇಳಿದರು.

ಶಾಲಾ ಮುಖ್ಯೋಪಾಧ್ಯಾಯ ಹೇಮಂತ್ ಮಾತನಾಡಿ, ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ತರಗತಿ ನಡೆಸಲು ಶಿಕ್ಷಣ ಇಲಾಖೆಯಿಂದ ಅನುಮತಿ ನೀಡುವ ಪ್ರಕ್ರಿಯೆ ಇನ್ನೂ ನಡೆಯುತ್ತಿದೆ. ಕಳೆದ ಬಾರಿಯಂತೆ ಕೋರ್ಟ್ ಆದೇಶ ಮೂಲಕ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಪಡೆಯಲಾಗಿದೆ. ಇಬ್ಬರು ವಿದ್ಯಾರ್ಥಿಗಳ ದಾಖಲಾತಿಗಳ ಪ್ರಕಾರ ತಾಂತ್ರಿಕ ದೋಷಗಳು ಕಂಡು ಬಂದಿದೆ. ಆ ಕಾರಣದಿಂದ ಹಾಲ್ ಟಿಕೆಟ್ ಸೃಷ್ಟಿಯಾಗಿಲ್ಲ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೋಷಕರಿಗೆ ಮಾಹಿತಿ ನೀಡಿದರು. ಮಕ್ಕಳ ಪೋಷಕರು ಮತ್ತು ಗ್ರಾಮಸ್ಥರು ಶಾಲೆಯ ಆಡಳಿತ ಮಂಡಳಿ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು

ಈ ಎಲ್ಲಾ ಬೆಳವಣಿಗೆಗಳ ನಡುವೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಎಲ್ಲಾ ಸಿದ್ದತೆ ಮಾಡಿಕೊಂಡು ಪರೀಕ್ಷಾ ಕೇಂದ್ರಕ್ಕೆ ಆಗಮಿಸಿದ್ದ ವಿದ್ಯಾರ್ಥಿಗಳಾದ ತಮೀಮ್ ಮತ್ತು ಪ್ರಥಮ್ ಪರೀಕ್ಷೆ ಬರೆಯಲು ಅವಕಾಶ ಸಿಗದಿದ್ದಕ್ಕೆ ಕಣ್ಣೀರು ಹಾಕಿದರು. ಗ್ರಾಮಸ್ಥರು ಈ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆಯಲ್ಲಿ ಹಾಜರಾಗುವಂತೆ ಸಾಂತ್ವನ ಹೇಳುತ್ತಿದ್ದುದು ಕಂಡು ಬಂತು. ಒಟ್ಟಿನಲ್ಲಿ ಯಾರದ್ದೋ ಸಮಸ್ಯೆಯಿಂದ ಇಬ್ಬರು ವಿದ್ಯಾರ್ಥಿಗಳು ಪರೀಕ್ಷೆಯಿಂದ ಹೊರಗೆ ಉಳಿಯುವಂತಾಯಿತು. ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸರು ಘಟನಾ ಸ್ಥಳದಲ್ಲಿ ಬೀಡು ಬಿಟ್ಟು ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದರು.

ಕೆ.ಆರ್.ಪೇಟೆಯಲ್ಲಿ ಮೈತ್ರಿ ಪಕ್ಷಗಳ ನಡುವೆ ಫ್ಲೆಕ್ಸ್ ವಾರ್

ಜೆಡಿಎಸ್, ಬಿಜೆಪಿ ಕಾರ್ಯಕರ್ತರ ನಡುವೆ, ನೂಕಾಟ ತಳ್ಳಾಟ, ಮಾತಿನ ಚಕಮಕಿ, ಲಘು ಲಾಠಿ ಪ್ರಹಾರ



ಪರಸ್ಪರ ನೂಕಾಟ, ತಳ್ಳಾಟ ನಡೆಸುತ್ತಿರುವ ಗುಂಪನ್ನು ಪೊಲೀಸರು ಚದುರಿಸುತ್ತಿರುವುದು.

ಕೆ.ಆರ್.ಪೇಟೆ, ಮಾ.18– ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಜೆಡಿಎಸ್ ವತಿಯಿಂದ ಯುಗಾದಿ ಹಬ್ಬದ ಶುಭಾಶಯ ಕೋರಿ ಹಾಕಿದ್ದ ಫ್ಲೆಕ್ಸ್ ಅನ್ನು ಕಿತ್ತುಹಾಕಿ ಅದೇ ಜಾಗಕ್ಕೆ ಬಿಜೆಪಿ ಮುಖಂಡರಾದ ಮಾಜಿ ಸಚಿವ ನಾರಾಯಣಗೌಡರ ಬೆಂಬಲಿಗರು ಯುಗಾದಿ ಹಬ್ಬದ ಶುಭಾಶಯ ಕೋರಿರುವ ಫ್ಲೆಕ್ಸ್ ಹಾಕಿರುವುದನ್ನು ಖಂಡಿಸಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅದೇ ವೇಳೆ ಅಲ್ಲಿಗೆ ಬಂದ ಮಾಜಿ ಸಚಿವ ನಾರಾಯಣಗೌಡರ ಬೆಂಬಲಿಗರು ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಬ್ಯಾನರ್ ಕಿತ್ತು ಹಾಕಿರುವ ವಿಚಾರವಾಗಿ ಪರಸ್ಪರ ವಾಗ್ವಾದ ನಡೆಯಿತು. ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇನಹಳ್ಳಿ ಮೋಹನ್, ತಾಲೂಕು ಜೆಡಿಎಸ್ ಕಾರ್ಯಾಧ್ಯಕ್ಷ ಮೆಣಸ ಮಹಾದೇವೇಗೌಡ ಸೇರಿದಂತೆ ನೂರಾರು ಜೆಡಿಎಸ್ ಕಾರ್ಯಕರ್ತರು ಮತ್ತು ಮಾಜಿ ಸಚಿವ ನಾರಾಯಣಗೌಡರ ಆಪ್ತ ಸಹಾಯಕ ದಯಾನಂದ್, ಪುರಸಭಾ ಮಾಜಿ ಸದಸ್ಯ ಬಸ್ ಸಂತೋಷ್ ಕುಮಾರ್ ನೇತೃತ್ವದಲ್ಲಿ ಹಲವಾರು ಬಿಜೆಪಿ ಕಾರ್ಯಕರ್ತರ ನಡುವೆ ನೂಕಾಟ, ತಳ್ಳಾಟ ಹಾಗೂ ಪರಸ್ಪರ ಮಾತಿನ ಚಕಮಕಿ ನಡೆಯಿತು.

ಘರ್ಷಣೆ ವಿಚಾರ ತಿಳಿದು ಸ್ಥಳಕ್ಕೆ ಆಗಮಿಸಿದ ಟೌನ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸುನಿಲ್ ಕುಮಾರ್ ನೇತೃತ್ವದ ಪೊಲೀಸರ ತಂಡವು ಎರಡೂ ಗುಂಪುಗಳನ್ನು ಸಮಾಧಾನ ಪಡಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನಿಸಿದರು. ಆದರೆ ವಾಗ್ವಾದ ತಳ್ಳಾಟ–ನೂಕಾಟ, ತಹಬದಿಗೆ ಬಾರದ ಹಿನ್ನೆಲೆಯಲ್ಲಿ ಲಘು ಲಾಠಿ ಪ್ರಹಾರ ಮಾಡಿ ಎರಡೂ ಗುಂಪುಗಳನ್ನು ಚದುರಿಸಿದರು. ಆದರೂ ಸಹ ಜೆಡಿಎಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾವು ನಮ್ಮ ಪಕ್ಷದ ವತಿಯಿಂದ ಕಾನೂನುಬದ್ಧವಾಗಿ ಪುರಸಭೆಯಿಂದ ಲೈಸೆನ್ಸ್ ಪಡೆದು ಯುಗಾದಿ ಹಬ್ಬದ ಬ್ಯಾನರ್ ಅಳವಡಿಸಿದ್ದೇವೆ. ಆದರೆ ಇಂದು ಏಕಾಏಕಿ ನಮ್ಮ ಬ್ಯಾನರ್ ಹಾಕಿರುವ ಜಾಗದಲ್ಲಿಯೇ ನಾರಾಯಣಗೌಡರ ಬೆಂಬಲಿಗರು ತಮ್ಮ ಬಿಜೆಪಿ ಪಕ್ಷದ ಬ್ಯಾನರ್ ಹಾಕಿದ್ದು ಕೂಡಲೇ ಅದನ್ನು ತೆರವುಗೊಳಿಸಬೇಕು. ನಮ್ಮ ಬ್ಯಾನರ್ ಅನ್ನು ಎಂದಿನಂತೆ ಹಾಕಬೇಕು ಎಂದು ಪಟ್ಟು ಹಿಡಿದರು. ಆಗ ಪೊಲೀಸರು ಪುರಸಭಾ ಮುಖ್ಯಾಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಅಧಿಕೃತವಾಗಿ ಯಾರು ಪರವಾನಗಿ ಪಡೆದಿದ್ದಾರೆ ಅವರ ಬ್ಯಾನರ್ ಉಳಿಸುತ್ತೇವೆ ಬೇರೆ ಬ್ಯಾನರ್ ತೆರವುಗೊಳಿಸುತ್ತೇವೆ. ದಯವಾಡಿ ಎರಡೂ ಗುಂಪುಗಳು ಗಲಾಟೆಗೆ ಆಸ್ಪದ ಮಾಡಿಕೊಡಬಾರದು ಎಂದು ಮನವಿ ಮಾಡಿದರು.

ಕೊನೆಗೆ ಡಿವೈಎಸ್‌ಪಿ, ಚೆಲುವರಾಜು, ಪುರಸಭಾ ಮುಖ್ಯಾಧಿಕಾರಿ ಅಶೋಕ್ ಅವರು ಸ್ಥಳಕ್ಕೆ ಬಂದು ಪುರಸಭೆಯಲ್ಲಿದ್ದ ಹಾಗೂ ದಾಖಲೆಗಳನ್ನು ತಂದು ಪೊಲೀಸರ ಸಮ್ಮುಖದಲ್ಲಿ ಪರಿಶೀಲನೆ ನಡೆಸಿ ಅಧಿಕೃತವಾಗಿ ಲೈಸೆನ್ಸ್ ಪಡೆದು ಹಾಕಿದ್ದ ಜೆಡಿಎಸ್ ಪಕ್ಷದ ಬ್ಯಾನರ್ ಉಳಿಸಿ, ಮಾಜಿ ಸಚಿವ ನಾರಾಯಣಗೌಡರ ಬೆಂಬಲಿಗರು ಹಾಕಿದ್ದ ಬಿಜೆಪಿ ಪಕ್ಷದ್ ಬ್ಯಾನರ್ ಅನ್ನು ತೆರವು ಗೊಳಿಸಿದರು.

ಆಗ ಎರಡೂ ಪಕ್ಷಗಳ ಕಾರ್ಯಕರ್ತರು ಸ್ಥಳದಿಂದ ನಿರ್ಗಮಿಸಿದರು. ಪರಿಸ್ಥಿತಿ ತಿಳಿಯಾದರೂ ಸಹ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಫ್ಲೆಕ್ಸ್ ಹಾಕಿರುವ ಜಾಗದಲ್ಲಿ ಪೊಲೀಸ್ ಭದ್ರತೆ ಒದಗಿಸಿದ್ದಾರೆ.

ಅಕ್ರಮ ಶಸ್ತ್ರಾಸ್ತ್ರ ಪೂರೈಕೆ: ಮಂಡ್ಯ ಮೂಲದ ವ್ಯಕ್ತಿ ಬಂಧನ

ಬೆಂಗಳೂರು, ಮಾ.18– ಅಕ್ರಮ ಶಸ್ತ್ರಾಸ್ತ್ರ ಪೂರೈಕೆಯಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಮಂಡ್ಯ ಮೂಲದ 34 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭೋಪಾಲ್‌ನ ಸಿವಿಲ್ ಎಂಜಿನಿಯರ್ ಇರ್ಫಾನ್ ಬಂಧನದೊಂದಿಗೆ, ಪೊಲೀಸರು ಅವರಿಂದ ಮೂರು ದೇಶೀಯ ನಿರ್ಮಿತ ಪಿಸ್ತೂಲ್‌ಗಳು, ಒಂದು ರಿವಾಲ್ವರ್‌ನ ಭಾಗಗಳು ಮತ್ತು ಎರಡು ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಅವರು ತಮ್ಮ ವೃತ್ತಿಪರ ಕೆಲಸದ ಜೊತೆಗೆ ಅಕ್ರಮ ಬಂದೂಕು ಪೂರೈಕೆ ದಂಧೆಯನ್ನು ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಫೆಬ್ರವರಿ 25 ರಂದು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಆರ್ಥಿಕ ಅಪರಾಧಗಳ ವಿಭಾಗದಲ್ಲಿ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತನಿಖೆಯ ಸಮಯದಲ್ಲಿ, ಬೆಂಗಳೂರಿನ ಸಿದ್ದಾಪುರದ ಜಾವೇದ್ ಆಲಂ (19) ಮತ್ತು ಸೈಯದ್ ಮಸೂದ್ (26) ಎಂದು ಗುರುತಿಸಲಾದ ಇಬ್ಬರು ವ್ಯಕ್ತಿಗಳನ್ನು ಪೊಲೀಸರು ಬಂಧಿಸಿ, ಅವರ ಬಳಿ .32 ಎಂಎಂ ದೇಶೀಯ ನಿರ್ಮಿತ ಪಿಸ್ತೂಲ್ ಮತ್ತು 50 ಜೀವಂತ ಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇರ್ಫಾನ್ ಅವರಿಗೆ ಮಂಡ್ಯ ಮೂಲದಿಂದ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಪೂರೈಸಿದ್ದಾರೆ ಎಂದು ಬಹಿರಂಗಪಡಿಸಿದ್ದಾರೆ ಎಂದು ಅವರು ಹೇಳಿದರು. ತನಿಖೆಯನ್ನು ಮುಂದುವರೆಸುತ್ತಾ, ಸಿಸಿಬಿಯ ಆರ್ಥಿಕ ಅಪರಾಧಗಳ ವಿಭಾಗದ ಪೊಲೀಸರು ಮಾರ್ಚ್ 12 ರಂದು ಮಧ್ಯಪ್ರದೇಶದ ಭೋಪಾಲ್‌ನಲ್ಲಿರುವ ಅವರ ನಿವಾಸದಲ್ಲಿ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ ಎಂದು ಅಧಿಕಾರಿ ಹೇಳಿದರು.

ವಿಚಾರಣೆಯ ಸಮಯದಲ್ಲಿ, ಇರ್ಫಾನ್ ಅಕ್ರಮವಾಗಿ ಪಿಸ್ತೂಲ್‌ಗಳು ಮತ್ತು ಜೀವಂತ ಮದ್ದುಗುಂಡುಗಳನ್ನು ಪೂರೈಸಿದ್ದಾಗಿ ಒಪ್ಪಿಕೊಂಡಿದ್ದಾರೆ.

ಆತನ ತಪ್ಪೊಪ್ಪಿಗೆಯ ಆಧಾರದ ಮೇಲೆ, ಮೂರು ದೇಶೀಯ ಪಿಸ್ತೂಲ್‌ಗಳು, ಒಂದು ರಿವಾಲ್ವರ್‌ನ ಭಾಗಗಳು ಮತ್ತು ಅವನ ನಿವಾಸದಲ್ಲಿ ಇರಿಸಲಾಗಿದ್ದ ಎರಡು ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು. ಇರ್ಫಾನ್ ಮೂಲವನ್ನು ಪತ್ತೆಹಚ್ಚಲು ಮತ್ತು ಅಂತರರಾಜ್ಯ ಶಸ್ತ್ರಾಸ್ತ್ರ ಜಾಲದ ಇತರ ಸದಸ್ಯರನ್ನು ಗುರುತಿಸಲು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಸುದ್ದಿಗಾರರಿಗೆ ತಿಳಿಸಿದರು.

ಆರೋಪಿಯನ್ನು ಮಾ.13ರಂದು ನ್ಯಾಯ ವ್ಯಾಪ್ತಿಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು ಮತ್ತು 11 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ.

ಕಿಲಿಮಂಜಾರೊ ಏರಿದ ಕೊಡಗಿನ ಮಹಿಳೆ

ಮಡಿಕೇರಿ, ಮಾ.18– ಆಫ್ರಿಕಾ ಖಂಡದ ಟಾಂಜಾನಿಯಾದಲ್ಲಿರುವ ಅತ್ಯಂತ ಎತ್ತರದ ಕಿಲಿ ಮಂಜಾರೊ ಪರ್ವತವನ್ನು ಏರುವ ಮೂಲಕ ಗೋಣಿಕೊಪ್ಪದ ನಿವಾಸಿ ಬಹು ದೊಡ್ಡ ಸಾಧನೆ ಮಾಡಿ ಗಮನ ಸೆಳೆದಿದ್ದಾರೆ.

ಗೋಣಿಕೊಪ್ಪ ಗ್ರಾಪಂ ವ್ಯಾಪ್ತಿಯ ಉಮಾ ಮಹೇಶ್ವರಿ ಬಡಾವಣೆಯ ನಿವಾಸಿ ನೀತುಚಂದನ್ ಈ ಸಾಧನೆ ಮಾಡಿದ್ದಾರೆ. ಕಿಲಿ ಮಂಜಾರೊ ಪರ್ವತವು ಹಿಮದಿಂದ ಆವೃತವಾದ ಶಿಖರವನ್ನು ಹೊಂದಿದ್ದು, ಸಮುದ್ರ ಮಟ್ಟದಿಂದ 19341 ಅಡಿ ಎತ್ತರದಲ್ಲಿದೆ. ಈ ಪರ್ವತವನ್ನು ನೀತು ಚಂದನ್ ತಮ್ಮ 43ನೇ ವಯಸ್ಸಿನಲ್ಲಿ 5756 ಮೀಟರ್‌ಗಳನ್ನು ಏರುವ ಮೂಲಕ ಗಮನ ಸೆಳೆದಿದ್ದಾರೆ.

ಆಫ್ರಿಕಾ ಖಂಡದ ಅತ್ಯಂತ ಎತ್ತರದ ಹಾಗೂ ಸ್ವತಂತ್ರವಾಗಿ ನಿಂತಿರುವ ಇದು ಕಿಬೋ, ಮಾವೆಂಜಿ ಮತ್ತು ಶಿರಾ ಎಂಬ 3 ಶಂಕುಗಳನ್ನು ಈ ಪರ್ವತ ಹೊಂದಿದೆ. ಉತ್ತರ ಟಾಂಜಾನಿಯಾದ ಕೀನ್ಯಾ ಗಡಿ ಹತ್ತಿರ ಈ ಪರ್ವತವಿದ್ದು ಪರ್ವತಾ ರೋಹಿ ಗಳಿಗೆ ವಿಶ್ವದಾದ್ಯಂತ ಜನಪ್ರಿಯ ತಾಣವಾಗಿದೆ. ನೀತು ಚಂದನ್ ಲಿಮೋಶ್ ಮಾರ್ಗದ ಮೂಲಕ ತಮ್ಮ 12 ಜನರ ಸದಸ್ಯರ ತಂಡದೊಂದಿಗೆ ಈ ಸಾಧನೆ ಮಾಡಿದ್ದಾರೆ. ಇವರು ಗೋಣಿಕೊಪ್ಪದ ಚಿನ್ನದ ಮಳಿಗೆಯ ಮಾಲೀಕ ಎಂ.ಜಿ ಮೋಹನ್ ಮತ್ತು ಸುನಂದ ದಂಪತಿ ಪುತ್ರಿಯಾಗಿದ್ದಾರೆ.

ಗುಡ್ಡದಿಂದ ಜಿಗಿದು ಆತಂಕ ಸೃಷ್ಟಿಸಿದ ವಲಸೆ ಕಾರ್ಮಿಕ

ಮಡಿಕೇರಿ, ಮಾ.18– ಹೊರ ರಾಜ್ಯದ ವಲಸೆ ಕಾರ್ಮಿಕನೋರ್ವ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿ ಗುಡ್ಡದಿಂದ ಜಿಗಿದು ಕೆಲ ಕಾಲ ಆತಂಕ ಸೃಷ್ಟಿಸಿದ ಘಟನೆ ನಡೆದಿದೆ.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಹಳೇ ಖಾಸಗಿ ಬಸ್ ನಿಲ್ದಾಣಕ್ಕೆ ತೆರಳುವ ಮಾರ್ಗದ ಎಡಬದಿಯಲ್ಲಿ ಮಣ್ಣು ತೆಗೆಯಲಾಗಿದ್ದು, ಅಂದಾಜು 20 ಅಡಿ ಆಳ ಕಂದಕವಾಗಿ ಮಾರ್ಪಟ್ಟಿದೆ. ಮದ್ಯಪಾನ ಮಾಡಿ ಮೊದಲು ಈ ಸ್ಥಳಕ್ಕೆ ಬಂದ ಯುವಕ ಗುಡ್ಡದ ಅಂಚಿನಲ್ಲಿ ನಿಂತುಕೊಂಡಿದ್ದಾನೆ. ಇದನ್ನು ಗಮನಿಸಿದ ಸಾರ್ವಜನಿಕರು, ಸ್ಥಳೀಯ ಜೀಪು, ಆಟೋ ಚಾಲಕರು ಆತನ ಮನವೊಲಿಸಿ ಹಿಂದಕ್ಕೆ ಬರುವಂತೆ ಸೂಚಿಸಿದ್ದಾರೆ. ಆದರೆ ಯಾವುದಕ್ಕೂ ಕ್ಯಾರೆ ಎನ್ನದ ಯುವಕ ಎಲ್ಲರೂ ನೋಡುತ್ತಿದ್ದಂತೆಯೇ ಗುಡ್ಡದಿಂದ ಜಿಗಿದಿದ್ದಾನೆ. ಅದೃಷ್ಟವಶಾತ್ ಯಾವುದೇ ಅಪಾಯ ಇಲ್ಲದೇ ಮತ್ತೆ ನಡೆದುಕೊಂಡು ರಸ್ತೆಗೆ ಆಗಮಿಸಿದ್ದಾನೆ. ಈ ದೃಶ್ಯಗಳನ್ನು ಸಾರ್ವಜನಿಕರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ.

ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ

ಮೊದಲ ದಿನ 10911 ವಿದ್ಯಾರ್ಥಿಗಳು ಹಾಜರು, 116 ಗೈರು



ಅಧಿಕಾರಿಗಳು, ಮುಖಂಡರು ಗುಲಾಬಿ ಹೂವು, ಪೆನ್ನು, ಸಿಹಿ ವಿತರಿಸಿ ಶುಭ ಕೋರುತ್ತಿರುವುದು.

ಚಾಮರಾಜನಗರ: ಜಿಲ್ಲೆಯಲ್ಲಿ ಬುಧವಾರದಿಂದ ಆರಂಭಗೊಂಡಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮೊದಲ ದಿನ ಸುಗಮವಾಗಿ ನಡೆಯಿತು.

ಜಿಲ್ಲೆಯಲ್ಲಿ ಒಟ್ಟು 47 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಮೊದಲ ದಿನ ಪ್ರಥಮ ಭಾಷೆಗೆ ಜಿಲ್ಲೆಯಲ್ಲಿ ಒಟ್ಟು 11,027 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಇದರಲ್ಲಿ 10,911 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರೆ 116 ವಿದ್ಯಾರ್ಥಿಗಳು ಗೈರಾಗಿದ್ದರು.

ತಮ್ಮ ಪೋಷಕರೊಂದಿಗೆ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿದ ವಿದ್ಯಾರ್ಥಿಗಳು ತಮ್ಮ ನೋಂದಣಿ ಸಂಖ್ಯೆಯನ್ನು ಹುಡುಕಿ ನಂತರ ಕೊಠಡಿಗಳಿಗೆ ತೆರಳಿ ಪರೀಕ್ಷೆ ಬರೆದರು. ಪರೀಕ್ಷೆ ಹಿನ್ನೆಲೆಯಲ್ಲಿ ಕೇಂದ್ರಗಳ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿತ್ತು.

ಗುಲಾಬಿ ಹೂವು, ಸಿಹಿ ವಿತರಿಸಿ ಸ್ವಾಗತ: ಎಸ್ಸೆಸ್ಸೆಲ್ಸಿ ಪರೀಕ್ಷೆ ಹಿನ್ನೆಲೆಯಲ್ಲಿ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಜಿಲ್ಲೆಯ ವಿವಿಧೆಡೆ ಅಧಿಕಾರಿಗಳು, ಮುಖಂಡರು ಗುಲಾಬಿ ಹೂವು, ಪೆನ್ನು, ಸಿಹಿ ವಿತರಿಸಿ ಸ್ವಾಗತಿಸಿ ಶುಭ ಕೋರಿದರು.

ಮಕ್ಕಳಿಗೆ ಶುಭ ಕೋರಿದ ಜಿಪಂ ಸಿಇಒ: ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಜಿಪಂ ಸಿಇಒ ಮೋನಾರೋತ್ ಗುಲಾಬಿ, ಸಿಹಿ ವಿತರಿಸಿ ಶುಭ ಕೋರಿದರು. ನಗರದ ಸರ್ಕಾರಿ ಬಾಲಕಿಯರು ಹಾಗೂ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ತೆರೆಯಲಾಗಿದ್ದ ಪರೀಕ್ಷಾ ಕೇಂದ್ರಗಳಿಗೆ ಅಧಿಕಾರಿಗಳೊಂದಿಗೆ ತೆರಳಿದ ಮೋನಾರೋತ್ ಪರೀಕ್ಷಾ ಕೊಠಡಿಗಳಿಗೆ ತೆರಳಿ ಪರಿಶೀಲಿಸಿದರು.

ಪರೀಕ್ಷಾ ಕೇಂದ್ರಗಳಿಗೆ ಡಿಸಿ ಭೇಟಿ: ತಾಲೂಕಿನ ಹರದನಹಳ್ಳಿ, ವೆಂಕಟಯ್ಯನಛತ್ರ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಶ್ರೀರೂಪ ಭೇಟಿ ನೀಡಿ ಪರಿಶೀಲಿಸಿದರು. ಪರೀಕ್ಷಾ ಕೊಠಡಿಗಳಿಗೆ ತೆರಳಿದ ಜಿಲ್ಲಾಧಿಕಾರಿ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ತಾಯಿಯ ಸಾವಿನ ದುಃಖದಲ್ಲೂ ಪರೀಕ್ಷೆ ಬರೆದ ವಿದ್ಯಾರ್ಥಿ

ಚಾಮರಾಜನಗರ: ತಾಯಿಯ ಸಾವಿನ ದುಃಖದ ನಡುವೆಯೇ ವಿದ್ಯಾರ್ಥಿಯೊಬ್ಬ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಪ್ರಸಂಗ ನಗರದಲ್ಲಿ ನಡೆದಿದೆ.

ನಗರದ ನಿವಾಸಿಯಾದ ವಿದ್ಯಾರ್ಥಿ ಅಬ್ದುಲ್ ಅಫಾನ್ ತನ್ನ ತಾಯಿ ಸಾವಿನ ದುಃಖದಲ್ಲೂ ಪರೀಕ್ಷೆ ಬರೆದಿದ್ದಾನೆ.

ಚಾಮರಾಜನಗರದ ಕ್ರೆಸೆಂಟಾ ಅಕಾಡೆಮಿ ಶಾಲೆಯ ವಿದ್ಯಾರ್ಥಿ ಅಬ್ದುಲ್ ಅಫಾನ್ ಅವರ ತಾಯಿ ನೂರ್ ಜಹರಾ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದು, ಮಂಗಳವಾರ ರಾತ್ರಿ ನಿಧನರಾಗಿದ್ದಾರೆ. ತಾಯಿ ಕಳೆದುಕೊಂಡ ಅಬ್ದುಲ್ ಅಫಾನ್ ಬುಧವಾರ ಬೆಳಗ್ಗೆ ಅಂತ್ಯಕ್ರಿಯೆ ಮುಗಿಸಿದ ಬಳಿಕ ನಗರದ ಸರ್ಕಾರಿ ಬಾಲಕಿಯರ ಪ್ರೌಢಶಾಲಾ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆದಿದ್ದಾನೆ.

ದುಃಖದ ನಡುವೆಯು ಪರೀಕ್ಷೆ ಬರೆದ ವಿದ್ಯಾರ್ಥಿ ಬಗ್ಗೆ ಶಾಲಾ ಶಿಕ್ಷಕರು ಹಾಗೂ ಡಿಡಿಪಿಐ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಾ.21ರಿಂದ ನಂ.ಗೂಡಲ್ಲಿ ಅದ್ಧೂರಿ ಗರಳಪುರಿ ಉತ್ಸವ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿದರು.

ನಂಜನಗೂಡು, ಮಾ.18– ಶ್ರೀಕಂಠೇಶ್ವರಸ್ವಾಮಿಯವರ ದೊಡ್ಡ ಜಾತ್ರೆ ಅಂಗವಾಗಿ ಇದೇ ಪ್ರಥಮ ಬಾರಿಗೆ ನಗರದಲ್ಲಿ ಮಾ.21ರಿಂದ 29ರವರೆಗೆ ಅದ್ಧೂರಿ ಗರಳಪುರಿ ಉತ್ಸವ ನಡೆಯಲಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.21ರಂದು ಬೆಳಗ್ಗೆ 10 ಗಂಟೆಗೆ ಕಸಾಪ ವತಿಯಿಂದ ನಗರದ ಗುರು ಭವನದಲ್ಲಿ ಕನ್ನಡ ಕವಿಗಳ ಭಾವಗೀತೆ ಗಾಯನ ಜರುಗಲಿದೆ. ಮಾ.22ರಂದು ಬೆಳಗ್ಗೆ 6 ಗಂಟೆಗೆ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಆರೋಗ್ಯ ಯೋಗ ಜಾಗೃತಿ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 9 ಗಂಟೆಗೆ ನಂಜನಗೂಡು ಬ್ರಿಗೇಡ್ ವತಿಯಿಂದ ಸಿಟಿಜನ್ ಶಾಲಾವರಣದಲ್ಲಿ ಚದುರಂಗ ಸ್ಪರ್ಧೆ ಹಾಗೂ ನಗರದ ಎಪಿಎಂಸಿ ಆವರಣದಲ್ಲಿ ಬೆಳಗ್ಗೆ 10 ಗಂಟೆಗೆ ನಂಜನಗೂಡು ಸಾಂಸ್ಕೃತಿಕ ಕಲಾ ವೇದಿಕೆಯಿಂದ ಜಾನಪದ, ತಂಬೂರಿ ಪದ, ಭಾವಗೀತೆಗಳ ಗಾಯನ ಸ್ಪರ್ಧೆ ನಡೆಯಲಿದೆ. ಸಂಜೆ 4 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ಯುವ ಕಾಂಗ್ರೆಸ್ ವತಿಯಿಂದ ಚಿತ್ರಕಲಾ ಸ್ಪರ್ಧೆ ಜರುಗಲಿದೆ ಎಂದರು.

ಮಾ.23ರಂದು ನಗರದ ಎಪಿಎಂಸಿ ಆವರಣದಲ್ಲಿ ಜಾನಪದ ಗೀತೆಗಳ ಗಾಯನ ಸ್ಪರ್ಧೆ ಮುಂದುವರೆದ ಕಾರ್ಯಕ್ರಮ ನಡೆಯಲಿದೆ. ಮಾ.24 ರಂದು ಮಹಿಳಾ ಕಾಂಗ್ರೆಸ್ ವತಿಯಿಂದ ನಗರದ ಗುರುಭವನ ಆವರಣದಲ್ಲಿ ಬೆಳಗ್ಗೆ 10 ಗಂಟೆಗೆ ಕೇಶ ವಿನ್ಯಾಸ ಸ್ಪರ್ಧೆ ನಡೆಯಲಿದೆ. ಮಾ.25 ರಂದು ಸಂಜೆ 4 ಗಂಟೆಗೆ ಗುರುಭವನ ಆವರಣದಲ್ಲಿ ವೇಷ ಭೂಷಣ ಸ್ಪರ್ಧೆ ನಡೆಯಲಿದೆ. ಮಾ.26 ರಂದು ಬೆಳಗ್ಗೆ 10.30ಕ್ಕೆ ನಗರದ ಮಹದೇಶ್ವರ ಪ್ಯಾಲೇಸ್ ಕಲ್ಯಾಣ ಮಂಟಪದಲ್ಲಿ ಯುವ ಕಾಂಗ್ರೆಸ್ ವತಿಯಿಂದ ರೂಲ್ಸ್ ಮೇಕಿಂಗ್ಸ್ ಸ್ಪರ್ಧೆ, ಮಾ.27 ರಂದು ಬೆಳಗ್ಗೆ 9ರಿಂದ ನಗರದ ಹೊಸ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿಯಿಂದ ರಂಗೋಲಿ ಬಿಡಿಸುವ ಸ್ಪರ್ಧೆ ಮತ್ತು ಪಂಚ ಗ್ಯಾರಂಟಿ ಯೋಜನೆ ಕಾರ್ಯಕ್ರಮ ಜರುಗಲಿದೆ. ಮಾ.28 ರಂದು ಬೆಳಗ್ಗೆ 10 ಗಂಟೆಗೆ ನಗರದ ಗುರುಭವನದಲ್ಲಿ ಮೆಹಂದಿ ಬಿಡಿಸುವ ಸ್ಪರ್ಧೆ ಆಯೋಜಿಸಲಾಗಿದೆ. ಸಂಜೆ 4 ಗಂಟೆಗೆ ಹಳೆ ಎಪಿಎಂಸಿ ಆವರಣದಲ್ಲಿ ನಂಜನಗೂಡು ಹಾಲು ಒಕ್ಕೂಟದ ಸಂಘಗಳ ವತಿಯಿಂದ ಹಾಲು ಕರೆಯುವ ಸ್ಪರ್ಧೆ ಆಯೋಜಿಸಲಾಗಿದೆ. ಮಾ.29 ರಂದು ಬೆಳಗ್ಗೆ 6 ಗಂಟೆಗೆ ನಗರದ ಜೂನಿಯರ್ ಕಾಲೇಜು ಮುಂಭಾಗದಿಂದ ಆರೋಗ್ಯ ನಡಿಗೆ ವಾಕಥಾನ್ ಸ್ಪರ್ಧೆ ನಡೆಯಲಿದೆ. ಸಂಜೆ 5 ಗಂಟೆಗೆ ನಗರದ ವಿದ್ಯಾವರ್ಧಕ ಕಾಲೇಜು ಆವರಣದಲ್ಲಿ ರಸಮಂಜರಿ ಕಾರ್ಯಕ್ರಮ ಮತ್ತು ಸಮಾರೋಪ ಸಮಾರಂಭ ನಡೆಯಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಉತ್ಸವ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿ.ಎಂ.ಶಂಕರ್, ಕೆ.ಜಿ.ಮಹೇಶ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ನಗರಸಭಾ ಮಾಜಿ ಸದಸ್ಯರಾದ ಬಸವರಾಜು, ರವಿ, ಸೌಭಾಗ್ಯ, ಗಾಯತ್ರಿ, ಕಸಾಪ ತಾಲೂಕು ಅಧ್ಯಕ್ಷೆ ಲತಾ, ಮುಖಂಡರಾದ ಮಹದೇವು, ಬಸವರಾಜು, ಎಂ.ಡಿ.ಬಾಲರಾಜು ಹಲವರಿದ್ದರು.

ಅಕ್ರಮ ಗಣಗಾರಿಕೆ ಟಿಪ್ಪರ್‌ಗಳ ಸಂಚಾರದಿಂದ

ಗುಂಡ್ಲುಪೇಟೆ ಮಿನಿ ಬಳ್ಳಾರಿ ಆಗುತ್ತಿದೆ

ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ



ಗುಂಡ್ಲುಪೇಟೆ, ಮಾ.18– ಅಕ್ರಮ ಗಣಿಗಾರಿಕೆ ಜತೆಗೆ ಮಿತಿ ಮೀರಿದ ಟಿಪ್ಪರ್‌ಗಳ ಹಾವಳಿಯಿಂದ ಗುಂಡ್ಲುಪೇಟೆ ಮಿನಿ ಬಳ್ಳಾರಿ ಆಗುತ್ತಿದೆ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್ ಆರೋಪಿಸಿದರು.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಮಾತನಾಡಿ ಕ್ವಾರಿ ಹಾಗೂ ಕ್ರಷರ್‌ಗಳಿಗೆ ಯಾವುದೇ ನಿಯಮ ಅನ್ವಯವಾಗುವುದಿಲ್ಲ ಎಂಬಂತೆ ದಿನದ 24 ಗಂಟೆ ಬ್ಲಾಸ್ಟಿಂಗ್, ಅರೆಯುವಿಕೆ ಇತರೆ ಪ್ರಕ್ರಿಯೆಗಳು ನಡೆಯುತ್ತಿದೆ. ಮೂವರು ಸಾವನ್ನಪ್ಪಿದ ಬಳಿಕ ಸ್ಥಗಿತವಾಗಿದ್ದ ಮಡಹಳ್ಳಿ ಗುಡ್ಡದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ ಗಣಿಗಾರಿಕೆ ಪ್ರಾರಂಭವಾಗಿದೆ. ಪಟ್ಟಣ ಮತ್ತು ತಾಲೂಕಿನ ಬಹುತೇಕ ರಸ್ತೆಗಳಲ್ಲಿ ಟಿಪ್ಪರ್ ಸಂಚಾರದಿಂದ ಜನಸಾಮಾನ್ಯರು ಓಡಾಡಲು ಭಯ ಪಡುವ ವಾತಾವರಣ ನಿರ್ಮಾಣವಾಗಿದೆ ಎಂದರು.

ಜಿಲ್ಲಾ ಮತ್ತು ತಾಲೂಕು ಆಡಳಿತ ಗಣಿ ಮಾಲೀಕರ ಮುಲಾಜಿಗೆ ಒಳಗಾದಂತೆ ಕೆಲಸ ಮಾಡುತ್ತಿವೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾವು ನೋವುಗಳ ಸಂಖ್ಯೆ ನಿರಂತರವಾಗಿ ಹೆಚ್ಚಳವಾಗುತ್ತಿವೆ. ಪ್ರತಿನಿತ್ಯ ಕೇರಳಕ್ಕೆ 200ಕ್ಕೂ ಹೆಚ್ಚು ಟಿಪ್ಪರ್‌ಗಳಲ್ಲಿ ನೈಸರ್ಗಿಕ ಸಂಪನ್ಮೂಲ ಕೇರಳಕ್ಕೆ ಸಾಗಣೆ ಆಗುವುದನ್ನು ನೋಡಿದರೆ ಭವಿಷ್ಯದಲ್ಲಿ ನಮಗೆ ಏನೂ ಉಳಿಯುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು. ಶಾಲಾ ಮಕ್ಕಳು ಸಂಚರಿಸುತ್ತಿದ್ದ ವಾಹನಕ್ಕೆ ಟಿಪ್ಪರ್ ಡಿಕ್ಕಿಯಾಗಿ ಮಕ್ಕಳು ಅದೃಷ್ಟವಶಾತ್ ಬದುಕುಳಿದಿದ್ದಾರೆ. ಆಸ್ಪತ್ರೆಗೆ ಅಧಿಕಾರಿಗಳು ಸೌಜನ್ಯಕ್ಕೂ ಭೇಟಿ ನೀಡಿಲ್ಲ. ನಾನು ಸಹ ಬ್ಯುಸಿನೆಸ್‌ಮನ್ ನನಗೂ ಕ್ವಾರಿ, ಕ್ರಷರ್ ಇದೆ ಎಂದು ಹೇಳುತ್ತಾ ಅಕ್ರಮಗಳಿಗೆ ಶಾಸಕರು ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿದ್ದಾರೆ. ನಿರಂತರ ಅಪಘಾತ ಪ್ರಕರಣಗಳು ವರದಿಯಾದರೂ ಚುನಾಯಿತ ಜನಪ್ರತಿನಿಧಿ ಯಾವುದೇ ಜವಾಬ್ದಾರಿ ಇಲ್ಲದವರಂತೆ ಆರಾಮಾಗಿ ಕಾಲ ಕಳೆಯುತ್ತಿದ್ದಾರೆ ಎಂದು ಶಾಸಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ಅವಧಿಯಲ್ಲಿ ಟಿಪ್ಪರ್‌ಗಳ ಅಬ್ಬರಕ್ಕೆ ಅಂಕುಶ ಹಾಕಲಾಗಿತ್ತು. ಅದರಂತೆ ವಿರೋಧ ಪಕ್ಷದವರಾದ ನಾವು ಮತ್ತು ಸಂಘ, ಸಂಸ್ಥೆಯವರ ಸಭೆ ನಡೆಸಿ ಟಿಪ್ಪರ್ ಹಾವಳಿಗೆ ಅಂಕುಶ ಹಾಕಲು ಅಧಿಕಾರಿಗಳು ಮುಂದಾಗಬೇಕು ಎಂದು ಒತ್ತಾಯಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಎಲ್.ಸುರೇಶ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎನ್.ಮಲ್ಲೇಶ್, ಮಂಡಲ ಅಧ್ಯಕ್ಷ ಸಿ.ಮಹದೇವಪ್ರಸಾದ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಡಾ.ನವೀನ್‌ಮೌರ್ಯ, ಮುಖಂಡರಾದ ನಾಗೇಶ್, ಅಗತಗೌಡನಹಳ್ಳಿಬಸವರಾಜು, ಸುನಿಲ್‌ಮೂಡ್ಲು, ಮಹೇಂದ್ರಗರಗನಹಳ್ಳಿ, ಮಾಡ್ರಹಳ್ಳಿ ನಾಗೇಂದ್ರ ಮಂಜುಶಿವಪುರ, ಮಹೇಂದ್ರಹಳ್ಳದಮಾದಹಳ್ಳಿ, ಪ್ರಾಯ್ ಹಾಜರಿದ್ದರು.

ಮಠಗಳು ಜನರಿಗೆ ಮಾರ್ಗದರ್ಶಕ ಕೇಂದ್ರಗಳಾಗಿವೆ



ಕಾರ್ಯಕ್ರಮದಲ್ಲಿ ಹೆಳವರಹುಂಡಿ ಸಿದ್ದಪ್ಪ ಮಾತನಾಡಿದರು.

ತಿ.ನರಸೀಪುರ, ಮಾ.18– ಶರಣರು, ಸಂತರು, ಮಠಾಧಿಪತಿಗಳು ನಿರ್ಮಿಸಿದ ಮಠಗಳು ಹಾಗೂ ಸಂಸ್ಥೆಗಳು ಜನರಿಗೆ ಮಾರ್ಗದರ್ಶಕ ಕೇಂದ್ರಗಳಾಗಿವೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ಸರಗೂರು ಶ್ರೀಹೊಸಮಠದ ಆವರಣದಲ್ಲಿ ಶ್ರೀನಂಜುಂಡಸ್ವಾಮಿಗಳ ಸೇವಾ ಪ್ರತಿಷ್ಠಾನದಿಂದ ಶ್ರೀಬಸವರಾಜೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ನಡೆದ ಶ್ರೀನಂಜುಂಡಸ್ವಾಮಿ ಶಿವಯೋಗಿಗಳ 16ನೇ ವರ್ಷದ ಸಂಸ್ಮರಣೋತ್ಸವ, ಕಪ್ಪಡಿ ಕ್ಷೇತ್ರದಿಂದ ಬರುವ ಭಕ್ತರಿಗೆ ಅನ್ನಸಂತರ್ಪಣೆ ಹಾಗೂ ಶ್ರೀಮಲೆ ಮಹದೇಶ್ವರಸ್ವಾಮಿಯವರ ಹುಲಿವಾಹನ ಉತ್ಸವ ಮೂರ್ತಿ ಸಂಪ್ರೋಕ್ಷಣ ಕಾರ್ಯಕ್ರಮದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

ಶ್ರೀಮಠದಿಂದ ಶ್ರೀಕಪ್ಪಡಿ ಕ್ಷೇತ್ರಕ್ಕೆ ಹೋಗಿ ಸೇವೆಗೈದು ಅಲ್ಲಿಂದ ಬರುವ ಭಕ್ತರಿಗೆ ಹೊಸ ಮಠದ ಬಸವರಾಜೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ಅನ್ನ ಸಂತರ್ಪಣೆ ಮಾಡಲಾಗುತ್ತಿದೆ. ದಿನೇ ದಿನೇ ಇಲ್ಲಿಗೆ ಬರುವ ಭಕ್ತರ ಪ್ರಮಾಣ ಹೆಚ್ಚುತ್ತಿದೆ. ಈ ಬಾರಿಯೂ 25 ಸಾವಿರಕ್ಕೂ ಹೆಚ್ಚು ಕಪ್ಪಡಿ ಕ್ಷೇತ್ರದ ಭಕ್ತರು ಬೊಪ್ಪೇಗೌಡನಪುರಕ್ಕೆ ಹೋಗುವ ಮಾರ್ಗಮಧ್ಯ ಹೊಸ ಮಠದಲ್ಲಿ ದಾಸೋಹ ಸ್ವೀಕರಿಸಿ ನಂತರ ಧರೆಗೆ ದೊಡ್ಡವರ ಸನ್ನಿಧಾನಕ್ಕೆ ತೆರಳುತ್ತಾರೆ. ಇಲ್ಲಿ ನಡೆಯುವ ದಾಸೋಹವನ್ನು ಗಮನಿಸಿದರೆ ಬಸವಣ್ಣನವರ ದಾಸೋಹ ತತ್ವ ಹಾಗೂ ಬಸವಣ್ಣನವರು ಶ್ರೀಮಠದಲ್ಲಿ ಜೀವಂತವಾಗಿದ್ದಾರೆಂದು ಅನಿಸುತ್ತದೆ ಎಂದರು.

ಶ್ರೀಮಲೆ ಮಹದೇಶ್ವರಸ್ವಾಮಿ ಹಾಗೂ ಸರಗೂರು ಶರಣರ ಹಿನ್ನೆಲೆ ಕುರಿತು ಜ್ಯೋತಿ ಪರಮೇಶ್ ಪಟೇಲ್ ಭಾಷಣ ಮಾಡಿದರು. ಸಭೆಯ ಸಾನಿಧ್ಯವನ್ನು ವಾಟಾಳು ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಅಂಕನಹಳ್ಳಿ ಗವಿ ಮಠದ ಶಿವರುದ್ರ ಶಿವಾಚಾರ್ಯ ಸ್ವಾಮೀಜಿ, ವಿರಾಜಪೇಟೆ ಅರಮೇರಿ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಎಂಎಲ್ ಹುಂಡಿ ಶೂನ್ಯ ಪೀಠದ ಶ್ರೀಗೌರಿ ಶಂಕರ ಸ್ವಾಮೀಜಿ, ಮರಳೇ ಗವಿ ಮಠದ ಡಾ.ಮುಮ್ಮುಡಿ ಶಿವರುದ್ರ ಸ್ವಾಮೀಜಿ ಹಾಗೂ ಹೊಸಮಠದ ಶ್ರೀಬಸವರಾಜೇಂದ್ರ ಸ್ವಾಮಿಗಳು ವಹಿಸಿದ್ದರು.


ಈ ವೇಳೆ ಕೆ.ಆರ್.ಸಿದ್ದಲಿಂಗಾರಾಧ್ಯ, ಎಸ್.ನಾಗರಾಜು, ಹೆಚ್.ಎಸ್.ಶಿವಸ್ವಾಮಿ, ಪರಮೇಶ್ ಪಟೇಲ್, ಮಾಯಪ್ಪ ಉಪಸ್ಥಿತರಿದ್ದರು.

ಕಿಶನ್ ನಿಧನ



ಹೆಚ್.ಡಿ.ಕೋಟೆ, ಮಾ.18– ಪಟ್ಟಣದ ಹೌಸಿಂಗ್‌ಬೋರ್ಡ್ ನಿವಾಸಿ ಕಿಶನ್(26) ಬುಧವಾರ ನಿಧನರಾದರು. ಮೃತರು ತಾಯಿ, ಅಜ್ಜಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೈಲ್ವೆ ತಡೆಗೋಡೆಗೆ ಸಿಲುಕಿ ಒದ್ದಾಡಿದ ಸಲಗ



ಹುಣಸೂರು, ಮಾ.18– ಮೇವನ್ನರಸಿ ಕಾಡಿನಿಂದ ನಾಡಿಗೆ ಬಂದಿದ್ದ ಸಲಗ ರೈಲ್ವೆ ಕಂಬಿ ತಡೆ ಗೋಡೆಗೆ ಸಿಲುಕಿ ಒದ್ದಾಡಿದ ಘಟನೆ ತಾಲೂಕಿನ ಉಡುವೆಪುರದ ಬಳಿ ಬುಧವಾರ ಬೆಳಗ್ಗೆ ನಡೆದಿದೆ.

ಮಂಗಳವಾರ ರಾತ್ರಿ ಕಾಡಿನಿಂದ ಹೊರ ಬಂದಿದ್ದ ಸಲಗವು ಸುತ್ತಮುತ್ತಲ ತೋಟಗಳಲ್ಲಿ ಮೇವುಂಡು ಹೊಟ್ಟೆ ತುಂಬಿಸಿಕೊಂಡಿದೆ. ಮುಂಜಾನೆ ಉದ್ಯಾನ ದಾಟಿ ಬಂದ ಸಲಗ ಕಂಡ ರೈತರು ಕೂಗಾಟ ನಡೆಸಿ ಕಾಡಿನತ್ತ ಓಡಿಸಿದ್ದಾರೆ. ಈ ವೇಳೆ ಸಲಗ ಕಾಡಿನತ್ತ ಓಡುವ ಭರದಲ್ಲಿ ತಾನು ರೈಲ್ವೆ ಕಂಬಿ ದಾಟಿದ ಸ್ಥಳ ತಿಳಿಯದೆ ಹತ್ತಿರದ ರೈಲ್ವೆ ಕಂಬಿ ತಡೆಗೋಡೆ ಕೆಳಗಿನಿಂದ ನುಸುಳಿ ಹೋಗಲು ಯತ್ನಿಸಿ ಸಿಲುಕಿಕೊಂಡು ಘೀಳಿಡುತ್ತಾ ಒದ್ದಾಡಿದೆ ಎನ್ನಲಾಗಿದೆ. ವಿಷಯ ತಿಳಿದು ಆನೆ ಕಾವಲು ಪಡೆಯ ವಾಚರ್ ಸ್ಥಳಕ್ಕಾಗಮಿಸಿದರಾದರೂ, ಸ್ಥಳದಲ್ಲಿದ್ದ ಗ್ರಾಮಸ್ಥರ ಚೀರಾಟದಿಂದಾಗಿ ಸಲಗ ತಡೆಗೋಡೆ ದಾಟಿ ಅರಣ್ಯದತ್ತ ಓಡಿದೆ ಎಂದು ತಿಳಿದು ಬಂದಿದೆ.

ಸ್ಕೂಟರ್‌ಗೆ ಅಪರಿಚಿತ ವಾಹನ ಡಿಕ್ಕಿ: ಸವಾರ ಸಾವು

ಹುಣಸೂರು, ಮಾ.18– ಸ್ಕೂಟರ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಮೀನಾಕ್ಷಿ ಟೆಕ್ಸ್‌ಟೈಲ್ಸ್ ಬಳಿ ಬುಧವಾರ ರಾತ್ರಿ ನಡೆದಿದೆ.



ತಾಲೂಕಿನ ಅಗ್ರಹಾರ ಗ್ರಾಮದ ಸವಾಲೇಗೌಡರ ಪುತ್ರ ರವಿ ಸಾವನ್ನಪ್ಪಿದವರು. ಈತ ಕಾರ್ಯ ನಿಮಿತ್ತ ಹುಣಸೂರಿಗೆ ಆಗಮಿಸಿ ತನ್ನ ಸ್ಕೂಟರ್‌ನಲ್ಲಿ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಮೀನಾಕ್ಷಿ ಟೆಕ್ಸ್‌ಟೈಲ್ಸ್ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ರವಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಸ್ಕೂಟರ್ ಅನ್ನು ವಶಕ್ಕೆ ಪಡೆದು ಶವವನ್ನು ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

5 ಸಾವಿರ ನಗದು ಸೇರಿ 5.25 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ

ಮೈಸೂರು,ಮಾ.18(ಪಿಎಂ)– ಮನೆಯಲ್ಲಿ ಯಾರೂ ಇಲ್ಲದ ವೇಳೆ 5 ಸಾವಿರ ನಗದು ಸೇರಿದಂತೆ 5,25,000 ರೂ. ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿರುವ ಘಟನೆ ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ನಾಡನಹಳ್ಳಿಯಲ್ಲಿ ನಡೆದಿದೆ.

ನಾಡನಹಳ್ಳಿಯ ಗುರುಸಿದ್ದಯ್ಯ ಅವರ ಮನೆಯಲ್ಲಿ ಮಾ.16ರಂದು ಖದೀಮರು ಕೈಚಳಕ ತೋರಿದ್ದಾರೆ. ಮನೆ ಬಾಗಿಲಿಗೆ ಬೀಗ ಹಾಕಿ ಮಾಮೂಲಿನಂತೆ ಕೀ ಅನ್ನು ಇಟ್ಟಿಗೆ ಮೇಲಿಟ್ಟು ಹೋಗುವಂತೆ ನನ್ನ ಎರಡನೇ ಪುತ್ರನಿಗೆ ತಿಳಿಸಿದ್ದೆ. ಅದರಂತೆ ಆತ ಹೊರಗೆ ಹೋಗಿದ್ದ. ಆದರೆ ನಾವು ವಾಪಸ್ ಬಂದಾಗ, ಕಳ್ಳತನ ನಡೆದಿತ್ತು. ನಮಗೆ ಸೇರಿದ ಚಿನ್ನದ ಅವಲಕ್ಕಿ ಸರ 30 ಗ್ರಾಂ, ಕೈಬಳೆ 20 ಗ್ರಾಂ, ಗುಂಡು ಸರ 8 ಗ್ರಾಂ, 2 ಉಂಗುರ 7 ಗ್ರಾಂ, ಲಕ್ಷ್ಮೀ ಓಲೆ 4 ಗ್ರಾಂ, ಕತ್ತಿನ ಸರ 11 ಗ್ರಾಂ ಸೇರಿದಂತೆ ನಗದು 5 ಸಾವಿರ ರೂ. ಹಾಗೂ ಬೆಳ್ಳಿಯ ಕುಂಕುಮ ಬಟ್ಟಲು ಮತ್ತು ದೀಪಗಳು ಅಂದಾಜು 150 ಗ್ರಾಂ ಕಳ್ಳತನ ಮಾಡಲಾಗಿದೆ ಎಂದು ಗುರುಸಿದ್ದಯ್ಯ ನೀಡಿದ ದೂರಿನನ್ವಯ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೈಬರ್ ವಂಚಕರ ಮಾತು ನಂಬಿ


26.90 ಲಕ್ಷ ರೂ. ಕಳೆದುಕೊಂಡ ವೃದ್ಧೆ

ಮೈಸೂರು,ಮಾ.18(ಪಿಎಂ)–ಸೈಬರ್ ವಂಚಕರ ಮಾತು ನಂಬಿ ವೃದ್ಧ ಮಹಿಳೆಯೊಬ್ಬರು 26,90,000 ರೂ. ಕಳೆದುಕೊಂಡಿರುವ ಸಂಬಂಧ ಮೈಸೂರು ನಗರ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ರಾಘವೇಂದ್ರನಗರದ ವೃದ್ಧೆಯೊಬ್ಬರು ವಂಚನೆಗೆ ಒಳಗಾದವರು. ಅಪರಿಚಿತರು ಆಪ್‌ವೊಂದನ್ನು ಡೌನ್‌ಲೋಡ್ ಮಾಡಿಕೊಂಡು ಹಣ ಹೂಡಿಕೆ ಮಾಡುವಂತೆ ಉತ್ತೇಜಿಸಿದ್ದು, ನನ್ನ ಕರ್ನಾಟಕ ಬ್ಯಾಂಕ್ ಖಾತೆಯಿಂದ ವಿವಿಧ ಹಂತದಲ್ಲಿ ಒಟ್ಟು 26,90,000 ರೂ. ಹೂಡಿಕೆ ಮಾಡಿದ್ದೆ. ಡ್ರಾ ಮಾಡಲು ಹೋದಾಗ ಹೆಚ್ಚಿನ ಹಣ ಕಟ್ಟುವಂತೆ ಸಂದೇಶ ಬಂದಿತು. ಆಗ ಇದು ಮೋಸವೆಂದು ತಿಳಿಯಿತು ಎಂದು ವೃದ್ಧ ಮಹಿಳೆಯು ದೂರಿನಲ್ಲಿ ತಿಳಿಸಿದ್ದು, ಅದರಂತೆ ಮಾ.16ರಂದು ಎಫ್‌ಐಆರ್ ದಾಖಲಾಗಿದೆ.

ನಾಡಿನ ಜನತೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಯುಗಾದಿ ಶುಭಾಶಯ

ಮೈಸೂರು,ಮಾ.18(ಪಿಎಂ)– ಮಾಜಿ ಪ್ರಧಾನಿಗಳೂ ಆದ ರಾಜ್ಯಸಭಾ ಸದಸ್ಯ ಹೆಚ್.ಡಿ.ದೇವೇಗೌಡ ಅವರು ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬ ಹಾಗೂ ನೂತನ ಸಂವತ್ಸರದ ಹಾರ್ದಿಕ ಶುಭಾಶಯಗಳನ್ನು ಕೋರಿದ್ದಾರೆ.



ಬೇವು ಬೆಲ್ಲದ ಸವಿಯ ಹಬ್ಬವು ನಮ್ಮ ಜೀವನದ ಏಳು–ಬೀಳುಗಳನ್ನು ಪ್ರತಿಫಲಿಸುವ ಅರ್ಥಪೂರ್ಣ ಸಂಭ್ರಮ. ಬೇವಿನ ಕಹಿ ಬದುಕಿನ ಪಾಠವಾಗಲಿ, ಬೆಲ್ಲದ ಸಿಹಿಯು ಭವಿಷ್ಯದ ಒಳ್ಳೆಯ ಹಾದಿಯಾಗಲಿ.

ವಿಶ್ವಾವಸು ನಾಮ ಸಂವತ್ಸರವನ್ನು ದಾಟಿ ಪರಾಭವ ನಾಮ ಸಂವತ್ಸರಕ್ಕೆ ಪಾದಾರ್ಪಣೆ ಮಾಡುತ್ತಿದ್ದೇವೆ. ಇಲ್ಲಿ ಪರಾಭವ ಎಂದರೆ ಸೋಲು ಎಂದರ್ಥವಲ್ಲ, ದುರ್ಗುಣಗಳಿಗೆ ಪರಾಭವ ಆಗಬೇಕು. ಕೆಡುಕಿಗೆ ಸೋಲಾಗಬೇಕು ಎಂಬುದಾಗಿದೆ. ಇಂತಹ ಸದಾಶಯದೊಂದಿಗೆ ಹೊಸ ಸಂವತ್ಸರಕ್ಕೆ ಹೆಜ್ಜೆ ಇಡೋಣ. ಎಲ್ಲರಿಗೂ ಶುಭವಾಗಲಿ. ಆ ಭಗವಂತ ಸುಖ ಉತ್ತಮ ಆಯುರಾರೋಗ್ಯ ನೀಡಿ ಶಾಂತಿ, ನೆಮ್ಮದಿ, ಸಮೃದ್ಧಿ ಕರುಣಿಸಿ ಕಾಪಾಡಲಿ ಎಂದು ಅವರು ಪ್ರಕಟಣೆಯಲ್ಲಿ ಸಂದೇಶ ತಿಳಿಸಿದ್ದಾರೆ.

ಮೈಸೂರು ನಗರ ನೂತನ ಎಲ್ & ಓ ಡಿಸಿಪಿ ಡಾ.ಹರ್ಷ ಪ್ರಿಯಂವದಾ ಅಧಿಕಾರ ಸ್ವೀಕಾರ

ಮೈಸೂರು,ಮಾ.18(ಪಿಎಂ)– ಮೈಸೂರು ನಗರ ಪೊಲೀಸ್ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರಾಗಿ ಡಾ.ಹರ್ಷ ಪ್ರಿಯಂವದಾ ಬುಧವಾರ ಸಂಜೆ ಅಧಿಕಾರ ಸ್ವೀಕರಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಂಕೀರ್ಣದಲ್ಲಿರುವ ಕಚೇರಿಯಲ್ಲಿ ಕಡತಗಳಿಗೆ ಸಹಿ ಮಾಡುವ ಮೂಲಕ ಅವರು ಅಧಿಕಾರ ವಹಿಸಿಕೊಂಡರು.



ನೂತನ ಡಿಸಿಪಿ ಡಾ.ಹರ್ಷ ಪ್ರಿಯಂವದಾ ಅವರನ್ನು ಅಪರಾಧ ಮತ್ತು ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತ ಸುಂದರ್ ರಾಜ್, ಹೂಗುಚ್ಛ ನೀಡಿ, ಸ್ವಾಗತಿಸಿದರು.

ಈ ವೇಳೆ ಅಪರಾಧ ಮತ್ತು ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತ ಸುಂದರ್ ರಾಜ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಡಾ.ಹರ್ಷ ಪ್ರಿಯಂವದಾ ಅವರಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು.

ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಾ.ಹರ್ಷ ಪ್ರಿಯಂವದಾ ಅವರು, ಮೈಸೂರಿನಂತಹ ನಗರದಲ್ಲಿ ಸೇವೆ ಸಲ್ಲಿಸುವುದು ಹೆಮ್ಮೆ ಎನ್ನಿಸುತ್ತದೆ. ಸಾರ್ವಜನಿಕರ ಸುರಕ್ಷತೆಗೆ ಪೂರಕವಾಗಿ ಕೆಲಸ ಮಾಡಲಿದ್ದೇನೆ. ಅಲ್ಲದೆ, ಕಾನೂನು–ಸುವ್ಯವಸ್ಥೆ ಕಾಪಾಡುವುದು, ಸೈಬರ್ ಅಪರಾಧ ಹಾಗೂ ಮಾದಕ ವಸ್ತು ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಹಾಗೂ ದುರ್ಬಲ ವರ್ಗದ ಸಮಸ್ಯೆಗಳ ನಿವಾರಣೆಗೆ ವಿಶೇಷ ಒತ್ತು ನೀಡಿ ಕಾರ್ಯ ನಿರ್ವಹಿಸಲಿದ್ದೇನೆ ಎಂದು ಹೇಳಿದರು.

ಜನಸ್ನೇಹಿ ಪೊಲೀಸ್ ವ್ಯವಸ್ಥೆ ಮತ್ತು ಸಮುದಾಯ ಪೊಲೀಸ್ ವ್ಯವಸ್ಥೆಗೂ ವಿಶೇಷ ಗಮನ ನೀಡಲಿದ್ದೇನೆ. ಸಮಾಜದಲ್ಲಿ ಶಾಂತಿ ನೆಲೆಸಲು ಪೂರಕವಾಗಿ ಜನತೆಯ ನಿರೀಕ್ಷೆಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸಲಿದ್ದೇನೆ ಎಂದರು. ಇದೇ ವೇಳೆ ಮೈಸೂರಿನ ಜನತೆಗೆ ಯುಗಾದಿ ಮತ್ತು ರಂಜಾನ್ ಹಬ್ಬಗಳ ಶುಭಾಶಯ ಕೋರಿದರು.

ಬಸವಣ್ಣಯ್ಯ ನಿಧನ



ಹುಣಸೂರು, ಮಾ.18– ಮೂಲತಃ ಹುಬ್ಬಳ್ಳಿ ನಿವಾಸಿ, ನಗರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಸಂಗೀತ ಶಿಕ್ಷಕ ಬಸವಣ್ಣಯ್ಯ (55) ಬುಧವಾರ ಮಧ್ಯಾಹ್ನ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯ ಸಹಕಾರ ಮಹಾಮಂಡಳದ ಆಡಳಿತ ಮಂಡಳಿ ಚುನಾವಣೆಗೆ ಹೈಕೋರ್ಟ್ ತಡೆಯಾಜ್ಞೆ

ಮೈಸೂರು,ಮಾ.18(ಪಿಎಂ)– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಯ ಆಡಳಿತ ಮಂಡಳಿ ಚುನಾವಣೆಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದು, ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳು ಮುಂದಿನ ಆದೇಶದವರೆಗೆ ಚುನಾವಣೆಯನ್ನು ಮುಂದೂಡಿದ್ದಾರೆ.



ಚಂದ್ರಶೇಖರ್

ಸದರಿ ಮಹಾಮಂಡಳಿಯ ಆಡಳಿತ ಮಂಡಳಿಗೆ (5 ವರ್ಷದ ಅವಧಿಗೆ) ಮಾ.20ರಂದು ಚುನಾವಣೆ ನಿಗದಿಯಾಗಿತ್ತು. ಅದರಂತೆ ಮಾ.3ರಂದು ವೇಳಾಪಟ್ಟಿ ಪ್ರಕಟಿಸಿ, ಮಾ.6ರಿಂದ 12ರವರೆಗೆ ಸ್ವೀಕೃತವಾದ ನಾಮಪತ್ರಗಳನ್ನು ಮಾ.13ರಂದು ಪರಿಶೀಲಿಸಿ ಕ್ರಮಬದ್ಧವಾದ ನಾಮಪತ್ರಗಳನ್ನು ಪ್ರಕಟಿಸಿ, ಮಾ.14ರಂದು ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ವಾಪಸ್ಸು ಪಡೆಯಲು ಅವಕಾಶ ಕಲ್ಪಿಸಿ, ಅಂತಿಮ ಕಣದಲ್ಲಿ ಉಳಿದಿರುವ ಅರ್ಹ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ ಮಾಡಿ ಚುನಾವಣೆ ಪ್ರಕ್ರಿಯೆ ಮುಂದುವರೆಸಲಾಗಿತ್ತು.

ಈ ನಡುವೆ ಹೈಕೋರ್ಟ್ ಮಧ್ಯಂತರ ಅರ್ಜಿ ವಿಚಾರಣೆ ನಡೆಸಿ ಮಧ್ಯಂತರ ತೀರ್ಪಿನಲ್ಲಿ ಮಾ.20ರಂದು ನಿಗದಿಯಾಗಿದ್ದ ಚುನಾವಣೆ ಹಾಗೂ ಚುನಾವಣಾ ವೇಳಾಪಟ್ಟಿಗೆ ತಡೆಯಾಜ್ಞೆ ನೀಡಿ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಚುನಾವಣೆಯನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳಿ ಅಧ್ಯಕ್ಷ ಎಸ್.ಚಂದ್ರಶೇಖರ್, ಸದರಿ ಚುನಾವಣೆಗೆ ಕೋರ್ಟ್‌ನಿಂದ ತಡೆಯಾಜ್ಞೆ ತಂದವರು. ರಾಜ್ಯ ಸರ್ಕಾರದ ನೂತನ ಬೈಲಾದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡ ಜನಾಂಗಕ್ಕೆ ಅವಕಾಶ ಕಲ್ಪಿಸಬೇಕೆಂಬ ನಿಟ್ಟಿನಲ್ಲಿ ಈ ಚುನಾವಣೆ ಸಂಬಂಧ ಹೈಕೋರ್ಟ್ ಮೊರೆ ಹೋಗಿದ್ದರು.

ಇರಾನ್ ವಾರ್ನಿಂಗ್ ಬೆನ್ನಲ್ಲೇ ಕಚ್ಚಾ ತೈಲ ಪ್ರತಿ ಬ್ಯಾರೆಲ್‌ಗೆ 103 ಡಾಲರ್ ಏರಿಕೆ!

ಟೆಹರಾನ್, ಮಾ.18– ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ 19ನೇ ದಿನಕ್ಕೆ ಕಾಲಿಟ್ಟಿದ್ದು, ಪರಿಸ್ಥಿತಿ ಶಾಂತಗೊಳ್ಳುವ ಯಾವುದೇ ಲಕ್ಷಣ ತೋರುತ್ತಿಲ್ಲ.

ಹಾರ್ಮುಜ್ ಜಲಸಂಧಿಯಲ್ಲಿನ ಪರಿಸ್ಥಿತಿಯು ಸಹಜ ಸ್ಥಿತಿಗೆ ಮರಳಲ್ಲ ಎಂದು ಇರಾನ್ ಸಂಸದೀಯ ಸ್ಪೀಕರ್ ಮೊಹಮ್ಮದ್ ಬಾಕರ್ ಖಲಿಬಾಫ್ ಹೇಳಿಕೆ ಬೆನ್ನಲ್ಲೇ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್ ಕಚ್ಚಾ ತೈಲ ಬೆಲೆಯು ಬುಧವಾರ 103 ಡಾಲರ್‌ಗೆ ಏರಿದೆ.

ಖಲಿಬಾಫ್ ಹೇಳಿಕೆ ಹಾರ್ಮುಜ್ ಜಲಸಂಧಿ ಮೂಲಕ ತೈಲ ಹಡಗುಗಳ ಸುರಕ್ಷತೆ ಮೂಲಕ ಅನಿಶ್ಚಿತತೆಯನ್ನು ಹೆಚ್ಚಿಸಿದೆ. ಹಾರ್ಮುಜ್ ಜಲಸಂಧಿ ಪರಿಸ್ಥಿತಿಯು ಅದರ ಯುದ್ಧ–ಪೂರ್ವ ಸ್ಥಿತಿಗೆ ಮರಳುವುದಿಲ್ಲ ಎಂದು ಖಲಿಬಾಫ್ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ತಿಳಿಸಿದ್ದಾರೆ.

ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಜಂಟಿ ವೈಮಾನಿಕ ದಾಳಿಯಿಂದ ಈ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ನಡುವೆ ಖಲಿಬಾಫ್ ನೀಡಿರುವ ಹೇಳಿಕೆ ಇಂಧನ ಪೂರೈಕೆ ಸ್ಥಿರತೆ ಬಗ್ಗೆ ಮತ್ತಷ್ಟು ಕಳವಳವನ್ನುಂಟು ಮಾಡಿದೆ.

ಬುಧವಾರದ ವಹಿವಾಟಿನ ವೇಳೆ ಕಚ್ಚಾ ತೈಲ ಬೆಲೆಯು ಪ್ರತಿ ಬ್ಯಾರೆಲ್‌ಗೆ 103.45 ಡಾಲರ್ ತಲುಪಿದೆ. ಇದು ಜಾಗತಿಕ ಮಾರುಕಟ್ಟೆಗಳಲ್ಲಿ ನಿರಂತರ ಒತ್ತಡವನ್ನು ಪ್ರತಿಬಿಂಬಿಸುತ್ತದೆ. ಸದ್ಯ ನಡೆಯುತ್ತಿರುವ ಸಂಘರ್ಷದಿಂದಾಗಿ ಕೇವಲ 18 ದಿನಗಳಲ್ಲಿ ತೈಲ ಬೆಲೆಗಳು ಶೇ.40ಕ್ಕಿಂತ ಹೆಚ್ಚು ಏರಿಕೆಯಾಗಿದ್ದು, ಇದು ಹಾರ್ಮುಜ್ ಜಲಸಂಧಿಯ ಮೂಲಕ ಇಂಧನ ಪೂರೈಕೆಗೆ ಅಡ್ಡಿಪಡಿಸಿದೆ. ಜಾಗತಿಕ ಇಂಧನ ಮಾರುಕಟ್ಟೆಗಳ ಮೇಲೆ ವಿಶೇಷವಾಗಿ ಏಷ್ಯಾದಲ್ಲಿ ಗಮನಾರ್ಹವಾಗಿ ಪ್ರಭಾವ ಬೀರಿದೆ.

ಯುದ್ಧದ ಆರಂಭದ ಮೊದಲು ಫೆಬ್ರವರಿ 27ರಂದು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲ ಬೆಲೆಗಳು ಪ್ರತಿ ಬ್ಯಾರೆಲ್‌ಗೆ ಯುಎಸ್‌ಡಿ 73ರಷ್ಟಿತ್ತು. ಈಗ ಅದು ಪ್ರತಿ ಬ್ಯಾರೆಲ್‌ಗೆ 103 ಡಾಲರ್‌ಗೆ ಏರಿಕೆ ಆಗಿದೆ.

ಪ್ರೀತಿ ಮಾಡಿದ್ದು ನಮ್ಮನ್ನು, ಆದರೆ ಮದುವೆಯಾಗಿದ್ದು ಮೋದಿಯನ್ನು!

ನವದೆಹಲಿ, ಮಾ.18– ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಬುಧವಾರ ನಿವೃತ್ತಿ ಹೊಂದುತ್ತಿರುವ ಸದಸ್ಯರಿಗೆ ವಿದಾಯ ಹೇಳಿದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಬಗ್ಗೆ ಖರ್ಗೆ ಅವರು ಮಾಡಿದ ಟೀಕೆ, ಪ್ರಧಾನಿ ಮೋದಿ ಸೇರಿದಂತೆ ಸಂಸತ್ತನ್ನು ನಗೆಗಡಲಲ್ಲಿ ತೇಲಿಸಿತು.

ಸಂಸತ್ತಿನ ಕಲಾಪಗಳ ಸಮಯದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿದ ದೇವೇಗೌಡರ ಹೇಳಿಕೆಗಳ ಬಗ್ಗೆ ಖರ್ಗೆ ತಮಾಷೆಯಾಗಿಯೇ ವಾಗ್ದಾಳಿ ನಡೆಸಿದರು.

ಇತ್ತೀಚಿನ ದಿನಗಳಲ್ಲಿ ದೇವೇಗೌಡರು ಮತ್ತು ಅವರ ಪಕ್ಷ ಜೆಡಿಎಸ್ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವುದನ್ನು ಉಲ್ಲೇಖಿಸಿದ ಮಲ್ಲಿಕಾರ್ಜುನ ಖರ್ಗೆ ಅವರು, ಪ್ರೇಮ್ ಹಮಾರೆ ಸಾಥ್, ಶಾದಿ ಮೋದಿಜಿ ಕೆ ಸಾಥ್' (ನಮ್ಮೊಂದಿಗೆ ಪ್ರೀತಿ ಮಾಡಿದರು, ಆದರೆ ಪ್ರಧಾನಿ ಮೋದಿ ಅವರೊಂದಿಗೆ ಮದುವೆಯಾದರು) ಎಂಬ ಹೇಳಿಕೆ ಇಡೀ ಸದನವನ್ನೇ ನಗೆಗಡಲಲ್ಲಿ ತೇಲುವಂತೆ ಮಾಡಿತು.

ನಿರ್ಗಮಿತ ಸದಸ್ಯರಿಗೆ ಬೀಳ್ಕೊಡುಗೆ: ನಿವೃತ್ತಿ ಹೊಂದುತ್ತಿರುವ ಸದಸ್ಯರಿಗೆ ವಿದಾಯ ಹೇಳಿದ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ಸದನದ ಕಾರ್ಯವಿಧಾನ ಮತ್ತು ವ್ಯವಹಾರ ನಡವಳಿಕೆಯ ನಿಯಮಗಳನ್ನು ಪರಿಶೀಲಿಸುವಂತೆ ಕರೆ ನೀಡಿದರು. ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳನ್ನು ಗಂಭೀರವಾಗಿ ಚರ್ಚಿಸಲು ಸಾಧ್ಯವಾಗುವಂತೆ ಸದನವು ಹೆಚ್ಚಿನ ಅಧಿವೇಶನಗಳನ್ನು ನಡೆಸಬೇಕು ಎಂದರು.



ಕಾನೂನು ರೂಪಿಸುವಲ್ಲಿ ವಿರೋಧ ಪಕ್ಷದ ಸದಸ್ಯರು ಹೆಚ್ಚಾಗಿ ಭಾಗವಹಿಸಬೇಕು. ಅದಕ್ಕೆ ಯಾವುದೇ ಅಡೆತಡೆ ಉಂಟಾದರೆ ಅದು ಸಂಸತ್ತನ್ನು ದುರ್ಬಲಗೊಳಿಸುತ್ತದೆ ಎಂದ ಅವರು, ರಾಜ್ಯಸಭೆಯ ಕಾರ್ಯವಿಧಾನ ಮತ್ತು ವ್ಯವಹಾರ ನಡವಳಿಕೆಯ ನಿಯಮಗಳ ನಿಯಮಿತ ಪರಿಶೀಲನೆ ಅತ್ಯಗತ್ಯ ಎಂಬುದು ನನ್ನ ದೃಢ ನಂಬಿಕೆ. ಈ ವಿಷಯವು ಸದ್ಯ ಸಾಮಾನ್ಯ ಉದ್ದೇಶಗಳ ಸಮಿತಿ (ಜಿಪಿಸಿ) ಮುಂದೆ ಪರಿಗಣನೆಯಲ್ಲಿದೆ ಮತ್ತು ಇದು ಗಂಭೀರವಾದ ಚರ್ಚೆಗೆ ಅರ್ಹವಾಗಿದೆ ಎಂದು ಹೇಳಿದರು.

ರಾಜಕೀಯದಲ್ಲಿ ತೊಡಗಿಸಿಕೊಂಡವರು ಸಾರ್ವಜನಿಕ ಜೀವನದಿಂದ ಎಂದಿಗೂ ನಿವೃತ್ತರಾಗುವುದಿಲ್ಲ ಅಥವಾ ರಾಷ್ಟ್ರ ಸೇವೆ ಮಾಡುವ ಉತ್ಸಾಹ ದಲ್ಲಿ ಅವರು ಎಂದಿಗೂ ಬತ್ತುವುದಿಲ್ಲ. ರಾಜಕೀಯ ಅಥವಾ ಸರ್ಕಾರಿ ಸಂಸ್ಥೆಗಳಲ್ಲಿ ಜನರು ಕಾಲಾ ನಂತರದಲ್ಲಿ ಬದಲಾಗಬಹುದಾದರೂ, ಸಂಸ್ಥೆಗಳು ಶಾಶ್ವತವಾಗಿರುತ್ತವೆ ಎಂದು ಖರ್ಗೆ ಹೇಳಿದರು.

ಸದನಕ್ಕೆ ಪುನರಾಯ್ಕೆಯಾದ ಸಹೋದ್ಯೋಗಿಗಳಿಗೆ ನಾವು ಆತ್ಮೀಯ ಸ್ವಾಗತ ಕೋರುತ್ತೇವೆ. ನಿವೃತ್ತರಾಗುತ್ತಿರುವ ಮತ್ತು ಈ ಸದನದಿಂದ ನಿರ್ಗಮಿಸುತ್ತಿರುವವರಿಗೆ, ಅವರು ಸಾರ್ವಜನಿಕ ಜೀವನಕ್ಕೆ ಅರ್ಥಪೂರ್ಣ ಕೊಡುಗೆ ನೀಡುವುದನ್ನು ಮುಂದುವರಿಸುತ್ತಾರೆ ಎಂಬ ವಿಶ್ವಾಸ ನನಗಿದೆ. ಇಲ್ಲಿ ಪಡೆದ ಅನುಭವವು ನಿಸ್ಸಂದೇಹವಾಗಿ ಭವಿಷ್ಯದಲ್ಲಿ ಇನ್ನಷ್ಟು ಮಹತ್ವದ ಪಾತ್ರಗಳನ್ನು ನಿರ್ವಹಿಸಲು ಅವರಿಗೆ ನೆರವಾಗುತ್ತದೆ ಎಂದು ವಿರೋಧ ಪಕ್ಷದ ನಾಯಕ ಹೇಳಿದರು.

ಈ ಮೇಲ್ಮನೆಯಲ್ಲಿ ನನ್ನ ಸಮಯವು ಆಹ್ಲಾದಕರ ಮತ್ತು ಸವಾಲಿನಿಂದ ತುಂಬಿದೆ. ಈ ಸದನವನ್ನು ಇನ್ನಷ್ಟು ಅರ್ಥಪೂರ್ಣವಾಗಿಸಲು ಮಹತ್ವದ ಹೊಸ ಉಪಕ್ರಮಗಳು ಅಗತ್ಯವಿದೆ ಎಂಬುದು ನನ್ನ ದೃಢ ನಂಬಿಕೆ. ಇದರಿಂದ ಮೇಲ್ಮನೆಯು ಸಮಾಜ ಮತ್ತು ರಾಷ್ಟ್ರಕ್ಕೆ ಹೆಚ್ಚು ಸಕಾರಾತ್ಮಕ ಸಂದೇಶವನ್ನು ರವಾನಿಸಬಹುದು ಮತ್ತು ಪರಿಣಾಮಕಾರಿ ಮಾರ್ಗದರ್ಶನವನ್ನು ನೀಡಬಹುದು ಎಂದು ಅವರು ಹೇಳಿದರು.

ಅದು ಬಲವಂತದ ಮದುವೆ; ಹಿಂಸೆ ಕಿರುಕುಳವಿತ್ತು!

ಬೆಂಗಳೂರು, ಮಾ.18– ರಾಜ್ಯಸಭೆಯಿಂದ ನಿವೃತ್ತರಾಗುವ ಸದಸ್ಯರಿಗೆ ವಿದಾಯ ಶುಭ ಹಾರೈಕೆ ಹೇಳುವ ಭರದಲ್ಲಿ ತಮ್ಮ ಬಗ್ಗೆ ಸದನದ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ 'ಪ್ರೀತಿ ಮಾಡಿದ್ದು ನಮ್ಮನ್ನು, ಆದರೆ ಮದುವೆಯಾಗಿದ್ದು ಮೋದಿಯನ್ನು' ಎಂಬ ಹೇಳಿಕೆಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

ಕಾಂಗ್ರೆಸ್ ಪಕ್ಷದ ಜೊತೆಗಿನದ್ದು ಪ್ರೀತಿಯಲ್ಲ, ಅದು ಒಂದು ಬಲವಂತದ ಮದುವೆಯಾಗಿತ್ತು ಎಂದು ಕಿಡಿಕಾರಿರುವ ಮಾಜಿ ಪ್ರಧಾನಿಗಳು; ಆ ಅಂದಿನ ಸಂಬಂಧದಲ್ಲಿನ ಕಿರುಕುಳ ಹಾಗೂ ಹಿಂಸೆ ಇದ್ದ ಕಾರಣದಿಂದಲೇ ನಾನು ಅವರಿಗೆ ವಿಚ್ಛೇದನ ನೀಡಿದೆ ಎಂದು ಹೇಳಿದ್ದಾರೆ.

ನನ್ನ ಹಳೆಯ ಗೆಳೆಯರಾದ ಮಲ್ಲಿ ಕಾರ್ಜುನ ಖರ್ಗೆ ಅವರು ಮದುವೆಯ ಭಾಷೆಯಲ್ಲೇ ಮಾತನಾಡಿದ್ದಾರೆ. ಅದಕ್ಕೆ ನಾನು ಅದೇ ಭಾಷೆಯಲ್ಲಿ ಉತ್ತರಿಸುವುದಾದರೆ ಕಾಂಗ್ರೆಸ್ ಜೊತೆಗಿನದ್ದು ಪ್ರೀತಿಯಲ್ಲ. ಅದು ಒಂದು ಬಲವಂತದ ಮದುವೆ ಆಗಿತ್ತು. ಆ ಸಂಬಂಧದಲ್ಲಿ ಕಿರುಕುಳ ಮತ್ತು ಹಿಂಸೆ ಇದ್ದ ಕಾರಣ ನಾನು ಅವರಿಗೆ ವಿಚ್ಛೇದನ ಕೊಡ ಬೇಕಾಯಿತು ಎಂದು ಹೇಳಿದ್ದಾರೆ.

2018ರಲ್ಲಿ ಅಂದಿನ ಕಾಂಗ್ರೆಸ್ ನಾಯಕರಾದ ಗುಲಾಂನಬಿ ಆಜಾದ್ ಅವರು ಬಂದು ನನ್ನ ಪುತ್ರ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡುವುದಾಗಿ ಹೇಳಿದ್ದರು. ಅದಕ್ಕೆ ನಾನು ಒಪ್ಪಿರಲಿಲ್ಲ. ಈಗ ನನ್ನ ಬಗ್ಗೆ ಲಘುವಾಗಿ ಮಾತನಾಡಿರುವ ಮಲ್ಲಿಕಾರ್ಜುನ ಖರ್ಗೆ ಅವರನ್ನೇ ಮುಖ್ಯಮಂತ್ರಿ ಮಾಡಿ ಎಂದು ನನ್ನ ಬಳಿಗೆ ಬಂದಿದ್ದ ಎಲ್ಲರ ಎದುರಿನಲ್ಲಿಯೇ ನೇರವಾಗಿ ಹೇಳಿದ್ದೆ. ಆಗ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಇದ್ದರು. ಆದರೆ ಕಾಂಗ್ರೆಸ್ ನಾಯಕರು ಹೆಚ್.ಡಿ. ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿ ಆಗಬೇಕೆಂದು ಪಟ್ಟು ಹಿಡಿದರು ಎಂಬ ಅಂಶವನ್ನು ದೇವೇಗೌಡರು ಬಹಿರಂಗಪಡಿಸಿದ್ದಾರೆ.



ನಾವು ಕಾಂಗ್ರೆಸ್ ನಾಯಕರ ಮಾತನ್ನು ನಂಬಿ ಅವರ ಜತೆ ಸರ್ಕಾರ ಮಾಡಿದೆವು. ಆಮೇಲೆ ಅವರು ನಮಗೆ ನಂಬಿಕೆ ದ್ರೋಹ ಮಾಡಿದರು. 2018ರಲ್ಲಿ ಸಾಕಷ್ಟು ನಾಟಕ ಮಾಡಿ ಮೈತ್ರಿ ಮಾಡಿಕೊಂಡ ಕಾಂಗ್ರೆಸ್ ಪಕ್ಷವು 2019ರಲ್ಲಿ ನಮ್ಮನ್ನು ನಿರ್ದಯವಾಗಿ ಕೈಬಿಟ್ಟಿತು. ಕಾಂಗ್ರೆಸ್ ಶಾಸಕರು ಬಿಜೆಪಿಗೆ ವಲಸೆ ಹೋದರು. ಅವರ ಪಕ್ಷದ ಶಾಸಕರು ಬಿಜೆಪಿಗೆ ಹೋಗಲು ಪ್ರಚೋದನೆ ನೀಡಿದವರು ಯಾರು ಎಂಬುದು ಜಗತ್ತಿಗೇ ತಿಳಿದಿದೆ. ಅಂದು ಶಾಸಕರನ್ನು ಎತ್ತಿಕಟ್ಟಿದವರ ವಿರುದ್ಧ ಕಾಂಗ್ರೆಸ್ ಕ್ರಮ ಕೈಗೊಂಡಿದಿದ್ದರೆ ಇವತ್ತು ನನ್ನ ಗೆಳೆಯ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿ ಇನ್ನೂ ಉತ್ತಮ ಸ್ಥಿತಿಯಲ್ಲಿರುತ್ತಿದ್ದರು ಎಂದು ಮಾಜಿ ಪ್ರಧಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾನು ಕಾಂಗ್ರೆಸ್ ಪಕ್ಷದ ಜೊತೆಗಿನ ಮೈತ್ರಿಯನ್ನು ಬಿಟ್ಟು ಹೊರ ಬರಲಿಲ್ಲ. ಅವರೇ ತಾವಾಗಿಯೇ ನಮ್ಮಿಂದ ದೂರ ಹೋದರು. ನಮಗೆ ಅನ್ಯ ದಾರಿಯಿಲ್ಲದೆ ಸುಸ್ಥಿರ ಮೈತ್ರಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ವಿಚ್ಛೇದನ ನೀಡಿ ಹೊರಗೆ ಬರಬೇಕಾಯಿತು ಎಂದು ಮಾಜಿ ಪ್ರಧಾನಿಗಳು ಪತ್ರದಲ್ಲಿ ಬರೆದಿದ್ದಾರೆ

ಬೆಂಗಳೂರಿನ ನನ್ನ ಮನೆಯಲ್ಲಿ ಯುಗಾದಿ ಹಬ್ಬದ ಆಚರಣೆಯಲ್ಲಿ ನಿರತವಾಗಿದ್ದ ಕಾರಣಕ್ಕೆ ನನಗೆ ಸಂಸತ್ತಿನಲ್ಲಿ ಖರ್ಗೆ ಅವರಿಗೆ ಉತ್ತರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಪತ್ರ ಬರೆಯ ಬೇಕಾಯಿತು ಎಂದು ಅವರು ಹೇಳಿದ್ದಾರೆ.

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಕೇಸ್ ಚಾರ್ಜ್‌ಶೀಟ್‌ನಲ್ಲಿ ಜೆಡಿಎಸ್‌ನವರ ಹೆಸರು!

ಹಾಸನ, ಮಾ.18– ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವೀಡಿಯೊ ವೈರಲ್ ಕೇಸ್‌ನಲ್ಲಿ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಎಸ್‌ಐಟಿ ಹಾಸನ ಸಿವಿಲ್ ಕೋರ್ಟ್‌ಗೆ ಬರೋಬ್ಬರಿ 13,712 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದೆ. ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. ಇವರ ಪೈಕಿ ರಾಜಕಾರಣಿಗಳ ಕುಟುಂಬದವರ ಹೆಸರು ಕೂಡ ಇದ್ದು, ಚರ್ಚೆಗೆ ಗ್ರಾಸವಾಗಿದೆ.

ಚಾರ್ಜ್‌ಶೀಟ್‌ನಲ್ಲಿ ಜೆಡಿಎಸ್ ಶಾಸಕನ ಚಿಕ್ಕಪ್ಪನ ಮಗನ ಹೆಸರು: 2024ರ ಚುನಾವಣೆ ಸಂದರ್ಭದ ವೇಳೆ ಹಾಸನದಲ್ಲಿ ಅಶ್ಲೀಲ ಪೆನ್‌ಡ್ರೈವ್ ಪ್ರಕರಣದಲ್ಲಿ ಎಸ್‌ಐಟಿ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಜೆಡಿಎಸ್ ಪಕ್ಷದವರೂ ಕೂಡ ಇದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ. ಪ್ರಕರಣದಲ್ಲಿ ಎ 30 ಆಗಿರೋ ರೇವಂತ್, ಹಾಸನ ಜೆಡಿಎಸ್ ಶಾಸಕ ಸ್ವರೂಪ್ ಚಿಕ್ಕಪ್ಪನ ಮಗ ಎಂದು ತಿಳಿದು ಬಂದಿದೆ ಇನ್ನು, ಭವಾನಿ ರೇವಣ್ಣ ಅವರ ಆಪ್ತ, ಪ್ರೈವೇಟ್ ಆಡಿಟರ್ ಆಗಿರುವ ಹರೀಶ್ ಹೆಸರು ಕೂಡ ಚಾರ್ಜ್‌ಶೀಟ್‌ನಲ್ಲಿದೆ. ಹರೀಶ್, ರೇವಣ್ಣ ಕುಟುಂಬದೊಂದಿಗೆ ಒಡನಾಟ ಹೊಂದಿದ್ದರು ಎಂದು ತಿಳಿದು ಬಂದಿದೆ.

ಚರ್ಚೆಗೆ ಗ್ರಾಸವಾದ ಇಬ್ಬರ ಹೆಸರು: 2024ರ ಲೋಕಸಭೆ ಚುನಾವಣೆ ವೇಳೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣನನ್ನು ಸೋಲಿಸಲು ಪೆನ್ ಡ್ರೈವ್ ಅಸ್ತ್ರ ಎಂಬ ಆರೋಪವಿತ್ತು. ಆ ವೇಳೆ ಜೆಡಿಎಸ್ ನಾಯಕರು, ಬಿಜೆಪಿ ಮತ್ತು ಕಾಂಗ್ರೆಸ್‌ನವರು ಪೆನ್‌ಡ್ರೈವ್ ಹಂಚಿ ಪ್ರಜ್ವಲ್ ಸೋಲಿಸಿದರು ಎಂದು ಆರೋಪ ಮಾಡಿದ್ದರು. ಇದೀಗ ಎಸ್‌ಐಟಿ ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯಲ್ಲಿ ಜೆಡಿಎಸ್ ಪಕ್ಷದವರ ಹೆಸರು ಉಲ್ಲೇಖವಾಗಿದ್ದು, ಜೆಡಿಎಸ್‌ನವರು ಪೆನ್ ಡ್ರೈವ್ ಯಾಕೆ ಹಂಚಿದರು ಎಂಬುದೇ ಕುತೂಹಲಕಾರಿಯಾಗಿದೆ.



ಪ್ರಜ್ವಲ್ ರೇವಣ್ಣ

ಚಾರ್ಜ್‌ಶೀಟ್‌ನಲ್ಲಿ ಸ್ಫೋಟಕ ಮಾಹಿತಿ ಬಹಿರಂಗ: ತನಿಖೆಯಲ್ಲಿ ಬೆಳಕಿಗೆ ಬಂದ ಮುಖ್ಯ ಸತ್ಯಗಳು ಬಹಳ ಆಘಾತಕಾರಿಯಾಗಿವೆ. ವೀಡಿಯೊಗಳನ್ನು ಉದ್ದೇಶಪೂರ್ವಕವಾಗಿ ವೈರಲ್ ಮಾಡಲು 70 ಪೆನ್‌ಡ್ರೈವ್‌ಗಳನ್ನು ಖರೀದಿಸಿ ಬಳಸಲಾಗಿದೆ ಎಂದು ತನಿಖೆ ಬಹಿರಂಗ ಪಡಿಸಿದೆ. ಒಟ್ಟು 277 ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಲಾಗಿದೆ. ತಾಂತ್ರಿಕ ವರದಿ, ಎಫ್‌ಎಸ್‌ಎಲ್ (ಫೊರೆನ್ಸಿಕ್ ಸೈನ್ಸ್ ಲ್ಯಾಬ್) ವರದಿ, ಡಿಜಿಟಲ್ ಪುರಾವೆಗಳ ಆಧಾರದ ಮೇಲೆ ಚಾರ್ಜ್‌ಶೀಟ್ ತಯಾರಿಸಲಾಗಿದೆ.

ಪ್ರಮುಖ ಆರೋಪಿಗಳ, ಪ್ರಭಾವಿಗಳ ಹೆಸರು ಉಲ್ಲೇಖ: ಚಾರ್ಜ್‌ಶೀಟ್‌ನಲ್ಲಿ ಎರಡು ರಾಜಕೀಯ ಪಕ್ಷಗಳ ಕಾರ್ಯಕರ್ತರ ವಿರುದ್ಧವೂ ಆರೋಪಗಳಿವೆ. ಮುಖ್ಯ ಆರೋಪಿಗಳಾದ ಎ1: ನವೀನ್, ಎ2: ಪ್ರಜ್ವಲ್ ರೇವಣ್ಣ ಅವರ ಕಾರು ಚಾಲಕ ಕಾರ್ತಿಕ್, ಎ3: ಚೇತನ್ ಸೇರಿದಂತೆ ಒಟ್ಟು 39 ಮಂದಿ ವಿರುದ್ಧ ಆರೋಪಗಳು ಸಾಬೀತಾಗಿವೆ. ಇವರಲ್ಲಿ ರಾಜಕೀಯ ಕಾರ್ಯಕರ್ತರು, ತಾಂತ್ರಿಕ ತಜ್ಞರು ಮತ್ತು ವೀಡಿಯೊಗಳನ್ನು ವೈರಲ್ ಮಾಡಿದವರು ಸೇರಿದ್ದಾರೆ.

ಆದರೆ, ಈ ವೈರಲ್ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಅವರ ಹೆಸರನ್ನು ಎಸ್‌ಐಟಿ ಕೈಬಿಟ್ಟಿದೆ. ಅಂದರೆ, ವೀಡಿಯೊಗಳನ್ನು ವೈರಲ್ ಮಾಡಿದ ಆರೋಪದಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ಆರೋಪಿಯಾಗಿ ಸೇರಿಸಲಾಗಿಲ್ಲ. ಇದು ತನಿಖೆಯಲ್ಲಿ ಬೆಳಕಿಗೆ ಬಂದ ಮುಖ್ಯ ವಿಚಾರವಾಗಿದೆ. ಆದರೂ ಪ್ರಜ್ವಲ್ ಅವರಿಗೆ ಇದು ಮತ್ತೊಂದು ಸಂಕಷ್ಟವೇ ಆಗಿದೆ. ಏಕೆಂದರೆ ಪ್ರಕರಣದಲ್ಲಿ ಇನ್ನೂ ಹಲವು ಆರೋಪಗಳು ಮುಂದುವರಿದಿವೆ.

ಕೃಷಿ ಇಲಾಖೆಯ 945 ಹುದ್ದೆ ಮೂರ್ನಾಲ್ಕು ತಿಂಗಳಲ್ಲಿ ಭರ್ತಿ

ಬೆಂಗಳೂರು, ಮಾ. 18(ಕೆಎಂಶಿ)–ಕೃಷಿ ಇಲಾಖೆಯಲ್ಲಿ ಖಾಲಿ ಇರುವ 945 ಹುದ್ದೆಗಳಿಗೆ ಮೂರ್ನಾಲ್ಕು ತಿಂಗಳಲ್ಲಿ ನೇಮಕಾತಿ ಪೂರ್ಣಗೊಳಿಸುವುದಾಗಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.



ಪ್ರಶ್ನೋತ್ತರ ವೇಳೆಯಲ್ಲಿ ಕಿರಣ ಕುಮಾರ ಕೊಡ್ಗಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 2018ರಲ್ಲಿ ಕೃಷಿ ಇಲಾಖೆಗೆ 370 ಮಂದಿ ನೇಮಕ ಮಾಡಿಕೊಳ್ಳಲಾಗಿತ್ತು ಅನಂತರ 2023ರವರೆಗೆ ಯಾವುದೇ ನೇಮಕಾತಿಗಳಾಗಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ 945 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಒಂದು ವರ್ಷದ ಹಿಂದೆಯೇ ಅನುಮತಿ ಪಡೆಯಲಾಗಿದೆ ಆದರೆ ಒಳ ಮೀಸಲಾತಿ ಗೊಂದಲದಿಂದಾಗಿ ನೇಮಕಾತಿ ಪೂರ್ಣಗೊಂಡಿಲ್ಲ ಎಂದರು.

ಕೃಷಿ ಅಧಿಕಾರಿ ಹುದ್ದೆಗಳಿಗೆ 128, ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗೆ 817, ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ 61, ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ 17 ಮಂದಿ ನೇಮಕಾತಿಗೆ ಅನುಮತಿ ದೊರೆತಿದೆ. ಮೂರ್ನಾಲ್ಕು ತಿಂಗಳಲ್ಲೇ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು.

ಸಿಬ್ಬಂದಿ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಸಹಾಯಕ ತಾಂತ್ರಿಕ ಸೇವೆ ಹಾಗೂ ಇತರ ಯೋಜನೆಯಡಿ ಸುಮಾರು 2 ಸಾವಿರ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ. ಜೊತೆಗೆ ಡಿ ಗ್ರೂಪ್ ಅಡಿ 620 ಮಂದಿ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾಲಕಾಲಕ್ಕೆ ನೇಮಕಾತಿಗಳನ್ನು ಕೈಗೊಂಡಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. 2018 ರಿಂದ 23ರ ನಡುವೆ ಬಿಜೆಪಿ–ಜೆಡಿಎಸ್ ಸರ್ಕಾರ ಆಡಳಿತದಲ್ಲಿತ್ತು, ನೇಮಕಾತಿಗಳನ್ನು ಕಡೆಗಣಿಸಲಾಗಿತ್ತು ಎಂದರು.

ಮೈಸೂರಲ್ಲಿ ಭಾರೀ ಮಳೆ; ಹಲವೆಡೆ ನೆಲಕ್ಕುರುಳಿದ ಮರದ ರೆಂಬೆ–ಕೊಂಬೆ



ಮೈಸೂರು,ಮಾ.18(ಪಿಎಂ)– ಸಾಂಸ್ಕೃತ ನಗರಿ ಮೈಸೂರಿನಲ್ಲಿ ಬುಧವಾರ ಸಂಜೆ ಜೋರು ಮಳೆಯಾಗಿದ್ದು, ರಸ್ತೆ–ವೃತ್ತಗಳಲ್ಲಿ ಮಳೆ ನೀರು ಝರಿಯಂತೆ ಹರಿಯುವ ದೃಶ್ಯ ಸಾಮಾನ್ಯವಾಗಿತ್ತು. ಈ ನಡುವೆ ನಗರ ವಿವಿಧ ಭಾಗಗಳಲ್ಲಿ ಮಳೆ–ಗಾಳಿಗೆ ಮರಗಳು ಬುಡಸಹಿತ ನೆಲಕ್ಕುರಳಿದರೆ, ಬಹುತೇಕ ಕಡೆಗಳಲ್ಲಿ ರಂಬೆ–ಕೊಂಬೆಗಳು ಬಿದ್ದಿದ್ದವು.

ನಗರದಲ್ಲಿ ಸಂಜೆ 4 ಗಂಟೆ ವೇಳೆಗೆ ಮೋಡ ಕವಿದ ವಾತಾವರಣದಿಂದಾಗಿ ಸಂಜೆಯ ಚಿತ್ರಣದ ಸೃಷ್ಟಿಯಾಗಿತ್ತು. ಹೀಗಾಗಿ ವಾಹನಗಳು ಅದಾಗಲೇ ಹೆಡ್ ಲೈಟ್‌ನೊಂದಿಗೆ ಸಂಚಾರ ನಡೆಸುತ್ತಿದ್ದವು. ಇದಾದ ಕೆಲವೇ ಹೊತ್ತಿನಲ್ಲಿ ಗುಡುಗು ಹಾಗೂ ಗಾಳಿ ಆರಂಭವಾಯಿತು. ಇದರ ಹಿಂದೆಯೇ ಜೋರು ಮಳೆ ಸುರಿಯಲಾರಂಭಿಸಿತು. ತಾಸಿಗೂ ಹೆಚ್ಚು ಕಾಲ ಸುರಿದ ಮಳೆಯು ಬಿರು ಬಿಸಿಲಿನಿಂದ ಬಳಲಿದ್ದ ಜನತೆಗೆ ತುಸು ತಂಪು ನೀಡಿತು.

ವೃತ್ತ–ರಸ್ತೆಗಳಲ್ಲಿ ಝರಿಯಂತೆ ಹರಿದ ಮಳೆ ನೀರು

ಕೆಆರ್ ವೃತ್ತ, ಚಾಮರಾಜ ಒಡೆಯರ್ ವೃತ್ತ, ಜಯ ಚಾಮರಾಜ ಒಡೆಯರ್ ವೃತ್ತ, ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ನಗರದ ವೃತ್ತ ಮತ್ತು ರಸ್ತೆಗಳಲ್ಲಿ ಮಳೆ ನೀರು ಝರಿಯಂತೆ ಹರಿಯಿತು. ಅಲ್ಲದೆ, ಗಾಳಿ ರಭಸಕ್ಕೆ ಹಲವೆಡೆ ಮರಗಳು ಬುಡಸಮೇತ ನೆಲಕ್ಕುರಳಿದ್ದವು. ಪರಿಣಾಮ ಸಂಚಾರಕ್ಕೂ ಅಡಚಣೆ ಉಂಟಾಗಿತ್ತು. ಸಾಕಷ್ಟು ಕಡೆಗಳಲ್ಲಿ ರೆಂಬೆ ಕೊಂಬೆಗಳು ಬಿದ್ದಿದ್ದವು. ಜೊತೆಗೆ ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದವು. ಇದರಿಂದ ಕೆಲವೆಡೆ ಮನೆಗಳಿಗೂ ನೀರು ನುಗ್ಗುವಂತಾಗಿತ್ತು.

ಕುವೆಂಪುನಗರ ಡಿಪೋ ಸಮೀಪ ರಸ್ತೆಬದಿಯಲ್ಲಿ ಒಣ ಮರವೊಂದು ಬುಡಸಮೇತ ನೆಲಕ್ಕುರುಳಿದೆ. ಅಲ್ಲದೆ, ಬೋಗಾದಿ ರಿಂಗ್ ರಸ್ತೆ ಸಮೀಪದ ಆನಂದನಗರ, ದಟ್ಟಗಳ್ಳಿ ಮೂರನೇ ಹಂತದ 2 ಮೇನ್, ರಾಮಕೃಷ್ಣನಗರ ಐ ಬ್ಲಾಕ್, ಸರಸ್ವತಿ ಪುರಂನ 8ನೇ ಮೇನ್‌ನ 6ನೇ ಕ್ರಾಸ್, ಬೋಗಾದಿಯ ನಿರ್ಮಿತಿ ಕೇಂದ್ರ ಬಳಿ ಹಾಗೂ ವಿವೇಕಾನಂದ ವೃತ್ತ ಸಮೀಪ ಸೇರಿದಂತೆ ವಿವಿಧೆಡೆ ಮರಗಳು ನೆಲಕ್ಕುರುಳಿರುವುದು, ರೆಂಬೆ ಕೊಂಬೆ ಬಿದ್ದಿರುವ ಘಟನೆ ನಡೆದಿದೆ. ಪಾಲಿಕೆಯ ಅಭಯ ತಂಡಗಳು ನೆಲಕ್ಕುರಳಿದ್ದ ಮರಗಳ ತೆರವು ಕಾರ್ಯಾಚರಣೆ ನಡೆಸಿದವು. ಸದ್ಯ ಜನ ಜೀವನಕ್ಕೆ ಯಾವುದೇ ಅಪಾಯವಾದ ಬಗ್ಗೆ ವರದಿಯಾಗಿಲ್ಲ.



ಕುವೆಂಪುನಗರ ಡಿಪೋ ಬಳಿ ರಸ್ತೆಬದಿಯಲ್ಲಿ ಒಣ ಮರ ಉರುಳಿ ಬಿದ್ದಿರುವುದು.



ಕುವೆಂಪುನಗರದ ಮತ್ತೊಂದೆಡೆ ಮರ ಉರುಳಿರುವುದು.

ಮೂರನೇ ಪುಟದಿಂದ

ಆಲಿಕಲ್ಲು ಮಳೆ; ದಟ್ಟ ಹಿಮಪಾತ ದೃಶ್ಯ

ಹಾರಿ ಹೋಗಿದ್ದರೆ, ಹೈರಿಗೆಯಲ್ಲಿ ಬ್ಯಾರನ್ ಕುಸಿದು ಬಿದ್ದಿದೆ. ಕುರುಬರಹೊಸಹಳ್ಳಿಯಲ್ಲಿ ಗೋವಿಂದ ಅವರಿಗೆ ಸೇರಿದ ಮನೆ ಮೇಲೆ ತೆಂಗಿನ ಮರ ಬಿದ್ದು ಹಾನಿಗೊಳಗಾಗಿವೆ.

ತಂಬಾಕು ಸಸಿ ಮಡಿಗಳು, ಕಲ್ಲಂಗಡಿ ಬೆಳೆ ನಾಶ: ಹನಗೋಡು ಸೇರಿದಂತೆ ಕಾಮಗೌಡನಹಳ್ಳಿ, ಗೌಡಿಕೆರೆ, ಹೆಮ್ಮಿಗೆ, ಅಬ್ಬೂರು, ದಾಸನಪುರ, ಹೆಗ್ಗಂದೂರು, ಹರಳಹಳ್ಳಿ, ದೊಡ್ಡ ಹೆಜ್ಜೂರು, ಚಿಕ್ಕ ಹೆಜ್ಜೂರು ಮತ್ತಿತರ ಗ್ರಾಮಗಳಲ್ಲಿ ಸುರಿದ ಆಲಿಕಲ್ಲು ಮಳೆಯಿಂದಾಗಿ ತಂಬಾಕು ಸಸಿ ಮಡಿಗಳು, ಹೆಮ್ಮಿಗೆಯಲ್ಲಿ ರಾಮೇಗೌಡ ಮತ್ತಿತರರ ಕಲ್ಲಂಗಡಿ ಬೆಳೆ ನಾಶವಾಗಿದೆ. ಇನ್ನು ಬಾಳೆ ಬೆಳೆಗಳು ಬಿರುಗಾಳಿಗೆ ಸಿಲುಕಿ ನೆಲಕಚ್ಚಿದೆ.

ಮರದ ಕೊಂಬೆ ಬಿದ್ದು ವ್ಯಕ್ತಿಗೆ ಗಾಯ: ತಟ್ಟೆಕೆರೆ ನಿವಾಸಿ ದರ್ಶನ್, ಮಳೆಯಲ್ಲೇ ತಮ್ಮ ಜಮೀನಿನಿಂದ ಮನೆಗೆ ತೆರಳುತ್ತಿದ್ದ ವೇಳೆ ಕೊಂಬೆ ಬಿದ್ದು ಭುಜಕ್ಕೆ ಪೆಟ್ಟಾಗಿದ್ದು ಅವರನ್ನು ಹುಣಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಆದರೆ ಇವರ ಜೊತೆಗಿದ್ದ ಶರತ್ ಸಣ್ಣ–ಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ.

ಕಂದಾಯ ಅಧಿಕಾರಿಗಳ ಭೇಟಿ

ಹಾನಿಗೀಡಾದ ಪ್ರದೇಶಗಳಿಗೆ ಹನಗೋಡು ಉಪ ತಹಸೀಲ್ದಾರ್ ಶರತ್ ಕುಮಾರ್, ರಾಜಸ್ವ ನಿರೀಕ್ಷಕ ನಂದೀಶ್, ಗ್ರಾಮ ಆಡಳಿತಾಧಿಕಾರಿಗಳಾದ ಕುಮಾರ್, ಕರಿಬಸಪ್ಪ, ರಕ್ಷಿತ, ಶಿವಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸರ್ಕಾರಕ್ಕೆ ಹಾನಿಯ ವರದಿ ಸಲ್ಲಿಸಿದ್ದಾರೆ.

ನಾಗರಹೊಳೆಯಲ್ಲೂ ಮಳೆ: ನಾಗರಹೊಳೆ ಉದ್ಯಾನದ ವೀರನಹೊಸಹಳ್ಳಿ, ನಾಗರಹೊಳೆ, ಆನೆಚೌಕೂರು, ಕಲ್ಲಹಳ್ಳ ವಲಯದಲ್ಲಿ ಭಾರೀ ಬಿರುಗಾಳಿ ಸಹಿತ ಉತ್ತಮ ಮಳೆಯಾಗಿದೆ. ಹುಣಸೂರು ನಗರದಲ್ಲೂ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆಯಾಗಿದೆ.

ಜಾತಿ, ಆದಾಯ ಪ್ರಮಾಣಪತ್ರ

ಆಸ್ತಿ ನೋಂದಣಿ ನಂತರ ಖಾತೆ ಬದಲಾವಣೆ ವಿಳಂಬವಾಗುತ್ತಿದೆ ಎಂಬ ದೂರು ಇದೆ. ಕಳೆದ ಒಂದು ವರ್ಷದಿಂದ ಎರಡು ಹಂತದಲ್ಲಿ ಸುಧಾರಣೆ ತರಲಾಗಿದೆ. ಮೊದಲ ಹಂತದಲ್ಲಿ ಕಳೆದ ವರ್ಷ ಒಟ್ಟು ಖಾತೆ ಬದಲಾವಣೆ ಪೈಕಿ ಶೇ.66ರಷ್ಟು ಖಾತೆಗಳನ್ನು ಆಟೋ ಮ್ಯುಟೇಶನ್ ಮೂಲಕ ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆ ಜಾರಿ ಮಾಡಿದ್ದೇವೆ. ಕಳೆದ ತಿಂಗಳು ಮತ್ತೆ ಒಂದು ಹೆಜ್ಜೆ ಮುಂದಿಡಲಾಗಿದ್ದು, ಶೇ.98 ರಷ್ಟು ಖಾತೆಗಳು ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆಯಾಗಲು ಆಟೋ ಮ್ಯುಟೇಶನ್ ಜಾರಿಗೆ ತಂದಿದ್ದೇವೆ.

ಪಸ್ತುತ ಖಾತೆ ಬದಲಾವಣೆ ಪೈಕಿ ಶೇ.98 ರಷ್ಟು ಸ್ವಯಂ ಚಾಲಿತವಾಗಿಯೇ ಖಾತೆ ಬದಲಾವಣೆ ಆಗುತ್ತಿದೆ. ಕೆಲವು ಅರ್ಜಿ ನೀಡಿದ ಮೂರು ಗಂಟೆ, ಕೆಲವು 8ನೇ ದಿನ, ಇನ್ನೂ ಕೆಲವು 16ನೇ ದಿನ ಕಾನೂನು ಪ್ರಕಾರವಾಗಿ ಖಾತೆ ಬದಲಾವಣೆ ಆಗುತ್ತವೆ. ಈ ಬಗ್ಗೆ ತಕರಾರು ದಾಖಲಾದರೆ ಮಾತ್ರ ಖಾತೆ ಬದಲಾವಣೆ ವಿಳಂಬವಾಗುತ್ತದೆ.

ಸರ್ಕಾರದ ಹಿತಾಸಕ್ತಿ ಇದ್ದರೆ ಮಾತ್ರ ಕಂದಾಯ ನಿರೀಕ್ಷಕರು (ಆರ್‌ಐ) ತಕರಾರು ಸಲ್ಲಿಸಬಹುದು. ಖಾಸಗಿ ಸ್ವತ್ತಿನ ತಕರಾರು ಅವರ ಬಂಧುಗಳೇ ಹಾಕಬೇಕೇ ವಿನಃ ಆರ್‌ಐ ಹಾಕುವಂತಿಲ್ಲ, ಈ ಹಿಂದೆ ಇದ್ದ ಈ ವ್ಯವಸ್ಥೆಯನ್ನು ಬಂದ್ ಮಾಡಿದ್ದೇವೆ. ಆರ್‌ಐ ತಮ್ಮ ಕಡೆಯವರಿಂದ ತಕರಾರು ಹಾಕುತ್ತಿದ್ದಾರೆ ಎಂಬ ಬಗ್ಗೆಯೂ ಆರೋಪ ಇತ್ತು ಹೀಗಾಗಿ ತಕರಾರು ಹಾಕುವವರಿಗೆ ಆಧಾರ್ ಇ–ಕೆವೈಸಿ ಕಡ್ಡಾಯ ಮಾಡಲಾಗಿದೆ. ಒಂದೇ ವ್ಯಕ್ತಿ ಮೂರು–ನಾಲ್ಕು ತಕರಾರು ಅರ್ಜಿ ಹಾಕಿದರೆ ಆತನನ್ನು ಪ್ರಶ್ನೆ ಮಾಡಬಹುದಾಗಿದೆ.

ಇಂತಹ ಪ್ರಗತಿಪರ ಬದಲಾವಣೆಗಳ ಮೂಲಕ ಇಲಾಖೆಯಲ್ಲಿ ಸುಧಾರಣೆ ತಂದು ಮೂರ್ಜಿ ತಕರಾರುಗಳಿಗೆ ಸಂಪೂರ್ಣ ಕಡಿವಾಣ ಹಾಕಿದ ಪರಿಣಾಮ ತಳಮಟ್ಟದಲ್ಲಿ ಸುಧಾರಣೆ ಕಾಣಲಾಗುತ್ತಿದೆ ಎಂದರು.

ನೀರು ಸರಬರಾಜು, ಒಳಚರಂಡಿ ಮಂಡಳಿ ಸ್ಥಾಪಿಸಿ

ಅನುದಾನ ಬಿಡುಗಡೆಯಾಗಿಲ್ಲ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 3.50 ಲಕ್ಷ ಮತದಾರರಿದ್ದಾರೆ. ನಗರ ಪಾಲಿಕೆಯ 5 ವಾರ್ಡ್, 1 ನಗರಸಭೆ 4 ಪಟ್ಟಣ ಪಂಚಾಯಿತಿ ಹಾಗೂ 18 ಗ್ರಾಮ ಪಂಚಾಯಿತಿಗಳಿರುವ ದೊಡ್ಡ ಕ್ಷೇತ್ರವಾಗಿದೆ. ಈ ವರ್ಷ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 25 ಕೋಟಿ ನೀಡಲಾಗಿದೆ. ಆದರೆ ಇದರಲ್ಲಿ ಇನ್ನು ಶೇಕಡ 33 ರಷ್ಟು ಅನುದಾನ ಬಿಡುಗಡೆಯಾಗಿಲ್ಲ. ಇದರಿಂದ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ ಎಂದು ಜಿ.ಟಿ.ದೇವೇಗೌಡರು ಪರಿಸ್ಥಿತಿಯನ್ನು ಮನದಟ್ಟು ಮಾಡಿದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಿರುವ ಕಾಮಗಾರಿಗಳ 37 ಕೋಟಿ ಬಿಲ್ ಬಾಕಿ ಇದ್ದು, ಗುತ್ತಿಗೆದಾರರು ಹಣ ಬಿಡುಗಡೆಗೆ ಹೋರಾಟ ಮಾಡುತ್ತಿದ್ದಾರೆ. ಈ ಸಮಸ್ಯೆಯನ್ನು ಕೂಡಲೇ ಪರಿಹಾರ ಮಾಡಬೇಕು ಎಂದು ಮನವಿ ಮಾಡಿದರು.

ಫ್ಲೈಓವರ್ ವಿಸ್ತರಿಸಿ: ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣದಿಂದ ವಾಹನ ಸಂಚಾರಕ್ಕೆ ಬಹಳ ಅನುಕೂಲವಾಗಿದೆ. ಮೈಸೂರಿನಿಂದ ಬೆಂಗಳೂರಿನ ಕೆಂಗೇರಿವರೆಗೆ ಒಂದೂವರೆ ಗಂಟೆಯೊಳಗೆ ಬರಬಹುದು. ಆದರೆ ಕೆಂಗೇರಿಯಿಂದ ಬೆಂಗಳೂರು ನಗರ ತಲುಪಲು ಒಂದೂವರೆ ಗಂಟೆ ಬೇಕು. ಈ ಹಿನ್ನೆಲೆಯಲ್ಲಿ ಗೋರಿ ಪಾಳ್ಯದ ಬಳಿ ಇರುವ ಬಿಜಿಎಸ್ ಫ್ಲೈಓವರ್ ಅನ್ನು ಕೆಂಗೇರಿವರೆಗೆ ವಿಸ್ತರಣೆ ಮಾಡಬೇಕು ಎಂದು ಕೋರಿದರು.

ರಾಜ್ಯದ ಶೇಕಡ 65 ರಷ್ಟು ಜಿಡಿಪಿ ಬೆಂಗಳೂರು ನಗರ ಒಂದರಿಂದಲೇ ಬರುತ್ತಿದೆ,. ಇದರಲ್ಲಿ ಶೇಕಡ 36 ರಷ್ಟನ್ನು ಬೆಂಗಳೂರಿನ ರಸ್ತೆ ಹಾಗೂ ಟ್ರಾಫಿಕ್ ಜಾಮ್ ಸಮಸ್ಯೆಗೆ ಬಳಕೆ ಮಾಡಬೇಕು. ಈ ಮೂಲಕ ಖಾಸಗಿ ಕಂಪನಿಗಳು ಬೇರೆ ರಾಜ್ಯದತ್ತ ಮುಖ ಮಾಡದಂತೆ ಗಮನ ನೀಡಬೇಕೆಂದು ಸಲಹೆ ನೀಡಿದರು.

ಪಠ್ಯದಲ್ಲಿ ಸಹಕಾರ ವಿಷಯ ಸೇರಿಸಿ: ನೂರಾರು ವರ್ಷಗಳ ಇತಿಹಾಸವುಳ್ಳ ಸಹಕಾರ ಕ್ಷೇತ್ರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಶಾಲಾ ಪಠ್ಯದಲ್ಲಿ ಸಹಕಾರ ವಿಷಯ ಸೇರ್ಪಡೆ ಮಾಡಬೇಕು. ಸಹಕಾರ ಕ್ಷೇತ್ರದಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇದ್ದು, ಸಹಕಾರ ವಿಷಯದಲ್ಲಿ ಪದವಿ ಹಾಗೂ ಡಿಪ್ಲೋಮಾ ಪಡೆದವರನ್ನು ನೇಮಕ ಮಾಡಬೇಕು ಎಂದು ಜಿ.ಟಿ.ದೇವೇಗೌಡರು ಆಗ್ರಹಿಸಿದರು.

ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕ ಬಾಂಬ್ ಸುರಿಮಳೆ

ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಯುದ್ಧಕ್ಕೆ ಪ್ರತೀಕಾರವಾಗಿ, ವಿಶ್ವದ ಐದನೇ ಒಂದು ಭಾಗದಷ್ಟು ತೈಲ ಪೂರೈಕೆಯಾಗುವ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿತ್ತು. ಇದರಿಂದ ಹಲವು ರಾಷ್ಟ್ರಗಳಲ್ಲಿ ತೈಲ ಬಿಕ್ಕಟ್ಟು ಶುರುವಾಯಿತು. ಪ್ರಮುಖ ಮಾರ್ಗವನ್ನು ಓಪನ್ ಮಾಡುವುದಕ್ಕಾಗಿ ಈ ಬಾಂಬ್ ದಾಳಿ ನಡೆದಿದೆ. ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತಗೊಳಿಸಲು, ಈ ಪ್ರದೇಶದ ತೈಲ ರಫ್ತಿನ ಮೇಲಿರುವ ದಿಗ್ಬಂಧನ ಸಡಿಲಿಸಲು ಸಹಾಯ ಮಾಡುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕರೆ ನೀಡಿದ್ದರು. ಆದರೆ, ನ್ಯಾಟೋ ಸೇರಿದಂತೆ ಅಮೆರಿಕದ ಮಿತ್ರರಾಷ್ಟ್ರಗಳು ಈ ಕರೆಯನ್ನು ತಿರಸ್ಕರಿಸಿದ್ದವು. ಜಗತ್ತು ನಮ್ಮ ಪ್ರಯತ್ನಗಳನ್ನು ಮೆಚ್ಚದಿದ್ದರೂ ಸಹ, ನಾವು ವಿಶ್ವದ ಒಳಿತಿಗಾಗಿ ಯುದ್ಧವನ್ನು ನಡೆಸುತ್ತಿದ್ದೇನೆ ಎಂದು ಟ್ರಂಪ್ ಒತ್ತಿ ಹೇಳಿದರು. ಆ ಬೆನ್ನಲ್ಲೇ ಅಮೆರಿಕ ದಾಳಿ ಮಾಡಿದೆ.

ಹಿಜ್ಬೊಲ್ಲಾ ಮೇಲೆ ಇಸ್ರೇಲ್ ದಾಳಿ: ದಕ್ಷಿಣ ಲೆಬನಾನ್‌ನಲ್ಲಿ ರಕ್ಷಣಾ ಕಾರ್ಯಾಚರಣೆಯ ಸಮಯದಲ್ಲಿ ಹಿಜ್ಬೊಲ್ಲಾ ಉಗ್ರ ಸಂಘಟನೆ ಬಳಸುತ್ತಿದ್ದ 80ಕ್ಕೂ ಹೆಚ್ಚು ಸ್ಥಳಗಳನ್ನು ನಾಶಪಡಿಸಲಾಗಿದೆ ಎಂದು ಇಸ್ರೇಲಿ ರಕ್ಷಣಾ ಪಡೆಗಳು ಬುಧವಾರ ತಿಳಿಸಿವೆ. Xನಲ್ಲಿ ಪೋಸ್ಟ್ ಮಾಡಿದ ಐಡಿಎಫ್, ಮುಂಚೂಣಿ ರಕ್ಷಣಾ ಕಾರ್ಯಾಚರಣೆಯ ಭಾಗವಾಗಿ, 146ನೇ ವಿಭಾಗದ ನೇತೃತ್ವದಲ್ಲಿ 300ನೇ ಬ್ರಿಗೇಡ್ ಪಡೆಗಳು ಹಿಜ್ಬೊಲ್ಲಾದ ಮೂಲಸೌಕರ್ಯಗಳನ್ನು ನಾಶಮಾಡಲು ದಕ್ಷಿಣ ಲೆಬನಾನ್‌ನಲ್ಲಿ ಗುರಿಯಿಟ್ಟು ದಾಳಿ ನಡೆಸಿವೆ ಎಂದು ಹೇಳಿದೆ.

ಕಳೆದ ವಾರದಲ್ಲಿ, ಪಡೆಗಳು 80ಕ್ಕೂ ಹೆಚ್ಚು ಭಯೋತ್ಪಾದಕ ಮೂಲಸೌಕರ್ಯಗಳನ್ನು ನಾಶಪಡಿಸಿವೆ ಮತ್ತು ಆ ಪ್ರದೇಶದಲ್ಲಿ ಅಡಗಿಕೊಂಡಿದ್ದ ಇಬ್ಬರು ಕಾರ್ಯಕರ್ತರನ್ನು ನಿರ್ಮೂಲನೆ ಮಾಡಿವೆ ಎಂದು ಅದು ಮತ್ತಷ್ಟು ಮಾಹಿತಿ ಹಂಚಿಕೊಂಡಿದೆ.

ಇಸ್ರೇಲ್‌ನಿಂದ ಇರಾನ್ ಗುಪ್ತಚರ ಇಲಾಖೆ ಮುಖ್ಯಸ್ಥರ ಹತ್ಯೆ?: ಇಸ್ರೇಲಿ ರಕ್ಷಣಾ ಪಡೆಗಳು ಇರಾನಿನ ಗುಪ್ತಚರ ಮುಖ್ಯಸ್ಥ ಇಸ್ಮಾಯಿಲ್ ಖತೈಬ್ ಅವರನ್ನು ಹತ್ಯೆ ಮಾಡಲು ಪ್ರಯತ್ನಿಸಿವೆ ಎಂದು ಮೂಲಗಳನ್ನು ಉಲ್ಲೇಖಿಸಿ ಜೆರುಸಲೆಮ್ ಪೋಸ್ಟ್ ವರದಿ ಮಾಡಿದೆ. ಜೆರುಸಲೆಮ್ ಪೋಸ್ಟ್ ಪ್ರಕಾರ, ಖತೈಬ್ ಅವರ ಸ್ಥಿತಿಯ ಬಗ್ಗೆ ಯಾವುದೇ ಮಾಹಿತಿ ಈವರೆಗೂ ಲಭ್ಯವಿಲ್ಲ.

ಮಂಗಳವಾರ ರಾತ್ರಿ ಹತ್ಯೆಗೆ ಪ್ರಯತ್ನಿಸಲಾಗಿದೆ ಎಂದು ಮೂಲವೊಂದು ದಿ ಜೆರುಸಲೆಮ್ ಪೋಸ್ಟ್‌ಗೆ ದೃಢಪಡಿಸಿದೆ ಮತ್ತು ದಾಳಿ ಯಶಸ್ವಿಯಾಗಿದ್ದರೂ, ಯಾವುದೇ ನಿರ್ಣಾಯಕ ಫಲಿತಾಂಶಗಳು ದೃಢೀಕರಿಸಲ್ಪಟ್ಟಿಲ್ಲ ಎಂದು ಉಲ್ಲೇಖಿಸಿದೆ. ಸೋಮವಾರ ರಾತ್ರಿ ಇರಾನ್‌ನ ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಅಲಿ ಲಾರಿಜಾನಿ ಹತ್ಯೆಯಾದ ಸ್ವಲ್ಪ ಸಮಯದ ನಂತರ ಈ ಪ್ರಯತ್ನ ನಡೆದಿದೆ.

ಬೇಹುಗಾರಿಕೆ; ವ್ಯಕ್ತಿಗೆ ಗಲ್ಲಿಗೆ: ಇಸ್ರೇಲ್‌ನ ಮೊಸಾದ್ ಗುಪ್ತಚರ ಸಂಸ್ಥೆಗಾಗಿ ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ಇರಾನ್‌ನಲ್ಲಿ ವ್ಯಕ್ತಿಯೊಬ್ಬನನ್ನು ಗಲ್ಲಿಗೇರಿಸಲಾಗಿದೆ ಎಂದು ಇರಾನ್‌ನ ನ್ಯಾಯಾಂಗ ಬುಧವಾರ ತಿಳಿಸಿದೆ. ನ್ಯಾಯಾಂಗದ ಮಿಜಾನ್ ಸುದ್ದಿಸಂಸ್ಥೆ ಆ ವ್ಯಕ್ತಿಯನ್ನು ಕೌರೋಶ್ ಕೀವಾನಿ ಎಂದು ಗುರುತಿಸಿದೆ.

ಮರ್ಯಾದಾ ಹತ್ಯೆ ನಿಷೇಧ ಮಸೂದೆ ಮಂಡನೆ

ಜಾರಿಗೆ ತರುವುದು ಸರ್ಕಾರದ ಉದ್ದೇಶವಾಗಿದೆ ಈಗಾಗಲೇ ಜಾರಿಯಲ್ಲಿರುವ ಕಾನೂನುಗಳಲ್ಲಿ ಅಪಾಯದಲ್ಲಿರುವ ಜೋಡಿಗಳಿಗೆ ಮುನ್ನೆಚ್ಚರಿಕಾ ರಕ್ಷಣಾ ವ್ಯವಸ್ಥೆಗಳು, ಕಡ್ಡಾಯ ಪೊಲೀಸ್ ಹಸ್ತಕ್ಷೇಪ, ವೇಗದ ವಿಚಾರಣೆ ಹಾಗೂ ನಾಗರಿಕ ಹಕ್ಕುಗಳ ಪುನಸ್ಥಾಪನೆಗೆ ಸಂಬಂಧಿಸಿದ ಸಮರ್ಥ ವ್ಯವಸ್ಥೆಗಳು ಇಲ್ಲವಾಗಿದೆ. ವಿಶೇಷವಾದ ಕಾನೂನು ಇಲ್ಲದ ಕಾರಣ ಅಪರಾಧಿಗಳು ಕಠಿಣ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದು, ಪೀಡಿತರು ಅಥವಾ ಬದುಕುಳಿದವರು ಸಮರ್ಪಕ ಪರಿಹಾರ ಮತ್ತು ಪುನರ್ವಸತಿಯನ್ನು ಪಡೆಯುವುದರಲ್ಲಿ ವಿಫಲರಾಗುತ್ತಿದ್ದಾರೆ. ಈ ಉದ್ದೇಶದಿಂದ ಮಸೂದೆಯ ಅನಿವಾರ್ಯತೆ ಇದೆ ಎಂದು ಪ್ರತಿಪಾದಿಸಿದರು.

ಮದುವೆಯ ಸ್ವಾತಂತ್ರ್ಯ: ಮಸೂದೆಯಲ್ಲಿ ಪ್ರತಿ ವ್ಯಕ್ತಿಗೆ ತನ್ನ ಆಯ್ಕೆಯ ವ್ಯಕ್ತಿಯ ಜೊತೆ ವಿವಾಹವಾಗುವ ಸ್ವಾತಂತ್ರ್ಯವಿದೆ. ಕುಟುಂಬದ ಸದಸ್ಯರು, ಪೋಷಕರಿಂದ ಯಾವುದೇ ಅಡೆತಡೆ ಇಲ್ಲದೆ ವಿವಾಹವಾಗುವ ಹಕ್ಕಿದೆ. ವಯಸ್ಕ ಗಂಡು ಹಾಗೂ ಹೆಣ್ಣು ಒಪ್ಪಿ ಮದುವೆಯಾಗುವುದಾದರೆ ಅದಕ್ಕೆ ಯಾವುದೇ ವ್ಯಕ್ತಿಯ, ಪೋಷಕರ ಅಥವಾ ಕುಟುಂಬ ಸದಸ್ಯರ ಅನುಮತಿ ಬೇಕಾಗಿಲ್ಲ. ಅಷ್ಟೇ ಅಲ್ಲದೆ ಇಂತಹ ವಿವಾಹಗಳಿಗೆ ಅಡ್ಡಿಪಡಿಸುವುದು ಶಿಕ್ಷಾರ್ಹ ಅಪರಾಧವಾಗಲಿದೆ

ಮರ್ಯಾದಾ ಕೃತ್ಯಗಳಿಗೆ ನಿಷೇಧ: ಜಾತಿ, ಸಂಸ್ಕೃತಿ, ಸಂಪ್ರದಾಯ, ಗೌರವದ ಹೆಸರಲ್ಲಿ ಯಾವುದೇ ವ್ಯಕ್ತಿ ಕೃತ್ಯಗಳನ್ನು ನಡೆಸುವ ಹಾಗಿಲ್ಲ. ಗೌರವ ಹತ್ಯೆಗಳಂತಹ ಅಪರಾಧಗಳು ಈ ಕಾನೂನಿನಲ್ಲಿ ನಿಷೇಧವಾಗಿದೆ. ಈ ಸಂಬಂಧ ವಿವಾಹಿತ ಅಥವ ಪ್ರೇಮಿಗಳಿಗೆ ಸಂಬಂಧಿಕರು, ಸ್ನೇಹಿತರ ಕೊಲೆ, ದೈಹಿಕ ಹಲ್ಲೆ ಮಾಡುವುದು ಮರ್ಯಾದಾ ಅಪರಾಧ ಎಂದು ಪರಿಗಣಿಸಲಾಗುತ್ತದೆ.

ಬಹಿಷ್ಕಾರವೂ ಶಿಕ್ಷಾರ್ಹ: ಜೋಡಿಗಳನ್ನು ಅಪಹರಣ ಮಾಡುವುದು, ಸಾಮಾಜಿಕ ಹಾಗೂ ಆರ್ಥಿಕ ಬಹಿಷ್ಕಾರ ಹಾಕುವುದು ಕಾನೂನು ಪ್ರಕಾರವಾಗಿ ಅಪರಾಧವಾಗಲಿದೆ ಅಲ್ಲದೆ ಬಲವಂತವಾಗಿ ಜೋಡಿಗಳು, ಅವರ ಕುಟುಂಬಸ್ಥರು, ಸಂಬಂಧಿಕರನ್ನು ಗ್ರಾಮ, ಮನೆ, ಪ್ರದೇಶಗಳಿಂದ ತೆರವು, ಸ್ಥಳಾಂತರ ಮಾಡುವುದು ಅಪರಾಧವಾಗಿರಲಿದೆ.

ಐದು ವರ್ಷ ಶಿಕ್ಷೆ: ಜೋಡಿಗಳ ಮರ್ಯಾದೆ ಹತ್ಯೆ ಮಾಡಿದರೆ ಕನಿಷ್ಠ ಐದು ವರ್ಷದ ಶಿಕ್ಷೆಗೊಳಗಾಗಲಿದ್ದಾರೆ. ಗಂಭೀರವಾಗಿ ಹಲ್ಲೆ, ಗಾಯ ಮಾಡಿದರೆ ಕನಿಷ್ಠ 3 ವರ್ಷ ಜೈಲು ಹಾಗೂ ಮೂರು ಲಕ್ಷದವರೆಗೆ ದಂಡ ವಿಧಿಸಲಾಗುತ್ತದೆ. ಸಣ್ಣಪುಟ್ಟ ಹಲ್ಲೆ ಮಾಡಿದರೆ ಕನಿಷ್ಠ ಎರಡು ವರ್ಷಗಳ ಕಠಿಣ ಸೆರೆಮನೆವಾಸ ಹಾಗೂ ಎರಡು ಲಕ್ಷ ವರೆಗಿನ ದಂಡ ವಿಧಿಸುವ ಅವಕಾಶವಿದೆ. ಅಷ್ಟೇ ಅಲ್ಲದೆ, ಜೀವ ಬೆದರಿಕೆ ಇರುವ ದಂಪತಿಗಳಿಗೆ ಪೊಲೀಸ್ ರಕ್ಷಣೆ. ಸುರಕ್ಷಿತ ಆಶ್ರಯ ನೀಡುವುದು ಕಡ್ಡಾಯವಾಗಿದೆ. ಜೊತೆಗೆ ವಿವಾಹದ ಆಮಿಷವೊಡ್ಡಿ, ಜಾತಿಯ ಕಾರಣ ನೀಡಿ ವಂಚಿಸಿದರೆ ಅದನ್ನು 'ಅತ್ಯಾಚಾರ' ಎಂದು ಪರಿಗಣಿಸಲು ಅವಕಾಶ ಇದೆ. ಅಂತರ್ಜಾತಿ/ಪ್ರೇಮ ವಿವಾಹಗಳನ್ನು ವಿರೋಧಿಸಿ ಪಂಚಾಯಿತಿ ಅಥವಾ ಗುಂಪು ಸೇರುವುದು ಕೂಡಾ ನಿಷಿದ್ಧವಾಗಿದೆ.

ಇವ ನಮ್ಮವ ವೇದಿಕೆ ಸ್ಥಾಪನೆ: ಅಂತರ್ಜಾತಿ ವಿವಾಹಗಳಿಗೆ ಗೌರವ ನೀಡಲು, ವೈಯಕ್ತಿಕ ಆಯ್ಕೆಗಳ ಮೇಲೆ ಜಾತಿ ಆಧಾರಿತ ಬಲವಂತದ ಬೇಧಭಾವವನ್ನು ತಡೆಯಲು ಹಾಗೂ ಅಂತರ್ಜಾತಿ ವಿವಾಹಗಳನ್ನು ನೆರವೇರಿಸಲು ಇವ ನಮ್ಮ ಇವ ನಮ್ಮವ ಎಂಬ ವೇದಿಕೆ ಸ್ಥಾಪಿಸುವ ಬಗ್ಗೆಯೂ ವಿಧೇಯಕದಲ್ಲಿ ಉಲ್ಲೇಖವಿದೆ.

ಮೈಸೂರು ಮಿತ್ರ

ಕುಕ್ಕರಹಳ್ಳಿಕೆರೆಗೆ ಹೊಂದಿಕೊಂಡಿರುವ ಆಸ್ತಿ ವಿವಾದ; ಮುಡಾ ಗೋಲ್‌ಮಾಲ್‌ಗೆ ಮತ್ತೊಂದು ಸಾಕ್ಷಿ

ಚಕ್ಕುಬಂದಿ, ನಕ್ಷೆಯಲ್ಲಿ ಕೆರೆ ಉಲ್ಲೇಖ ಮರೆಮಾಚಿ ಭೂ ಪರಿವರ್ತನೆ

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಸವಿತಾ ತಕರಾರು

- ಭೂ ಪರಿವರ್ತನೆ ವೇಳೆ ಸರ್ಕಾರದ ಗಮನಕ್ಕೂ ತಂದಿಲ್ಲ
- ಬಫರ್ ಝೋನ್‌ನಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಸಾಧ್ಯವೇ ಇಲ್ಲ
- ವಿಶ್ವವಿದ್ಯಾನಿಲಯದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನಿರಾಕರಣೆ
- ಕುಕ್ಕರಹಳ್ಳಿ ಕೆರೆ ಜೀವ ವೈವಿಧ್ಯತೆಯ ಸ್ಥಳವಾದ ಕಾರಣ ಕಟ್ಟಡ ನಿರ್ಮಿಸಬಾರದು



ಎಂ.ಕೆ.ಸವಿತಾ

ಮೈಸೂರು, ಮಾ.18(ಬಿಎಲ್‌ಯು)– ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗ ಮಂದಿರ ರಸ್ತೆ ಹೊಂದಿಕೊಂಡಿರುವ ವಿವಾದಿತ ಆಸ್ತಿಯನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡುವಾಗ ಚಕ್ಕುಬಂದಿಯಲ್ಲಿ ಕೆರೆ ಎಂಬುದನ್ನು ಮರೆ ಮಾಚಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ತಿಳಿಸಿದ್ದಾರೆ.



ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1945 ರಲ್ಲಿ ಮೈಸೂರು ಮಹಾರಾಜರು ಸುಮಾರು ಹತ್ತು ಎಕರೆಯನ್ನು ಕುಟುಂಬವೊಂದಕ್ಕೆ ಬರೆದುಕೊಟ್ಟಿದ್ದಾರೆ. ತರುವಾಯ 2008 ರಲ್ಲಿ ಉದ್ಯಾನವನ ಮತ್ತು ಬಯಲು ಪ್ರದೇಶದಿಂದ ವಾಣಿಜ್ಯ ವಲಯಕ್ಕೆ ಭೂ ಪರಿವರ್ತನೆ ಮಾಡಲು ಅಂದಿನ ಮುಡಾ ಸಭೆಯಲ್ಲಿ ಅನುಮೋದನೆಯಾಗಿದೆ. ಜೊತೆಗೆ 2010 ರಲ್ಲಿ ಸರ್ಕಾರ ಇದಕ್ಕೆ ಅನುಮತಿ ನೀಡಿದೆ ಎಂದು ತಿಳಿಸಿದರು.

ಆದರೆ ಭೂ ಪರಿವರ್ತನೆಯ ದಾಖಲಾತಿಯ ಚಕ್ಕುಬಂದಿಯಲ್ಲಿ ಪೂರ್ವಭಾಗದಲ್ಲಿ ಕೆರೆ ಇದೆ ಎಂಬುದನ್ನು ಉಲ್ಲೇಖಿಸಿಲ್ಲ. ಪೂರ್ವಕ್ಕೆ ಕೆರೆ ಇದೆ ಎಂದು ನಕ್ಷೆಯಲ್ಲಿ ಕೂಡ ನಮೂದು ಮಾಡಿಲ್ಲ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಕೂಡ ತಂದಿಲ್ಲ. ಕೆರೆ ಇದೆ ಎಂದು ಉಲ್ಲೇಖಿಸಿದ್ದರೆ ಪ್ರಾಯಶಃ ಸರ್ಕಾರ ಇದಕ್ಕೆ ಅನುಮೋದನೆ ನೀಡುತ್ತಿರಲಿಲ್ಲ ಎನ್ನಿಸುತ್ತದೆ ಎಂದು ಸವಿತಾ ಅವರು ಅಭಿಪ್ರಾಯಪಟ್ಟರು.

ಎಲ್ಲಕ್ಕಿಂತ ಮುಖ್ಯವಾಗಿ ಬಫರ್ ಜೋನ್‌ನಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡುವಂತಿಲ್ಲ. ಕೆರೆಯ ಬಂಡ್ ಏರಿಯಾದಿಂದ 100 ಅಡಿಯಲ್ಲಿ ಕಟ್ಟಡ ನಿರ್ಮಾಣ ಮಾಡುವಂತಿಲ್ಲ ಎಂದು ಸರ್ಕಾರದ ಸ್ಪಷ್ಟ ಆದೇಶವಿದೆ. ಹೀಗಿರುವಾಗ ಮುಡಾದವರು ಯಾವ ಆಧಾರದ ಮೇಲೆ ಭೂ ಪರಿವರ್ತನೆ ಮಾಡಿದ್ದಾರೆ ಎಂಬುದು ತಿಳಿಯುತ್ತಿಲ್ಲ ಎಂದರು.

ವಿಶ್ವವಿದ್ಯಾನಿಲಯದಿಂದ ಕಟ್ಟಡ ನಿರ್ಮಾಣ ಮಾಡಲು ಮುಂದಾಗಿದ್ದೆವು. ಆದರೆ ಬಫರ್ ಜೋನ್ ವ್ಯಾಪ್ತಿಯಲ್ಲಿ ಇರುವ ಕಾರಣ ಅಲ್ಲಿ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾಧಿಕಾರಿಗಳು ಅನುಮತಿ ನಿರಾಕರಿಸಿದರು. ಇಂತಹ ಕಟ್ಟುನಿಟ್ಟಿನ ಕಾನೂನು ಇರುವಾಗ ಬಫರ್ ಜೋನ್ ವ್ಯಾಪ್ತಿಯಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಹೇಗೆ ಭೂ ಪರಿವರ್ತನೆ ಮಾಡಿದ್ದಾರೆ ಎಂಬ ಪ್ರಶ್ನೆ ಎದುರಾಗಿದೆ ಎಂದು ತಿಳಿಸಿದರು.

ಆದರೆ ಕೆರೆ ಪಕ್ಕದ ಆ ಜಾಗವನ್ನು ತೋಟಗಾರಿಕೆಗೆ ಮಾತ್ರ ಬಳಸಿಕೊಳ್ಳುವಂತೆ ಈ ಆಸ್ತಿ ನೀಡಿದ ಮೈಸೂರು ಮಹಾರಾಜರು ಸ್ಪಷ್ಟವಾಗಿ ಷರತ್ತು ಹಾಕಿದ್ದಾರೆ. ಗೋವು ಸಾಕಾಣಿಕೆ, ಗೊಬ್ಬರ ಸಂಗ್ರಹಣೆ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ಮಾತ್ರ ಬಳಕೆಯಾಗಬೇಕು ಎಂದು ತಿಳಿಸಿದ್ದಾರೆ. ಈ ಷರತ್ತು ಉಲ್ಲಂಘಿಸಿ ಯಾವ ಆಧಾರದ ಮೇಲೆ ಅಲ್ಲಿ ಕಟ್ಟಡ ನಿರ್ಮಿಸುತ್ತಾರೆ ಎಂದು ಮರು ಪ್ರಶ್ನಿಸಿದರು.

ಕುಕ್ಕರಹಳ್ಳಿಕೆರೆ ಜೈವಿಕ ವೈವಿಧ್ಯತೆಯ ಸ್ಥಳ. ಅಪರೂಪದ ಪಕ್ಷಿ ಸಂಕುಲದ ಅವಾಸ ಸ್ಥಾನ. ಇಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಅವಕಾಶವೇ ಇಲ್ಲ. ಇಂತಹ ಹತ್ತು ಕಾನೂನು ನಿಯಮ ಇರುವಾಗ ಇದನ್ನು ಉಲ್ಲಂಘಿಸಿ ಅಲ್ಲಿ ಕಟ್ಟಡ ನಿರ್ಮಾಣ ಮಾಡುವಂತಿಲ್ಲ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಇಂತಹ ಹಲವು ಸ್ಪಷ್ಟನೆ ಕೋರಿ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದಿದ್ದೇವೆ. ಆದರೆ ಅಲ್ಲಿ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಸವಿತಾ ಅವರು ಸ್ಪಷ್ಟಪಡಿಸಿದರು.

ಈ ಆಸ್ತಿ ಸಂಬಂಧ ಯಾವುದೇ ದಾಖಲಾತಿ ಇಲ್ಲ

ಕೆರೆಗೆ ಹೊಂದಿಕೊಂಡಂತೆ ಇರುವ 2.20 ಎಕರೆಯನ್ನು 1945 ರಲ್ಲಿ ಮೈಸೂರು ಮಹಾರಾಜರು ನೀಡಿದ್ದಾರೆ ಎಂದು ಆ ಆಸ್ತಿ ಮಾಲೀಕರೆಂದು ಹೇಳಿಕೊಳ್ಳುವವರು ದಾಖಲಾತಿ ತೋರಿಸುತ್ತಿದ್ದಾರೆ. ಆದರೆ ಅಂದಿನ ಸಿಐಟಿಬಿ, ಮುಡಾ ಹಾಗೂ ಇಂದಿನ ಎಂಡಿಎ ಬಳಿ ಈ ಸಂಬಂಧ ಯಾವುದೇ ದಾಖಲಾತಿ ಇಲ್ಲ.

2008ರಲ್ಲಿ ಮುಡಾ ಸಭೆಯಲ್ಲಿ ಭೂ ಪರಿವರ್ತನೆಗೆ ಅನುಮತಿ ದೊರೆತಿದೆ, ಜೊತೆಗೆ 2010 ರಲ್ಲಿ ಸರ್ಕಾರ ಕೂಡ ಅನುಮೋದನೆ ನೀಡಿದೆ. ಆದರೆ ಈ ಆಸ್ತಿ ಪಕ್ಕದಲ್ಲಿ ಕೆರೆ ಇದೆ ಎಂಬುದನ್ನು ಉಲ್ಲೇಖಿಸಿಲ್ಲ. ಈ ವಿಚಾರದ ತಕರಾರು ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಿಂದ ನಮಗೆ ಯಾವುದೇ ಪತ್ರ ಇನ್ನು ಬಂದಿಲ್ಲ.

– ಕೆ.ಆರ್.ರಕ್ಷಿತ್, ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಂಚನಾ–2 (ತೆ)	4 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಕಾಶ್ (ಕ)	4 ಪ್ರದರ್ಶನಗಳು

ಮಾ.20, ಗುಬ್ಬಚ್ಚಿಗಳನ್ನು ಉಳಿಸೋಣ ಜಾಗೃತಿ

ಮೈಸೂರು, ಮಾ.18(ಎಂಕೆ)– ಮೈಸೂರಿನ ಬೋಗಾದಿಯಲ್ಲಿರುವ ಪೀಪಲ್ ಫಾರ್ ಅನಿಮಲ್ಸ್ ಆಶ್ರಯ ಕೇಂದ್ರದಲ್ಲಿ ಜೈನ್ ಜೀವದಯಾ ಚಾರಿಟಿ ಸಹಯೋಗದೊಂದಿಗೆ ವಿಶ್ವ ಗುಬ್ಬಚ್ಚಿ ದಿನದ ಅಂಗವಾಗಿ ಮಾ.20 ರಂದು 'ಗುಬ್ಬಚ್ಚಿಗಳನ್ನು ಉಳಿಸೋಣ' ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಅಂದು ಬೆಳಗ್ಗೆ 11.30 ರಿಂದ 1.30ರ ವರೆಗೆ ಕಾರ್ಯಕ್ರಮ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಸೀನಿಯರ್ ಪ್ರಾಣಿಕ್ ಹೀಲಿಂಗ್ ಟ್ರೈನರ್ ಬಿ.ವೈಭವ್ ಭಾಗವಹಿಸಲಿದ್ದಾರೆ. ನಗರೀಕರಣದಿಂದಾಗಿ ಕಾಣೆಯಾಗುತ್ತಿರುವ ಗುಬ್ಬಚ್ಚಿಗಳನ್ನು ಉಳಿಸು ಕುರಿತು ಅರಿವು ಮೂಡಿಸಲಾಗುವುದು. ಪರಿಸರ ಸ್ನೇಹಿ ಗಬ್ಬಚ್ಚಿ ಗೂಡುಗಳು ಹಾಗೂ ಪಕ್ಷಿಗಳು ಮತ್ತು ಪ್ರಾಣಿಗಳಿಗೆ ನೀರಿನ ಪಾತ್ರೆಗಳ ವಿತರಣೆ ಜೊತೆಗೆ ಕೊಕಿಲ ರಮೇಶ್ ಜೈನ್ ರಚಿತ ಗಬ್ಬಚ್ಚಿ ಥೀಮ್ ಬೋರ್ಡ್ ಗೇಮ್ ಕುರಿತು ತಿಳಿಸಲಾಗುವುದು.

ಗುಬ್ಬಚ್ಚಿಗಳು ಕೇವಲ ಹಕ್ಕಿಗಳಲ್ಲ ಅವು ಪರಿಸರದ ಆರೋಗ್ಯದ ಸೂಚಕಗಳು. ಅವುಗಳ ಉಳಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಒಂದು ನೀರಿನ ಪಾತ್ರೆ ಅಥವಾ ಒಂದು ಗೂಡು ಇಡುವುದರಿಂದ ಗುಬ್ಬಚ್ಚಿಗಳು ಮರಳಿ ಬರಬಹುದು ಎಂದು ಪೀಪಲ್ ಫಾರ್ ಅನಿಮಲ್ಸ್ ಮೈಸೂರು ವ್ಯವಸ್ಥಾಪಕ ಟ್ರಸ್ಟಿ ಸವಿತಾ ನಾಗಭೂಷಣ ತಿಳಿಸಿದ್ದಾರೆ.

ಏ.19, 20 ರಂದು ಬಸವ ಜಯಂತಿ ಅರ್ಥಪೂರ್ಣ ಆಚರಣೆ



ಬಸವ ಜಯಂತಿ ಆಚರಣೆಯ ಪೂರ್ವ ಸಿದ್ದತಾ ಸಭೆ ನಡೆಸಲಾಯಿತು.

ಮೈಸೂರು, ಮಾ.18(ಎಂಕೆ)– ಮೈಸೂರಿನಲ್ಲಿ ಏ.19 ಮತ್ತು 20 ರಂದು ಜರುಗುವ ಬಸವ ಜಯಂತಿಯನ್ನು ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಿಸಬೇಕು. ಈ ನಿಟ್ಟಿನಲ್ಲಿ ಒಕ್ಕೂಟ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳು, ಸದಸ್ಯರು ಹಾಗೂ ಪ್ರತಿಯೊಬ್ಬರ ಸಹಕಾರದ ಅಗತ್ಯವಿದೆ ಮೈಸೂರು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ತಿಳಿಸಿದ್ದಾರೆ.

ಮೈಸೂರಿನ ಭುಗತಗಳ್ಳಿಯ ದಾಸೋಹ ಭವನದಲ್ಲಿ ಮೈಸೂರು ಬಸವ ಬಳಗಗಳ ಒಕ್ಕೂಟ ವತಿಯಿಂದ ಬಸವ ಜಯಂತಿ ಆಚರಣೆಯ ಪೂರ್ವ ಸಿದ್ದತಾ ಸಭೆಯಲ್ಲಿ ಮಾತನಾಡಿದರು. ಇದೇ ವೇಳೆ 300ಕ್ಕೂ ಹೆಚ್ಚು ಮಂದಿಯನ್ನು ಮೈಸೂರು ತಾಲೂಕು ಪ್ರಚಾರ ಸಮಿತಿ ಪದಾಧಿಕಾರಿಗಳನ್ನಾಗಿ ನೇಮಕ ಮಾಡಲಾಯಿತು.

ಮೈಸೂರು ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಲೋಹಿತ್ ದೊರೆಸ್ವಾಮಿ, ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿರುಪಾಕ್ಷ, ಸಂಚಾಲಕ ಚಿಕ್ಕಹಳ್ಳಿ ದೇವರಾಜ್, ಭುಗುತಗಳ್ಳಿ ಮುಖಂಡ ಮಹದೇವಣ್ಣ, ತಾಲೂಕು ಪ್ರಚಾರ ಸಮಿತಿ ಪ್ರಧಾನ ಕಾರ್ಯದರ್ಶಿಗಳಾದ ಗೆಜ್ಜಗಳಿ ನಂಜಪ್ಪ, ಗಿರೀಶ್ ಮಾರ್ಬಳ್ಳಿ, ಗುರುಬಸಳ್ಳಿ ಹುಂಡಿ, ಹೋಬಳಿ ಅಧ್ಯಕ್ಷರಾದ ಮೋಹನ್ ಇಲವಾಲ, ಮಹೇಶ್, ಪಾಪಣ್ಣ ಮತ್ತಿತರರಿದ್ದರು.

ಮಾ.23 ವಿಶನ್ ಮೈಸೂರು–2025 ಗ್ರ್ಯಾಂಡ್ ಫಿನಾಲೆ

ಮೈಸೂರು ಅಭಿವೃದ್ಧಿಗೆ ಬಂದಿದ್ದ 317 ಐಡಿಯಾಗಳಲ್ಲಿ ಐದು ಐಡಿಯಾಗಳ ಆಯ್ಕೆ, ಮೂರಕ್ಕೆ ಬಹುಮಾನ

ಮೈಸೂರು, ಮಾ.18(ಜಿಎ)–ಮೈಸೂರಿನ ಅಭಿವೃದ್ಧಿಯನ್ನು ಕೇಂದ್ರವನ್ನಾಗಿಸಿಕೊಂಡು ಶ್ರೀ ಮಂಜುನಾಥೇಶ್ವರ ಇನ್ಸ್‌ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್(ಎಸ್‌ಡಿಎಂಐಎಂಡಿ) ವತಿಯಿಂದ ನಡೆದ ವಿಶನ್ ಮೈಸೂರು–2025 ಗ್ರ್ಯಾಂಡ್ ಫಿನಾಲೆಯನ್ನು ಮಾ.23ರಂದು ಸಂಜೆ 4 ಗಂಟೆಗೆ ಎಸ್‌ಡಿಎಂಐಎಂಡಿ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸಂಯೋಜಕ ಶ್ರೀವತ್ಸ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಡಿಆರ್‌ಸಿ ಸಿನಿಮಾಸ್ ಮ್ಯಾನೇಜಿಂಗ್ ಪಾಟ್ನರ್ ವೈಶಾಲಿ ಹನುಮಂತು, ಸೇಂಟ್ ಫಿಲೋಮಿನಾಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಫಾದರ್ ಲೆಸ್ಲಿ ಮೊರಾಸ್, ಎಸ್‌ಕೆಡಿಆರ್‌ಪಿಯ ಟ್ರಸ್ಟಿ ಡಾ.ಹರೀಶ್ ಕೃಷ್ಣಸ್ವಾಮಿ, ಏಮ್ ಹೈ ಕನ್ಸಲ್ಟಿಂಗ್ ಸಿಇಓ ರವಿಶಂಕರ್ ಗ್ರ್ಯಾಂಡ್ ಜ್ಯೂರಿಯಾಗಿ ಆಗಮಿಸಲಿದ್ದಾರೆ ಎಂದರು.

ವಿಶನ್ ಮೈಸೂರು–2025 ಮೈಸೂರಿನ ವಿವಿಧ ವಿಭಾಗಗಳ ಅಭಿವೃದ್ಧಿಗೆ ಅನುಗುಣವಾಗಿ ವಿಭಿನ್ನ ಯೋಜನೆಗಳನ್ನು ಆಹ್ವಾನಿಸಲಾಗಿತ್ತು. ಪ್ರಮುಖವಾಗಿ ಸಾರ್ವಜನಿಕರು, ವಿದ್ಯಾರ್ಥಿಗಳು, ಕಾರ್ಪೋರೇಟ್ ಸಂಸ್ಥೆ ಹಾಗೂ ಎನ್‌ಜಿಓ ಎಂಬ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿ ಐಡಿಯಾಗಳನ್ನು ಪಡೆದುಕೊಳ್ಳಲಾಯಿತು. ಅದರಲ್ಲಿ 317 ಐಡಿಯಾಗಳು ಬಂದಿದ್ದು ಅವುಗಳಲ್ಲಿ ಅಂತಿಮವಾಗಿ 5 ಐಡಿಯಾಗಳನ್ನು ಗ್ರ್ಯಾಂಡ್ ಫಿನಾಲೆಯಲ್ಲಿ ಪ್ರದರ್ಶಿಸಲಾಗುತ್ತದೆ. ಗ್ರ್ಯಾಂಡ್ ಜ್ಯೂಗಳು 3 ಐಡಿಯಾಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಿದ್ದಾರೆ ಎಂದರು.

ಐಡಿಯಾಗಳಲ್ಲಿ ಮೈಸೂರು ನಗರದ ಇತಿಹಾಸ, ಪರಂಪರೆ, ನಗರಕ್ಕೆ ಬೇಕಾದ ಅಭಿವೃದ್ಧಿ ಅವಶ್ಯಕತೆಗಳ ಕುರಿತಾಗಿವೆ. ಈಗಾಗಲೇ ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ಅಂತಿಮಗೊಂಡಿರುವ ಐಡಿಯಾಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿರುವ ಅವರು ಬಜೆಟ್‌ನಲ್ಲಿ ಸೇರಿಸುವ ಅವಕಾಶವಿದ್ದರೆ ಸೇರಿಸುತ್ತೇವೆ ಎಂಬ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪರೀಕ್ಷಿತ್, ಸುನಿಲ್, ಸಂಜಯ್, ತೇಜಸ್ ಮತ್ತಿತರರು ಉಪಸ್ಥಿತರಿದ್ದರು.

ಕುಡಿಯುವ ನೀರು ಸರಬರಾಜಿಗೆ ಆಗ್ರಹಿಸಿ ಪ್ರತಿಭಟನೆ



ಗಾಂಧಿನಗರ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.18(ಎಂಕೆ)– ಮೈಸೂರಿನ ಗಾಂಧಿನಗರಕ್ಕೆ ಸಮರ್ಪಕ ಕುಡಿಯುವ ನೀರು ಸರಬರಾಜಿಗೆ ಆಗ್ರಹಿಸಿ ಗಾಂಧಿನಗರ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಎನ್.ಆರ್ ಮೊಹಲ್ಲಾದ ಶಿವಾಜಿ ಉದ್ಯಾನವನದಲ್ಲಿರುವ ನೀರು ಸರಬರಾಜು ಕೇಂದ್ರದ ಎದುರು ಜಮಾಯಿಸಿದ ಸಮಿತಿ ಸದಸ್ಯರು, ಗಾಂಧಿನಗರಕ್ಕೆ ಹಲವು ದಿನಗಳಿಂದ ವ್ಯವಸ್ಥಿತವಾಗಿ ಕುಡಿಯುವ ನೀರು ಸರಬರಾಜು ಮಾಡುತ್ತಿಲ್ಲ ಎಂದು ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು.

ಈ ವೇಳೆ ಗಾಂಧಿನಗರ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಶರತ್ ಮಾತನಾಡಿ, ಗಾಂಧಿನಗರದ ಕೆಲವು ಭಾಗಗಳಿಗೆ ನೀರಿನ ಸಮಸ್ಯೆ ಉಂಟಾಗಿ ಹಲವಾರು ದಿನಗಳಾದರೂ ಸಮಸ್ಯೆ ಬಗೆಹರಿಸದ ಪಾಲಿಕೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ಈ ಕುರಿತು ಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಇಂಜಿನಿಯರ್‌ಗಳಾದ ಶಿಲ್ಪ ಮತ್ತು ನಾಗರಾಜೇಗೌಡ ಅವರಿಗೆ ತಿಳಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದ್ದಲ್ಲದೆ ಕೂಡಲೇ ಗಾಂಧಿನಗರದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಗಾಂಧಿನಗರ ನಿವಾಸಿಗಳಾದ ವಿಜಯ್, ರಾಜೇಶ್, ಕರ್ಣ, ಚೇತನ್, ಪೈಲ್ವಾನ್ ರೂಪೇಶ್, ರಾಕೇಶ್, ರಾಕಿ, ಅನಿಲ್, ವಿನೋದ್ ಸುನಿಲ್ ಬೈರಾ ಹೇಮಂತ್, ಕುಮಾರ್, ಹರೀಶ್, ರಾಜು, ಕ್ಯಾಪ್ಟನ್ ಶಿವಣ್ಣ ಮತ್ತಿತರರಿದ್ದರು.

ಯುಗಾದಿ ಸಂಭ್ರಮ: ಮಾರುಕಟ್ಟೆಗಳಲ್ಲಿ ಖರೀದಿ ಜೋರು



ಮೈಸೂರಿನ ಚಿಕ್ಕ ಗಡಿಯಾರದಲ್ಲಿ ಬುಧವಾರ ಹೂ–ಹಣ್ಣು, ತರಕಾರಿ ಜೊತೆಗೆ ಮಾವು ಮತ್ತು ಬೇವಿನ ಸೊಪ್ಪು ಖರೀದಿಸುತ್ತಿರುವುದು.

ಹೂ–ಹಣ್ಣು, ತರಕಾರಿಗೆ ಬೇಡಿಕೆ

ಮೈಸೂರು, ಮಾ.18(ಎಂಕೆ)– ಯುಗಾದಿ ಹೊಸ ವರ್ಷದ ಸಂಭ್ರಮದ ಹಬ್ಬ. ಹಿಂದೂ ಸಮಾಜದ ಬಂಧುಗಳಿಗೆ ಇದು ಪ್ರಮುಖ ಹಬ್ಬ. ಬೇವು–ಬೆಲ್ಲ ತಿಂದು ಆಚರಿಸುವ ಈ ಹಬ್ಬ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧ ಮಾರುಕಟ್ಟೆಗಳಲ್ಲಿ ಬುಧವಾರ ಹೂ–ಹಣ್ಣು ಮತ್ತು ತರಕಾರಿ ಖರೀದಿ ಜೋರಾಗಿತ್ತು.

ನಗರದ ದೇವರಾಜ ಮಾರುಕಟ್ಟೆ, ಅಗ್ರಹಾರದ ಚಿಕ್ಕ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ, ಮಂಡಿ ಮಾರುಕಟ್ಟೆ ಸೇರಿದಂತೆ ಧನ್ವಂತರಿ ರಸ್ತೆ, ಸಯ್ಯಾಜಿ ರಾವ್ ರಸ್ತೆ ಬದಿಯಲ್ಲಿ ಹೂ–ಹಣ್ಣು, ತರಕಾರಿ ಜೊತೆಗೆ ಮಾವು ಮತ್ತು ಬೇವಿನ ಸೊಪ್ಪು ಖರೀದಿಗೆ ಜನ ಮುಗಿ ಬಿದ್ದಿದ್ದರು.

ಹಬ್ಬ ಸಮೀಪವಾಗುತ್ತಿದ್ದಂತೆ ಬೆಲೆ ಏರಿಕೆಯಾಗುವ ಸೇವಂತಿಗೆ ಮತ್ತು ಸಣ್ಣ ಗುಲಾಬಿ ಸಹಿತ ಬಿಡಿ ಹೂಗಳಿಗೆ ಬೇಡಿಕೆ ಹೆಚ್ಚಾಗಿತ್ತು. ಅದರಂತೆ ಸೇವಂತಿಗೆ ಹೂ ಒಂದು ಮಾರಿಗೆ 80 ರಿಂದ 120 ರೂ. ನಂತೆ ಮಾರಾಟವಾದರೆ, 250 ಗ್ರಾಂ ಬಿಡಿ ಹೂ 80 ರೂ. ಇದ್ದರೆ ಹಬ್ಬದ ವಿಶೇಷವಾದ ಮಾವು ಮತ್ತು ಬೇವಿನ ಸೊಪ್ಪು ಕಟ್ಟಿಗೆ 20 ರೂ.ನಂತೆ ಮಾರಾಟ ಮಾಡಲಾಗುತ್ತಿತ್ತು.

ಹಾಗೆಯೇ ವಿಳ್ಯದೆಲೆ (20–25 ಎಲೆ) ಕಟ್ಟಿಗೆ 20 ರೂ., ಮಲ್ಲಿಗೆ ಮತ್ತು ಕನಕಾಂಬರ ಹೂ ಒಂದು ಮೀಟರ್‌ಗೆ 80 ರೂ.ನಂತೆ ಮಾರಾಟವಾಗುತ್ತಿತ್ತು. ಜೊತೆಗೆ ಚೆಂಡು ಹೂ ಕೆಜಿಗೆ 40 ರೂ. ಇದ್ದರೆ ಇನ್ನುಳಿದಂತೆ ಹೂಗಳ ಬೆಲೆಯಲ್ಲೂ ಕೊಂಚ ಏರಿಕೆಯಾಗಿದೆ.

ಹಬ್ಬದ ಜೊತೆಗೆ ಬೇಸಿಗೆ ಹಿನ್ನಲೆಯಲ್ಲಿ ಹಣ್ಣುಗಳ ಬೆಲೆ ಗಗನಕ್ಕೇರಿದ್ದು, ಪೂಜಾ ಕೈಂಕರ್ಯಕ್ಕೆ ಬಳಕೆ ಮಾಡಲು ಮಿಶ್ರಿತ ಹಣ್ಣುಗಳನ್ನು ಖರೀದಿ ಮಾಡುವಂತಾಗಿದೆ. ದೇವರಾಜ ಮಾರುಕಟ್ಟೆಯಲ್ಲಿ ಏಲಕ್ಕಿ ಬಾಳೆಹಣ್ಣು ಕೆಜಿಗೆ 100 ರೂ. ಇದ್ದರೆ, ನಂಜನಗೂಡು ರಸಬಾಳೆ ಕೆಜಿಗೆ 80 ರೂ., ಸೇಬು ಕೆಜಿಗೆ 250–280 ರೂ., ದಾಳಿಂಬೆ ಕೆಜಿಗೆ 280–300 ರೂ., ಮೊಸಂಬಿ 100 ರೂ., ಗ್ರೀನ್ ಆಪಲ್ 300–320 ರೂ., ಪೈನಾಪಲ್ 100 ರೂ., ದ್ರಾಕ್ಷಿ 250 ಗ್ರಾಂಗೆ 40–60 ರೂ., ಸೀಬೆ 160 ರೂ., ಬಟರ್ ಫ್ರೂಟ್ 360 ರೂ. ಹಾಗೂ ಕಲ್ಲಂಗಡಿ ಕೆಜಿಗೆ 40–50 ರೂ.ನಂತೆ ಮಾರಾಟ ಮಾಡಲಾಗುತ್ತಿದೆ.

ಮೆಣಸಿನಕಾಯಿ ಖಾರ ಜಾಸ್ತಿ!: ಕ್ಯಾರೆಟ್, ಬೀಟ್ರೂಟ್ ಮತ್ತು ಬೀನ್ಸ್ ಸೇರಿದಂತೆ ಇನ್ನಿತರೆ ತರಕಾರಿಗಳ ಬೆಲೆ ಯಥಾಸ್ಥಿತಿಯಲ್ಲಿದ್ದರೆ ಹಸಿಮೆಣಸಿನಕಾಯಿ ಬೆಲೆ ಏರಿಕೆಯಾಗಿದೆ ಎಪಿಎಂಸಿ ಮಾರುಕಟ್ಟೆಯಲ್ಲಿ ಕೆಜಿ ಹಸಿಮೆಣಸಿನಕಾಯಿ 40–50 ರೂ. ನಂತೆ ಹೋಲ್ ಸೇಲ್‌ನಲ್ಲಿ ಮಾರಾಟವಾದರೆ, ಇನ್ನಿತರೆ ಮಾರುಕಟ್ಟೆಗಳಲ್ಲಿ ಕೆಜಿಗೆ 80–120 ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ. ಮಳೆ ಮುನ್ಸೂಚನೆ ಹಿನ್ನಲೆ ಬೆಳಗ್ಗೆಯಿಂದ ಮಾರುಕಟ್ಟೆಗಳತ್ತ ದಾವಿಸದ ಜನರು, ಹೂ–ಹಣ್ಣು ಖರೀದಿಗೆ ಮುಗಿಬಿದ್ದರು. ಪೂಜಾ ಪದಾರ್ಥಗಳು, ತರಕಾರಿಕ್ಕಿಂತಲೂ ಹೂ ಮತ್ತು ಹಣ್ಣಿನ ವ್ಯಾಪಾರ ಜೋರಾಗಿತ್ತು.

ಶ್ರೀ ಜಯರಾಜೇಂದ್ರರಿಗೆ ಪಿಎಚ್.ಡಿ ಪದವಿ



ಮೈಸೂರು, ಮಾ.18 – ಪ್ರೊ. ಎಂ. ಡೇನಿಯಲ್ ಅವರ ಮಾರ್ಗದರ್ಶನದಲ್ಲಿ ಸುತ್ತೂರು ಶ್ರೀ ಮಠದ ಶ್ರೀ ಜಯರಾಜೇಂದ್ರ ಅವರು ತತ್ತ್ವಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಎಥಿಕ್ಸ್ ಇನ್ ದ ಭಕ್ತಿ ಮೂವ್‌ಮೆಂಟ್ಸ್ ಆಫ್ ಸೌತ್ ಇಂಡಿಯಾ– ಎ ಸ್ಟಡಿ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.


ಮಹಿಳಾ ಅಭಿಮಾನಿಗಳಿಂದ ಅಪ್ಪು ನೆನಪು ಕಾರ್ಯಕ್ರಮ



ಮೈಸೂರಿನ ಜೆ.ಪಿ ನಗರ– ಮಹದೇವಪುರದ ಚಾಮುಂಡೇಶ್ವರಿ ದೇವಸ್ಥಾನದ ಬಳಿ ಶ್ರೀಮತಿ ರಾಧಾ ಶಿವರಾಜು ನೇತೃತ್ವದಲ್ಲಿ ದಿವಂಗತ ಪುನೀತ್ ರಾಜ್ ಕುಮಾರ್ ಜನ್ಮದಿನಾಚರಣೆ ಅಂಗವಾಗಿ ಪುನೀತ್ ರಾಜಕುಮಾರ್ ನಟಿಸಿರುವ ಚಲನ ಚಿತ್ರಗಳ ಗೀತಾ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮುಖಂಡರಾದ ರಾಧ ಶಿವರಾಜು, ಭಾರತ್ ಭೀಮ್ ಸೇನೆ ಜಿಲ್ಲಾಧ್ಯಕ್ಷರಾದ ಮಹದೇವಮ್ಮ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಕಮಲ ನಟರಾಜ್ ಹಾಗೂ ಕನ್ನಡ ಸ್ವಾಭಿಮಾನಿ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷರು ಹಾಗೂ ಉದ್ಯಮಿಗಳಾದ ಮೈತ್ರಿರಾಜ್, ಪುಟ್ಟತಾಯಮ್ಮ ಶಿವಣ್ಣ, ನಾಗರತ್ನ ನಾಗರಾಜು, ಜಾನಪದ ಪರಿಷತ್ ಅಧ್ಯಕ್ಷರಾದ ಕ್ಯಾತನಹಳ್ಳಿ ಪ್ರಕಾಶ್, ನೀತು, ಕಾವ್ಯ ನಿತಿನ್, ಆನಂದ್, ರಮೇಶ್, ಶಿವು ಮತ್ತಿತರರು ಉಪಸ್ಥಿತರಿದ್ದರು.

ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ ಸಹಯೋಗದೊಂದಿಗೆ

ಕ್ಲಬ್‌ಫೂಟ್ ಸಮಸ್ಯೆ ಹೊಂದಿದ್ದ 19 ಮಕ್ಕಳಿಗೆ ಅಪೋಲೊ ಬಿಜಿಎಸ್‌ನಿಂದ ಯಶಸ್ವಿ ಸರ್ಜರಿ



ಶಸ್ತ್ರಚಿಕಿತ್ಸೆಗೆ ಒಳಗಾದ ಮಕ್ಕಳು ತಾವು ಸಮಸ್ಯೆಯಿಂದ ಚೇತರಿಕೊಳ್ಳುತ್ತಿರುವ ಅನುಭವವನ್ನು ಹಂಚಿಕೊಂಡರು ಮತ್ತು ಈ ಚಿಕಿತ್ಸೆ ನೀಡಿದ್ದಕ್ಕಾಗಿ ಕೃತಜ್ಞತೆಯನ್ನೂ ವ್ಯಕ್ತಪಡಿಸಿದರು.

ಮೈಸೂರು, ಮಾ.18(ಜಿಎ)–ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಸಹಯೋಗದೊಂದಿಗೆ ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್‌ನಿಂದ ಸೌಲಭ್ಯ ವಂಚಿತರ ಮಕ್ಕಳಿಗೆ 19 ಕ್ಲಬ್‌ಫೂಟ್ (ಪಾದದ ವಿರೂಪ) ನಿವಾರಣಾ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ ಎಂದು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಹಿರಿಯ ಉಪಾಧ್ಯಕ್ಷ ಮತ್ತು ಘಟಕದ ಮುಖ್ಯಸ್ಥ ಎನ್.ಜಿ. ಭರತೇಶ್ ರೆಡ್ಡಿ ತಿಳಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಅಪೋಲೊ ಆಸ್ಪತ್ರೆ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ ಮತ್ತು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ (ಸಿಎಸ್‌ಆರ್) ಬದ್ಧತೆಗೆ ಅನುಗುಣವಾಗಿ 20 ಸರ್ಜರಿಗಳನ್ನು ಕೈಗೊಳ್ಳುವ ಗುರಿ ಹೊಂದಲಾಗಿತ್ತು. ಅದರಂತೆ ಕ್ಲಬ್‌ಫೂಟ್ ಸಮಸ್ಯೆ ಹೊಂದಿದ್ದ ಮಕ್ಕಳಿಗೆ ಈ ಸರ್ಜರಿ ಮಾಡಲಾಗಿದೆ ಎಂದರು.

ಇಂತಹ ಸಹಯೋಗಗಳು ಸುಧಾರಿತ ವೈದ್ಯಕೀಯ ಸೇವೆ ಒದಗಿಸುವಲ್ಲಿ ಮತ್ತು ಮಕ್ಕಳಿಗೆ ಆರೋಗ್ಯಕರ ಜೀವನ ನಡೆಸಲು ಅನುವು ಮಾಡಿಕೊಡುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಸೇವಾ ಕಾರ್ಯವು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಮತ್ತು ವಿಶೇಷ ಆರೋಗ್ಯ ರಕ್ಷಣೆ ಹೇಗೆ ಸಮಾಜದ ಮೇಲೆ ಅರ್ಥಪೂರ್ಣ ಮತ್ತು ಶಾಶ್ವತ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ ಎಂದು ತಿಳಿಸಿದರು.

ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್‌ನ ಅಧ್ಯಕ್ಷರು ಮತ್ತು ಪೂರ್ಣಕಾಲಿಕ ನಿರ್ದೇಶಕ ನಾಗರಾಜ್ ಗರ್ಗೇಶ್ವರಿ ಮಾತನಾಡಿ, ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್‌ನಲ್ಲಿ ನಿಜವಾದ ಪ್ರಗತಿ ಎಂದರೆ ಕೇವಲ ವ್ಯವಹಾರಿಕ ಯಶಸ್ಸಿನಿಂದ ಮಾತ್ರವಲ್ಲ. ಸಮಾಜದಲ್ಲಿ ನಾವು ಉಂಟುಮಾಡುವ ಸಕಾರಾತ್ಮಕ ಪರಿಣಾಮದಿಂದ ಅಳೆಯಲಾಗುತ್ತದೆ ಎಂಬ ನಂಬಿಕೆ ನಮ್ಮದು. ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಗಳೊಂದಿಗೆ ಈ ಉಪಕ್ರಮದ ಮೂಲಕ ಕ್ಲಬ್‌ಫುಟ್‌ನಿಂದ ಬಳಲುತ್ತಿರುವ ಮಕ್ಕಳಿಗೆ ಜೀವನವನ್ನು ಬದಲಿಸುವ ಚಿಕಿತ್ಸೆಯನ್ನು ಬೆಂಬಲಿಸಲು ನಾವು ಹೆಮ್ಮೆಯಿಂದ ಮುಂದಾಗಿದ್ದೇವೆ. ಈ ಮಕ್ಕಳು ಆರೋಗ್ಯಕರ ಭವಿಷ್ಯದತ್ತ ಆತ್ಮವಿಶ್ವಾಸದಿಂದ ಹೆಜ್ಜೆ ಇಡುವುದನ್ನು ನೋಡುವುದು ನಮಗೆ ಅತ್ಯಂತ ತೃಪ್ತಿದಾಯಕವಾಗಿದೆ. ಇಂತಹ ಅರ್ಥಪೂರ್ಣ ಸಹಭಾಗಿತ್ವಗಳ ಮೂಲಕ ಸೇವೆಗೆ ಅಸಾಧ್ಯವಾಗಿರುವ ಸಮುದಾಯಗಳಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ತಲುಪಿಸಲು ನಾವು ಬದ್ಧರಾಗಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದ ಮಕ್ಕಳು ತಾವು ಸಮಸ್ಯೆಯಿಂದ ಚೇತರಿಕೊಳ್ಳುತ್ತಿರುವ ಅನುಭವವನ್ನು ಹಂಚಿಕೊಂಡರು ಮತ್ತು ಈ ಚಿಕಿತ್ಸೆ ನೀಡಿದ್ದಕ್ಕಾಗಿ ಕೃತಜ್ಞತೆಯನ್ನೂ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಕನ್ಸಲ್ಟೆಂಟ್ ಪೀಡಿಯಾಟ್ರಿಕ್ ಆರ್ಥೋಪಿಡಿಕ್ ಸರ್ಜನ್ ಡಾ.ಶ್ರೇಯಸ್ ಆಳ್ವಾ, ಆಟೋಮೋಟಿವ್ ಆಕ್ಸೆಲ್ಸ್‌ನ ಹಿರಿಯ ಪ್ರಧಾನ ವ್ಯವಸ್ಥಾಪಕ ವಿನಾಯಕ್ ಭಟ್, ಕಾನೂನು ಕಾರ್ಯದರ್ಶಿ ದೇವದಾಸ್ ಪಾಂಡಾ ಮತ್ತು ವೈದ್ಯಾಧಿಕಾರಿ ಡಾ.ಪ್ರಫುಲ್ ಅಂಜನ್ ಉಪಸ್ಥಿತರಿದ್ದರು.